ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಸಂಪುಟ 1 ಸಂಚಿಕೆ 29
ಡಿಸೆಂಬರ್ 16, 2007
ಕನ್ನಡ ವಾರಪತ್ರಿಕೆ
ರೂ. 5/-

ಪೇಜ್ 9



ಚಾರಿತ್ರಿಕ ಮಹಾಡ್ ಸತ್ಯಾಗ್ರಹಕ್ಕೆ ಸ್ಫೂರ್ತಿ
ದಾಸ್‌ಗಾಂವ್ ಸತ್ಯಾಗ್ರಹ

ಪೇಜ್ 8



ಪ್ರಗತಿ : ಮುಸ್ಲೀಮರ ಮುಂದಿರುವ ದಾರಿಯೇನು?



ಉಡುಪಿಯ ಸಾಹಿತ್ಯ ಸಮ್ಮೇಳನಗಳು : ತಪ್ಪಿನಿಂದ ತಪ್ಪನ್ನು ಸರಿಪಡಿಸಬಹುದೇ?

ಕರಾವಳಿಯನ್ನು ಉದ್ವಿಗ್ನಗೊಳಿಸುವ ಯತ್ನ

ಬಿಜೆಪಿ–ಜೆಡಿಎಸ್ ಸರ್ಕಾರದ ಶಿಕ್ಷಣ ದ್ರೋಹ

ವೆನುಜುವೆಲಾದಲ್ಲಿ ತಳಮಳ ಏಕೆ?

ಇದ್ದದ್ದು ಇದ್ದಾಂಗ....

ಖಾಸಗೀಕರಣ ಓ.ಕೆ...(!)



'ಸಾರ್ವಜನಿಕ ವಲಯವನ್ನು ಖಾಸಗೀಕರಣಗೊಳಿಸುವ ಮೂಲಕ ಮೀಸಲಾತಿಗೆ ಕೇಂದ್ರ ಸರ್ಕಾರ ಕುತ್ತು ತರುತ್ತಿದೆ. ನಮ್ಮ ಪಕ್ಷ ಖಾಸಗೀಕರಣಕ್ಕೆ ವಿರುದ್ಧವಾಗಿಲ್ಲ. ಆದರೆ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಖಾಸಗಿಯವರಿಗೆ ಒಪ್ಪಿಸುವಾಗ ಮೀಸಲಾತಿ ನೀತಿಗೆ ಬದ್ಧವಾಗಿರುವಂತೆ ನೋಡಿಕೊಳ್ಳಬೇಕು'

ಮಾಯಾವತಿ, ಬಿಎಸ್‌ಪಿ ನಾಯಕಿ,
ಉತ್ತರ ಪ್ರದೇಶದಮುಖ್ಯಮಂತ್ರಿ

★

ದಾನ ರಾಜಕೀಯ

'ಇಂದು ದಾನಿಗಳ ಹಾವಳಿ ಅಧಿಕವಾಗಿ ಬಿಟ್ಟಿದೆ. ಗಣಿಗಳಿಂದ ದಣಿಗಳಾದ ಬಳ್ಳಾರಿ ಜಿಲ್ಲೆಯ ಅನೇಕರು ಇಂದು ಪೈಪೋಟಿಯಲ್ಲಿ ದಾನ ಮಾಡುವ ಕೆಲಸದಲ್ಲಿ ತೊಡಗಿದ್ದಾರೆ. ಸರ್ಕಾರದ ಅನುದಾನ ಬರದಿದ್ದರೇನಂತೆ! ಏತ ನೀರಾವರಿ ಕಾಮಗಾರಿಗಳನ್ನು ಸ್ವಂತ ಹಣದಿಂದ ಮಾಡಿಸಿಕೊಡುವಂತಹ ಉದಾರಿ ಶಾಸಕರು ಇಂದು ಹುಟ್ಟಿಕೊಂಡಿದ್ದಾರೆ. ಒಳಚರಂಡಿ ವ್ಯವಸ್ಥೆಯನ್ನು ತಮ್ಮ ಹಣ ಹಾಕಿ ಮಾಡಿಕೊಡುವ ಜನಪ್ರತಿನಿಧಿಗಳು ಈಗ ದಂಡಿಯಾಗಿ ದೊರೆಯುತ್ತಾರೆ... ಇಲ್ಲಿ ನಮಗೆ ಎದುರಾಗುವ ಪ್ರಶ್ನೆಯೆಂದರೆ ಜನರು ಕುಡಿಯುವ ನೀರನ್ನು ತಮ್ಮ ಹಕ್ಕಾಗಿ ಒತ್ತಾಯಿಸಬೇಕೋ ಅಥವಾ ಬೇಡಿ ಪಡೆದುಕೊಳ್ಳಬೇಕೋ? ಎನ್ನುವುದು...'

– ಟಿ.ಆರ್.ಚಂದ್ರಶೇಖರ್,
ಪ್ರಜಾವಾಣಿಯ ಅಂಕಣದಲ್ಲಿ

★

ಮರು ಸಂಧಾನ ಮಾತುಕತೆ ಸಾಧ್ಯವಿಲ್ಲ

'ಎರಡೂ ರಾಷ್ಟ್ರಗಳ ಹಿತಾಸಕ್ತಿಗಳ ದೃಷ್ಟಿಯಿಂದ ಮಹತ್ವವಾಗಿರುವ ಭಾರತ ಮತ್ತು ಅಮೇರಿಕಾ ಮಧ್ಯೆಯ ಪರಮಾಣು ಒಪ್ಪಂದದ ಬಗ್ಗೆ ಮರು ಸಂಧಾನ ಮಾತುಕತೆ ಸಾಧ್ಯವಿಲ್ಲ'

– ನಿಕೋಲಸ್ ಬರ್ನ್ಸ್
ಅಮೇರಿಕಾದ ವಿದೇಶಾಂಗ ವ್ಯವಹಾರಗಳ ವಿಭಾಗದ ಅಧೀನ ಕಾರ್ಯದರ್ಶಿ

★

ಸಾಕಷ್ಟು ಅರ್ಥವಿದೆ

"ನೆರೆಯ ಪಾಕಿಸ್ತಾನದಲ್ಲಿ ಹೇರಿದ ತುರ್ತು ಪರಿಸ್ಥಿತಿಗೆ ಭಾರತದ ನಾಗರೀಕ ಸಮಾಜವು ಸೂಕ್ತವಾಗಿ ಸ್ಪಂದಿಸುವಲ್ಲಿ ವಿಫಲಗೊಂಡಿದೆ. ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳನ್ನು ದಮನ ಮಾಡಿರುವುದನ್ನು ವಿರೋಧಿಸದಿರುವುದಕ್ಕೆ ಮಾನವ ಹಕ್ಕು ಕಾರ್ಯಕರ್ತೆ ಅಸ್ಮಾ ಜಹಾಂಗೀರ್ ಅವರು ವಿಷಾದ ವ್ಯಕ್ತಪಡಿಸಿರುವುದರಲ್ಲಿ ಸಾಕಷ್ಟು ಅರ್ಥವಿದೆ."

– ಕುಲದೀಪ್ ನಯ್ಯರ್,
ಪ್ರಜಾವಾಣಿಯ 'ಅಂತರಂಗ' ಅಂಕಣದಲ್ಲಿ

★

ಯುದ್ಧೋತ್ಸಾಹ ಬೇಡ

ಅಮೇರಿಕದ ಗುಪ್ತಚರ ಏಜೆನ್ಸಿಗಳು ಇತ್ತೀಚೆಗೆ ಬಹಿರಂಗಪಡಿಸಿರುವ ವರದಿಯಂತೆ ಇರಾನ್ ತನ್ನ ಅಣ್ವಸ್ತ್ರ ನಿರ್ಮಾಣ ಕಾರ್ಯವನ್ನು ನಾಲ್ಕು ವರ್ಷಗಳ ಹಿಂದೆಯೇ ಸ್ಥಗಿತಗೊಳಿಸಿದೆ. ಆದರೆ ಅಮೇರಿಕಾದ ಅಧ್ಯಕ್ಷ ಜಾರ್ಜ್‌ಬುಷ್ ಮಾತ್ರ ಈ ವರದಿಯನ್ನು ಒಪ್ಪಲು ಸಾಧ್ಯವಿಲ್ಲ. ವರದಿ ಬಹಿರಂಗಗೊಂಡ ಹಿಂದೆಯೇ ಅವರು 'ಇರಾನ್ ಅಪಾಯಕಾರಿ ಯಾಗಿತ್ತು. ಅಪಾಯಕಾರಿಯಾಗಿದೆ ಮತ್ತು ಭವಿಷ್ಯದಲ್ಲೂ ಅದು ಅಪಾಯಕಾರಿ' ಎಂದಿದ್ದಾರೆ. ಕೆಲ ವರ್ಷಗಳ ಹಿಂದೆ ಅಮೇರಿಕಾದ ಅಧ್ಯಕ್ಷ ಬುಷ್ ಮತ್ತು ಉಪಾಧ್ಯಕ್ಷ ಡಿಕ್ ಚಿನೇ ಇರಾಕ್‌ನ ಬಗ್ಗೆಯೂ ಹೀಗೆ ಹೇಳಿದ್ದರು. ಮೇಲಿಂದ ಮೇಲೆ ವಿಶ್ವ ಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಕರು ಇರಾಕ್‌ನಲ್ಲಿ ತಪಾಸಣೆಗಳನ್ನು ನಡೆಸಿದ ನಂತರವೂ ಅದು ಸಮೂಹ ನಾಶಕ ಶಸ್ತ್ರಗಳನ್ನು ಹೊಂದಿದೆ ಎಂದು ಆರೋಪಿಸಿದ್ದರು. ಕೊನೆಗೊಮ್ಮೆ ಯುದ್ಧ ಸಾರಿ ಯುದ್ಧವಿನ್ನೂ ಮುಂದುವರಿಯುತ್ತಲೇ ಇದೆ"....

'ಉದಯವಾಣಿ' ಸಂಪಾದಕೀಯದಿಂದ

★

ಸಂಘ ಪರಿವಾರದ ಕಾರ್ಯಕ್ರಮ

'ಪ್ರಸಕ್ತ ಕನ್ನಡ ಸಾಹಿತ್ಯದಲ್ಲಿ ಜಾಗತೀಕರಣ, ಕೋಮುವಾದೀಕರಣಗಳಂತಹ ಅನಿಶ್ಚತತೆಗಳು ಪ್ರತಿಬಿಂಬಿತವಾಗಿವೆ. ಇಂತಹ ಆತಂಕಕಾರಿ ಸನ್ನಿವೇಶದಲ್ಲಿ ಇವುಗಳನ್ನು ದೂರ ಮಾಡುವ ಕಡೆ ನಮ್ಮ ಕನ್ನಡ ಸಾಹಿತ್ಯ ಸಮ್ಮೇಳನಗಳು ಗಮನ ಹರಿಸಬೇಕು. ಆದರೆ ಉಡುಪಿಯಲ್ಲಿ ಈ ಬಾರಿ ನಡೆಯುವ 74ನೇ ಸಾಹಿತ್ಯ ಸಮ್ಮೇಳನವು ಸಂಘ ಪರಿವಾರದ ಸಮ್ಮೇಳನವಾಗಿದೆ.'

– ಡಾ: ಜಿ.ರಾಮಕೃಷ್ಣ
ವಾರ್ತಾಭಾರತಿಯಿಂದ

ಚುಚ್ಚುಮದ್ದು

ನಿಜವೇ ಅಲ್ಲವೇ ?

■ 'ಅಧಿಕಾರದ ಆಸೆಯಿಂದ ತುಮಕೂರಿನಲ್ಲಿ ಧರ್ಮ ಯಾತ್ರೆಯಿಂದ ಓಡಿ ಬಂದೆ ಎಂದು ಕೆಲವರು ನಮ್ಮವರೇ ಹೇಳುವ ಮೂಲಕ ಪಿತೂರಿ ಮಾಡುತ್ತಾರೆ. ಏನೇನೋ ಸುದ್ದಿ ಹಬ್ಬಿಸಿ ಗೊಂದಲ ಹುಟ್ಟು ಹಾಕಲು ಯತ್ನಿಸುತ್ತಾರೆ'

– ಬಿ.ಎಸ್.ಯಡ್ಯೂರಪ್ಪ,, ಮಾಜಿ ಮುಖ್ಯಮಂತ್ರಿ

➤ ನಿಜವೇ ಅಲ್ಲವೇ?

★

ಬಾಯಿ ಮುಚ್ಚಿದರೆ?

■ ಯಡಿಯೂರಪ್ಪ ಬಾಯಿ ಮುಚ್ಚದಿದ್ದರೆ ಜನ್ಮ ಜಾಲಾಡುವೆ

– ಹೆಚ್.ಡಿ.ರೇವಣ್ಣ

➤ ಬಾಯಿ ಮುಚ್ಚಿದರೆ ಸುಮ್ಮನಾಗುವಿರೋ?

★

ಹಿಂದುತ್ವ ಚಿಂತನೆ

■ 'ಹಿಂದುತ್ವದ ಚಿಂತನೆ ಅಸ್ತಿತ್ವದಲ್ಲಿರುವುದು ಗುಜರಾತ್‌ನಲ್ಲಿ ಮಾತ್ರ. ಬಿಜೆಪಿ ಆಡಳಿತವಿರುವ ಬೇರೆ ರಾಜ್ಯಗಳಲ್ಲಿ ಅದನ್ನು ಪಾಲಿಸುತ್ತಿಲ್ಲ'.

– ಉಮಾಭಾರತಿ, ಭಾರತೀಯ ಜನಶಕ್ತಿ ಅಧ್ಯಕ್ಷೆ

➤ ಇದೇನು?! ಕರ್ನಾಟಕದ ಕರಾವಳಿಯಲ್ಲೂ ಹಿಂದುತ್ವ ಚಿಂತನೆ ಇಲ್ಲವೇ?

★

ಅನಿವಾರ್ಯ

■ ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಪತನ ಅನಿವಾರ್ಯ

– ತಥಾಗತ್ ರಾಯ್, ಪಶ್ಚಿಮಬಂಗಾಳದ ಬಿಜೆಪಿ ಅಧ್ಯಕ್ಷ

➤ ಅದನ್ನು ತೀರ್ಮಾನ ಮಾಡೋರು ಜನ ಅಲ್ಲವೇ?

★

ಆಗ್ರಹ

■ 'ಫೆಬ್ರವರಿಯಲ್ಲಿ ವಿಧಾನಸಭಾ ಚುನಾವಣೆಗೆ ಯಡಿಯೂರಪ್ಪ ಆಗ್ರಹ'.

– ಸುದ್ದಿ

➤ ತುಮಕೂರಿನಿಂದ ವೇದಿಕೆ ಬಿಟ್ಟು ರಾಜಭವನಕ್ಕೆ ಓಡಿ ಬಂದಾಗಲೇ ಇದ್ದ ಬದ್ದ ಅಲ್ಪಸ್ವಲ್ಪ ಅನುಕಂಪಾನೂ ಹೋಯ್ತು. ಯಾಕೆ ಸ್ವಾಮಿ ಆತುರ.

ಸಂಪಾದಕೀಯ

ಸಕ್ರಮ-ರಾಜ್ಯಪಾಲರು ಕೈಚೆಲ್ಲಿದ್ದಾಯಿತು

ಬೆಂಗಳೂರು ಒಳಗೊಂಡಂತೆ ರಾಜ್ಯದ ಎಲ್ಲಾ ನಗರಗಳಲ್ಲಿನ ವಸತಿ-ಕಟ್ಟಡಗಳನ್ನು ಸಕ್ರಮಗೊಳಿಸಲು ದಂಡಶುಲ್ಕ ಪಾವತಿ ವಸೂಲಿಗೆ ಆದೇಶ ಹೊರಡಿಸಿರುವ ಕ್ರಮವು ಸ್ಪಷ್ಟವಾಗಿಯೂ ಜನತೆಯನ್ನು ಲೂಟಿ ಮಾಡುವಂತಹ ಉದ್ದೇಶದ್ದು. ಹೊರವಲಯದ ನಾಗರಿಕರು ಇನ್ನೇನು ಮಹಾನಗರ ಪಾಲಿಕೆ -ಪುರಸಭೆಗಳ ವ್ಯಾಪ್ತಿಗೆ ಬಂದಿದ್ದರಿಂದ ತಮಗೆ ಸೌಲಭ್ಯಗಳು ಸಿಗಲಿವೆಯೆಂದು ನೆಮ್ಮದಿ ನಿಟ್ಟುಸಿರು ಬಿಟ್ಟವರ ನೆತ್ತಿಗೆ ಅಘಾತಕಾರಿ ಏಟನ್ನು ಇದು ನೀಡಿದೆ. ಬಹುತೇಕ ಕಂದಾಯ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಂಡವರೇ ಅಧಿಕ. ಮೇಲಾಗಿ ಬೆಂಗಳೂರು,ಮೈಸೂರು, ಮಂಗಳೂರಿನಂತಹ ಮಹಾನಗರಗಳಲ್ಲಿ ಸ್ಥಳದ ಅಭಾವ ಹಾಗೂ ಅದಕ್ಕೆ ಇರುವ ತೀವ್ರ ಕೊರತೆಗಳ ನಡುವೆ ಮನೆ ಕಟ್ಟುವಾಗ ಸಹಜವಾಗಿ ಒಂದಿಷ್ಟು ಲೋಪಗಳು ಆಗಿರುತ್ತವೆ. ವಿಶೇಷವಾಗಿ ಕಂದಾಯ ನಿವೇಶನಗಳಲ್ಲಿ ಅನುಕೂಲಗಳನ್ನು ನೋಡಿ ನಿರ್ಮಿಸಲಾಗಿರುತ್ತದೆ. 'ವಾಸ್ತು'ವಿನಂತಹ ಅವೈಜ್ಞಾನಿಕ ಅಂಶಗಳಿಗೆ ಜೋತು ಬೀಳುವ ನಾಗರಿಕರು ಖಂಡಿತಕ್ಕೂ ಪಾಲಿಕೆ ನೀಡಿದ ಯೋಜನೆಯಂತೆ ಕಟ್ಟಿರುವುದಿಲ್ಲ. ಹೀಗಾಗಿ ಶೇ. 90 ರಲ್ಲಿ ಜನರ ಕಟ್ಟಡಗಳು ಅಕ್ರಮಗಳೇ ಆಗಿಬಿಡುತ್ತವೆ.

ಇದಕ್ಕೆ ನಿಗದಿಪಡಿಸಿದ ಶುಲ್ಕಗಳು ಅತೀ ದುಬಾರಿ. 30x40 ಸೈಟ್‌ನಲ್ಲಿರುವ ಕಟ್ಟಡದಾರ 4 ರಿಂದ 5 ಲಕ್ಷ ಹಣ ಪಾವತಿಸಬೇಕಾಗುತ್ತದೆ ಎಂದರೆ, ಸಾಮಾನ್ಯ ಜನರು ಎಲ್ಲಿಂದ ತರಬೇಕು. ಮುಖ್ಯವಾಗಿ ಬಡಜನ, ದುಡಿವ ಜನ ಸಮೂಹವೇ ಇಂತಹ ಮನೆಗಳನ್ನು ನಿರ್ಮಿಸಿದ್ದು ನಿತ್ಯದ ಜೀವನ ನಡೆದರೆ ಸಾಕೆಂಬ ಸ್ಥಿತಿಯಲ್ಲಿರುವಾಗ ಈ ಹಣ ಎಲ್ಲಿಂದ ತರಬೇಕು. ಡಿಸೆಂಬರ್ 15 ರೊಳಗೆ ತುಂಬಲೇಬೇಕು. ಅದೇ ಕೊನೆಯದಿನವೆಂದು ಗಡುವು ವಿಧಿಸುವ ಸರ್ಕಾರ ಜನರ ಕಷ್ಟಗಳನ್ನು ಗಮನಕ್ಕೆ ತಿಳಿದುಕೊಳ್ಳಬೇಕಿತ್ತು.


ಉದಾರೀಕರಣ - ಖಾಸಗೀಕರಣಕ್ಕೆ ಬದ್ಧವಾಗಿ, ಪ್ರತಿಯೊಂದಕ್ಕೂ ವಿಶ್ವಬ್ಯಾಂಕ್, ಏಶಿಯನ್(ಎಡಿಬಿ) ಮುಂತಾದ ಅಭಿವೃದ್ಧಿ ಬ್ಯಾಂಕ್‌ಗಳ ಸಾಲವನ್ನೇ ನೆಚ್ಚಿ ಸಾಲದ ಬಲೆಗೆ ಜನರನ್ನು ಈ ಪಾಲಿಕೆ-ಸಂಸ್ಥೆಗಳು ನೂಕಿವೆ. ಸಾವಿರಾರು ಕೋಟಿ ರೂಪಾಯಿಗಳ ಸಾಲದ ಹೊರೆ ಇದೆ. ಮೇಲಾಗಿ ಜನರನ್ನು ವಂಚಿಸುವ ಹಲವು ಗಿಮಿಕ್ಸ್‌ಗಳ ಬಜೆಟ್‌ನ್ನು ಕುಮಾರಸ್ವಾಮಿ - ಯಡಿಯೂರಪ್ಪರನವರು ಕೊಟ್ಟು ಹೋಗಿದ್ದಾರೆ. ವಿದೇಶಿ ಸಂಸ್ಥೆಗಳಿಂದ ತಂದ ಸಾಲಕ್ಕೆ ಬಡ್ಡಿ ಕಟ್ಟಲಾಗದೇ ಪರಿತಪಿಸುವ ಸ್ಥಿತಿಗೆ ತಲುಪಲಾಗಿದೆ. ಹೀಗಾಗಿ ಜನತೆಯ ಮೇಲೆ ಹೊರೆ ಹೇರುವುದು, ಹಣ ದೋಚುವುದು ಇಂದಿನ ಆಡಳಿತ ನೀತಿಯಾಗಿದೆ. ಈಗಿನ 'ಸಕ್ರಮ' ದ ಯೋಜನೆಯೂ ಇಂತಹ ದುರಾಕ್ರಮವಾಗಿದೆ.

ಜನತೆಯನ್ನು ದೋಚುವ ಈ ಕ್ರಮದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದವು. ಈ ಪ್ರಶ್ನೆಯನ್ನು 'ಸರ್ಕಾರ' (ರಾಜ್ಯಪಾಲರು) ಪರಿಶೀಲಿಸಿ ಏನಾದರೊಂದು ಪರಿಹಾರಕ್ಕೆ ಕ್ರಮವಹಿಸಬಹುದೆಂದು ಆಶಿಸಲಾಗಿತ್ತು. ಆದರೆ ರಾಜ್ಯಪಾಲರು 'ಸಕ್ರಮ'ದ ಸುತ್ತ ಹಲವು ಅರ್ಜಿ ಪ್ರಕರಣಗಳು ನ್ಯಾಯಾಲಯದ ಮುಂದಿರುವುದರಿಂದ ತಾವು ಏನೂ ಕ್ರಮವಹಿಸುವುದು ಸಾಧ್ಯವಿಲ್ಲ ಎಂದು ನಿರ್ಧರಿಸಿದ್ದಾರೆ. ಕೊನೆ ದಿನಾಂಕ ಮುಂದೂಡಲು, ಶುಲ್ಕಗಳನ್ನು ಇಳಿಸುವ ವಿಷಯವು ನಮ್ಮ ವ್ಯಾಪ್ತಿಯಲ್ಲಿ ಇಲ್ಲವೆಂದು ಅದನ್ನು ಕೇಂದ್ರ ಸರ್ಕಾರವೇ ಸುಗ್ರೀವಾಜ್ಞೆ ಹೊರಡಿಸಬೇಕೆಂದು ಹೇಳಿದ್ದಾರೆ. ಈಗಾಗಲೇ ಕರ್ನಾಟಕದ ಅಭಿವೃದ್ಧಿ ಬಗ್ಗೆ ವಿಶೇಷ ಚರ್ಚೆ ನಡೆಸಿದ ಖ್ಯಾತಿಯ ಬೆಳಗಾವಿ ಅಧಿವೇಶನದಲ್ಲಿ ಇಂತಹ ವಸೂಲಾತಿಗೆ ಮಸೂದೆಯೊಂದು ಅಂಗೀಕಾರವಾಗಿದೆ. ಅದು ಸರ್ಕಾರ ಕ್ರಮವಹಿಸಲು ನಿರ್ಬಂಧಗಳನ್ನು ಹೇರುತ್ತಿದೆ ಎಂದು ಹೇಳಲಾಗಿದೆ.


ಸರ್ಕಾರ ಜನತೆಯನ್ನು ತಪ್ಪು ಮಾಡಲು ಬಿಟ್ಟು, ನಂತರ ಆ ತಪ್ಪನ್ನು ಸರಿಪಡಿಸಲು ಹೇರಳ ದುಡ್ಡು ದೋಚುವ, ಕೊನೆಗೆ ಅಸಹಾಯಕತೆ ವ್ಯಕ್ತಪಡಿಸುವುದು ಖಂಡನೀಯ.

ಈಗಲಾದರೂ ಸಾಧ್ಯವಿರುವ ಎಲ್ಲಾ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಂಡು ಜನರನ್ನು ರಕ್ಷಿಸಬೇಕು. ಹೊಸ ಜನಾದೇಶ ಪಡೆದು ಸರ್ಕಾರ ರಚಿತವಾದ ನಂತರ ನಿರ್ಧಾರ ಕೈಗೊಳ್ಳಲು ಅನುವು ಮಾಡಿಕೊಡಬೇಕು.

ನುಂಗಿದ ಭೂಮಿ ವಶಪಡಿಸಿಕೊಳ್ಳಲಿ



ಬೆಂಗಳೂರು ಮತ್ತು ಸುತ್ತಲಿನಲ್ಲಿ ಸರ್ಕಾರದ ಒಡೆತನದ ಭೂಮಿಯನ್ನು ಅಕ್ರಮವಾಗಿ ಕಬಳಿಸಿರುವ ಪ್ರಕರಣಗಳನ್ನು ಪತ್ತೆ ಹಚ್ಚಲು ನೇಮಿಸಲಾಗಿದ್ದ ಶಾಸಕ (ಮಾಜಿ) ಎ.ಟಿ.ರಾಮಸ್ವಾಮಿ ನೇತೃತ್ವದ ಶಾಸಕಾಂಗ ಸಮಿತಿಯು ಅಂತಿಮ ವರದಿಯನ್ನು ರಾಜ್ಯಪಾಲರು


ಅಂತಿಮ ವರದಿ ರಾಜ್ಯಪಾಲರಿಗೆ ಸಲ್ಲಿಸುವ ಮುನ್ನ


ಮತ್ತು ವಿಧಾನಸಭಾ ಅಧ್ಯಕ್ಷರಿಗೆ ಸಲ್ಲಿಸಿದೆ. ಈಗ ಪತ್ತೆ ಮಾಡಿದಂತೆ ಸುಮಾರು 41,303 ಎಕರೆ ಭೂಮಿಯನ್ನು 46,000 ಜನ ಕಬಳಿಸಿರುವುದು ಪತ್ತೆಯಾಗಿದೆ. ಇದರ ಮೌಲ್ಯವೇ 50 ಸಾವಿರ ಕೋಟಿ ರೂಪಾಯಿಗಳಾಗುತ್ತವೆ.

ಇಂತಹ ಭೂಮಿ ಕಬಳಿಸಿದವರು ಸಾಮಾನ್ಯರಲ್ಲ, ಅಸಮಾನ್ಯರೇ. 'ಅತಿಗಣ್ಯರು' 460 ಜನರಿದ್ದಾರೆ. ಇದರಲ್ಲಿ ರಾಜಕಾರಣಿಗಳು, ಉನ್ನತ ಅಧಿಕಾರಿಗಳು, ಸರ್ವಸಂಗ ಪರಿತ್ಯಾಗ ಮಾಡಿರುವ ಮಠಾಧೀಶರುಗಳು ಈ ಪಟ್ಟಿಯಲ್ಲಿದ್ದಾರೆ. ಇನ್‌ಫೋಸಿಸ್ ಕಂಪನಿಯಂತಹವುಗಳು, ಬಿಜೆಪಿಯ ಮುಖಂಡ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರ ಮಗ, ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾವ್ ಕುಟುಂಬ, ಅಂಜನಮೂರ್ತಿ, ಇ.ಕೃಷ್ಣಪ್ಪ ಅಲ್ಲದೇ ಆಡಳಿತ-ವಿರೋಧ ಪಕ್ಷಗಳ ಮುಖಂಡರು, ವಿಶೇಷವಾಗಿ ಆದಿಚುಂಚನಗಿರಿ ಮಠದ ಬಾಲಗಂಗಾಧರಸ್ವಾಮಿ, ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ನಂತಹ ಘಟಾನುಘಟಿ ಪರಿತ್ಯಾಗಿಗಳು ಇದ್ದಾರೆ. ಇಂತಹ ಕಬಳಿಕೆ ಸಾಧ್ಯವಾಗಿರುವುದು ಆಡಳಿತದ ಶಾಮೀಲು ತನದಿಂದ. ಇಂದು ಬೆಂಗಳೂರಿನಲ್ಲಿ ಲಕ್ಷಾಂತರ ಜನರಿಗೆ ವಾಸಕ್ಕೆ ಒಂದು ನಿವೇಶನವಿಲ್ಲ. ಇಂತಹ ಭೂಮಿಯನ್ನು ಬಡಜನರ ವಾಸಕ್ಕೆ ನೀಡಬೇಕೆಂದು ಚಳುವಳಿಯೂ ನಡೆದಿದೆ. ಆದರೆ ಸರ್ಕಾರ ಯಾವುದೇ ಕ್ರಮ ವಹಿಸಿಲ್ಲ.


ಎ.ಟಿ.ರಾಮಸ್ವಾಮಿ ಸಮಿತಿಯು ನೀಡಿರುವ ವರದಿಯಾಧಾರದಲ್ಲಿ ಕೂಡಲೇ ಸರ್ಕಾರ ಕ್ರಮವಹಿಸಿ ಅಕ್ರಮವಾಗಿ ಕಬಳಿಸಿರುವ ಭೂಮಿಯನ್ನು ವಶಪಡಿಸಿಕೊಂಡು ಸಾರ್ವಜನಿಕ ಉದ್ದೇಶಗಳಿಗಾಗಿ, ಬಡಜನರ ನಿವೇಶನಗಳಿಗಾಗಿ ಬಳಸಬೇಕು.


ಈ ವರದಿಯ ವಿರುದ್ಧ ಕಾಂಗ್ರೆಸ್, ಬಿಜೆಪಿ ಪಕ್ಷಗಳು ತಕರಾರು ಎತ್ತಿವೆ. ರಾಜ್ಯಪಾಲರು ಯಾವುದೇ ಒತ್ತಡಕ್ಕೆ ತಲೆಬಾಗದೆ ನಿಷ್ಠುರ ಕ್ರ ಮ ವಹಿಸಬೇಕು. ಹೀಗೆ ಆದೀತೆ ಎಂದು ಕಾದು ನೋಡಬೇಕು. ಅದಕ್ಕಾಗಿ ಜನರ ಒತ್ತಾಯ ತೀವ್ರಗೊಳ್ಳಬೇಕಾಗಿದೆ.

ಭೂಕಬಳಿಕೆಯಲ್ಲಿ ಹೆಸರಿಸಲಾಗಿರುವ ಬಿಜೆಪಿ ಮತ್ತು ಕಾಂಗ್ರೆಸ್ ಮುಖಂಡರು ಹಾಗೂ ಮಠಾಧೀಶರು


ಕಟ್ಟಾ ಸುಬ್ರಹ್ಮಣ್ಯ ನಾಯ್ಡು


ದಿನೇಶ್ ಗುಂಡೂರಾವ್


ರವಿಶಂಕರ್ ಗುರೂಜಿ


ಬಾಲಗಂಗಾಧರನಾಥ ಸ್ವಾಮೀಜಿ



ಮೌನ ಯಾಕೆ?

'ಸಮಿತಿ ಗುರುತಿಸಿದ ಭೂ ಕಬಳಿಕೆದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿರೋಧ ಪಕ್ಷವೂ ಸೇರಿದಂತೆ ಯಾರೊಬ್ಬರೂ ಒತ್ತಾಯ ಮಾಡದಿರುವುದು ಪರಿಸ್ಥಿತಿಗೆ ಕನ್ನಡಿ ಹಿಡಿದಿದೆ. ನಾಡಿನ ನೆಲವನ್ನು ಉಳಿಸಬೇಕಾದವರೇ ಮೌನವಾಗಿರುವುದು ಅತ್ಯಂತ ನೋವಿನ ವಿಷಯ'

– ಎ.ಟಿ.ರಾಮಸ್ವಾಮಿ

ಭೂಕಬಳಿಕೆ ಪತ್ತೆಗಾಗಿ ರಚಿಸಲಾಗಿದ್ದ ಜಂಟಿ ಆಯ್ಕೆ ಸಮಿತಿ ಅಧ್ಯಕ್ಷರು

ಬೆಂಗಳೂರು : ಅಕ್ರಮ - ಸಕ್ರಮ ಯೋಜನೆ ವಿರೋಧಿಸಿ ಪಾಲಿಕೆ ಕಛೇರಿ ಮುತ್ತಿಗೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿ ಹಂಚುವ ನಿವೇಶನಗಳಿಗೆ ಬಡವರು ಅರ್ಜಿ ಹಾಕುವಂತಿಲ್ಲ. ಕಷ್ಟಪಟ್ಟು ಹಾಕಿದರೂ ಸುಲಭಕ್ಕೆ ಎಲ್ಲರಿಗೂ ದಕ್ಕುವುದಿಲ್ಲ. ಬಡಬಗ್ಗರು, ಕೆಳಮಧ್ಯಮ ವರ್ಗದ ಜನರಿಗೆ ಖಾಸಗಿ ವ್ಯಕ್ತಿಗಳು, ಸಂಸ್ಥೆಗಳು ರಚಿಸಿಕೊಟ್ಟ ನಿವೇಶನಗಳೇ ಗತಿ. ಜೀವಮಾನವೆಲ್ಲಾ ದುಡಿದು ಹೇಗೋ ಏನೋ ಒಂದು ಮನೆ ಅಂತ ಕಟ್ಟಿಕೊಂಡರೆ ಈಗ ಮಹಾನಗರ ಪಾಲಿಕೆ ಕಾಟ. ನಾಲ್ಕು 'ಅಕ್ರಮ' ಗಳನ್ನು ಗುರುತಿಸಿ ಅದರ ಹೆಸರಿನಲ್ಲಿ ಜಾಹಿರಾತಿನ ಶುಲ್ಕವಾಗಿ 15 ಸಾವಿರ ರೂಪಾಯಿಗಳನ್ನು ವಸೂಲಿ ಮಾಡುವ ಕ್ರಮವನ್ನು ಕೈಬಿಡಬೇಕು ಎಂದು ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯು ತೀವ್ರವಾಗಿ ಪ್ರತಿಭಟಿಸಿತು. ನವೆಂಬರ್ 27 ರಂದು ನೂರಾರು ಸಿಪಿಐ(ಎಂ) ಕಾರ್ಯಕರ್ತರು ಪಾಲಿಕೆ ಕಛೇರಿಯ ಮುಂದೆ ಸೇರಿ ತೀವ್ರವಾಗಿ ಪ್ರತಿಭಟನೆ ನಡೆಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ



ಸಿಪಿಐ(ಎಂ) ನಿಂದ ಬೆಂಗಳೂರು ಮಹಾನಗರ ಪಾಲಿಕೆ ಕಚೇರಿ ಮುತ್ತಿಗೆ

ಜನರನ್ನು ದೋಚಲು ನಿಂತಿದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಬಹಳಷ್ಟು ಪ್ರಕರಣಗಳಲ್ಲಿ ಮನೆ ಕಟ್ಟುವಾಗ ಸಕ್ರಮವಾಗಿದ್ದದ್ದು ಈಗ ಅಕ್ರಮ ಹೇಗಾಗಿದೆ ಎಂಬುದು ಮುಗ್ಧ ನಿವಾಸಿಗಳಿಗೆ ಅರ್ಥವಾಗಲಾರದ ಒಗಟಾಗಿದೆ. ಬಿಜೆಪಿ-ಜೆಡಿ(ಎಸ್) ನೇತೃತ್ವದ ಸರ್ಕಾರದ ಜನರನ್ನು ಹಿಂಡುವ ತಂತ್ರ ಬಲ್ಲವರಿಗೆ ಇದು ಚೆನ್ನಾಗಿಯೇ ಅರ್ಥವಾಗಿದೆ.

ಈ ಸಂಬಂಧ ದುಬಾರಿ ಶುಲ್ಕಗಳನ್ನು ತೀವ್ರವಾಗಿ ಕಡಿತಗೊಳಿಸಬೇಕು, ಕಂತುಗಳಲ್ಲಿ ಪಾವತಿಸಲು ಅವಕಾಶ ನೀಡಬೇಕು. ನೀರು, ವಿದ್ಯುತ್ ಪೂರೈಕೆ ಕಡಿತ ಮಾಡುವಂತಹ ಕ್ರಮಗಳನ್ನು ಪಾಲಿಕೆ ಕೈಬಿಡಬೇಕು. ಜನರಿಂದ ಈ ಸಂಬಂಧದ ಸದಸ್ಯ ಜಿ.ಸಿ.ಬಯ್ಯಾರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಎನ್. ಉಮೇಶ್, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಮುಂತಾದವರು ಮಾತನಾಡಿದರು. ಎಚ್.ಎನ್.ಗೋಪಾಲಗೌಡ, ಗೋಪಿ, ರಾಜ್ಯ ಕಾರ್ಯದರ್ಶಿ ಮಂಡಳಿಯ ಮತ್ತೊಬ್ಬ ಸದಸ್ಯರಾದ ಎಸ್.ಪ್ರಸನ್ನಕುಮಾರ್ ಮುಂತಾದವರು ಭಾಗವಹಿಸಿದ್ದರು. ದಂಡ ಕಟ್ಟಲು ನೀಡಲಾಗಿರುವ ಗಡುವನ್ನು ವಿಸ್ತರಿಸಬೇಕೆಂದೂ ಒತ್ತಾಯಿಸಲಾಯಿತು. ಗೌರಮ್ಮ ಮನವಿ ನೀಡಿದರು.

ಪಾಲಿಕೆ ಪರವಾಗಿ ಆಯುಕ್ತರು ಮನವಿ ಸ್ವೀಕರಿಸಿ, ರಾಜ್ಯಪಾಲರಿಗೆ ರವಾನಿಸುವುದಾಗಿ ಭರವಸೆ ನೀಡಿದರು.

ಇವರಿಗೆ ಕಟ್ಟುವುದೊಂದೇ ಗೊತ್ತಿರುವುದಾ? ಇಲ್ಲ.....

14.11.2007ರಂದು ಹಟ್ಟಿ ಗ್ರಾಮದಲ್ಲಿ ವಿಶಿಷ್ಟ ಕಾರ್ಯಕ್ರಮ ಒಂದು ನಡೆಯಿತು. ಬುದ್ಧಿಜೀವಿ ಪಟ್ಟಕ್ಕೇರಿ ಅದರ ವಾರಸುದಾರರು ನಾವೇ ಎಂದು ಬೀಗುತ್ತಿದ್ದ ಕೆಲವರನ್ನು ಹುಬ್ಬೇರಿಸುವಂತೆ ಮಾಡಿತು. 'ಕಟ್ಟುವುದೊಂದೇ ಗೊತ್ತು' -ವಿಚಾರ ಇವರಿಗೇನು ಗೊತ್ತು ಅಂದು ಕೊಂಡವರಿಗಂತು ಇದೊಂದು ಆಶ್ಚರ್ಯವಾಗಿ ಕಂಡಿತು. ಕರಪತ್ರ ಕೈಗಿಟ್ಟೊಡನೇ ಅದನ್ನು ಓದಿ ಇವರಿಗೆ ಇದೂ ಕೂಡ ಬರುವುದೇ ಅಂಬಂತೆ ಕರಪತ್ರ ಕೊಟ್ಟವರ ಮುಖ ಮಿಕಿಮಿಕಿ ನೋಡುತ್ತಿದ್ದರು.

ನಿಗದಿಗೊಳಿಸಿದ 14ನೇ ತಾರೀಖು ಬಂದೇ ಬಿಟ್ಟಿತು. ಮುಂಜಾವಿನ ಮೈಚಳಿ ಕೊಡವಿ ಕಟ್ಟಡ ಕಾರ್ಮಿಕರು ಮೇಲೆದ್ದರು. ಆಫೀಸಿಗೆ ಬಂದು ಸೇರತೊಡಗಿದರು. 10.30ಕ್ಕೆ ಮೆರವಣಿಗೆ ಪ್ರಾರಂಭವಾಯಿತು. 150 ಜನರಿದ್ದ ಮೆರವಣಿಗೆಯ ಸಾಲು ಮುಂದೆ ಹೋದಂತೆಲ್ಲ ಹಿಗ್ಗ ತೊಡಗಿತು. ಊರಿನ ಪ್ರಮುಖ ಬೀದಿಗಳ ಮೂಲಕ ಡೊಳ್ಳಿನ ಕುಣಿತದೊಂದಿಗೆ ಲಿಂಗ ಅವಧೂತ ದೇವಸ್ಥಾನ ತಲುಪುವುದರೊಳಗೆ 300 ಜನರು ಮೆರವಣಿಗೆಯಲ್ಲಿ ಜಮಾಯಿಸಿದರು.

ಆಲ್ಲೊಂದು ವಿಚಾರ ಸಂಕಿರಣ :

ವಿಚಾರ ಸಂಕಿರಣವನ್ನು ಗುಂಡಪ್ಪಗೌಡ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ರಂಗಪ್ಪನಾಯಕ ವಹಿಸಿದ್ದರು. 'ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಹುಟ್ಟು ಮತ್ತು ಬೆಳವಣಿಗೆ' ಕುರಿತು ಕಾಂ:ನರಸಿಂಹಪ್ಪ ವಿಚಾರ ಮಂಡಿಸುತ್ತಾ ಆದಿ ಮಾನವನ ಜೀವನ ಶೈಲಿ ವಿವರಿಸಿದರು. ನಂತರ ಮನೆ ಮಾರು ಕಟ್ಟಿಕೊಳ್ಳುವಂತಹ ಬೆಳವಣಿಗೆ ಮತ್ತು ಇಂದಿನ ಕಾರ್ಮಿಕರ ಕಾರ್ಯನಿರ್ವಹಣೆ, ಕಷ್ಟಕರವಾದ ಜೀವನದ ಬಗ್ಗೆ ಹೇಳುತ್ತಾ ಬರೀ ಮನೆ ಕಟ್ಟುವುದಷ್ಟೇ ಅಲ್ಲ, ರಾಷ್ಟವನ್ನು ಕಟ್ಟಿದವರು ನೀವೇ ದುಡಿಯುವ ಜನ ಎಂದು ನೆರೆದವರಿಗೆ ಮನವರಿಕೆ ಮಾಡಿದರು.

ಕಾಂ: ಮಲ್ಲಯ್ಯ ಜಾಲಹಳ್ಳಿ, ಇವರು ಭಾರತದಲ್ಲಿ ಕಾರ್ಮಿಕರ ಪಾತ್ರ ಮತ್ತು ಜಾಗತೀಕರಣದ 'ತ್ರಿಕರಣ'ಗಳಿಂದಾದ ದುಷ್ಪರಿಣಾಮದ ಬಗ್ಗೆ ಎಳೆ ಎಳೆಯಾಗಿ ವಿವರಿಸುತ್ತಾ ಬಲ ಪಂಥೀಯ ರಾಜಕೀಯ ಪಕ್ಷಗಳ ಡೊಂಗೀತನವನ್ನು ಬಯಲಿಗಿಟ್ಟರು. ಇದನ್ನೆಲ್ಲಾ ಗೆಲ್ಲಲು ಹೋರಾಟ ಒಂದೇ ನಮಗೆ ಪ್ರಬಲ ಅಸ್ತ್ರ ಎಂದು ಮನವರಿಕೆ ಮಾಡಿದರು. ಕಾಂ: ಶಿವಾನಂದ ಇವರು ನಮ್ಮನ್ನು ಬಾಧಿಸುವ ಬೆಲೆ ಏರಿಕೆ, ನಿರುದ್ಯೋಗ, ಪಡಿತರ ಚೀಟಿ ವಸತಿ ನಿವೇಶನಕ್ಕಾಗಿ ಹೋರಾಡುವ ಅವಶ್ಯಕತೆ ಬಗ್ಗೆ ವಿವರಿಸಿದರು.

ಈ ವಿಚಾರ ರಾಜ್ಯಪಾಲರ ಅಂಗಳ ದಾಟಿ ರಾಜ್ಯದ ಹೈಕೋರ್ಟ್ ಅಂಗಳ ತಲುಪಿದೆ ಎನ್ನುವುದು ನಿಮಗೂ ಗೊತ್ತಿರಬಹುದು. ರಾಜ್ಯಪಾಲರು ನ್ಯಾಯಾಲಯದ ಅಭಿಪ್ರಾಯ ಕೇಳಿದ್ದಾರೆ. ಎಲ್ಲರ ಕಣ್ಣು ನ್ಯಾಯಾಲಯದ ಮೇಲೆ ನೆಟ್ಟಿದೆ.

ಗಣೆಗಾರ ಗಣರಾಯ


ಗಣೆಗಾರ ಗಣರಾಯ ಎಂಬವನ ಕೈಲಿ
ಕೊಡುತಿಹುದು ಸಹಜವೇ ಆ ಹಣದ ಥೈಲಿ
ಎಷ್ಟೆಂದರೂ ಅವನು ಗಣರಾಯ ನೋಡಿ
ಗಣೆಗಾರ ಕೈ ಮುಗಿದ ಕಪ್ಪವನು ನೀಡಿ

- ವಿಡಂಬಾರಿ

ಸಾಗರೋಲ್ಲಂಘನವೂ ಶ್ರೀ ಕೃಷ್ಣ ಪೂಜೆಯೂ

ಅಂತೂ ಇಂತು ಕರ್ನಾಟಕದಲ್ಲಿ ಒಂದಲ್ಲ ಒಂದು ನಾಟಕ ನಡಿತಾನೇ ಇರಬೇಕು. ಇತ್ತ ಯಡ್ಯೂರಪ್ಪ ಹಾಡಿದ್ದೇ ಹಾಡಿದ ಕಿಸೆಬಾಯಿ ದಾಸ ಅನ್ನುವ ಹಾಗೆ ಕಿರುಚಿಕೊಂಡು ಅಲೆದಾಡುತ್ತಿದ್ದಾರೆ. ಅತ್ತ ದಾಸಾನುದಾಸರ ಊರು ಉಡುಪಿಯಲ್ಲಿ ಹಳೆ ನಾಟಕದ ಹೊಸ ಅಂಕ ಶುರುವಾಗಿದೆ. ಎಲ್ಲಾ ಬೆಂಗಳೂರಿನಲ್ಲೇ ಕೇಂದ್ರೀಕೃತವಾಗಬಾರದು ಎಂಬ ಆಶಯ ಇದೇರಿಂದೆ? ಉಡುಪಿಯಲ್ಲಿ ಒಟ್ಟೊಟ್ಟಿಗೆ ಎರಡು ನಾಟಕ ಪ್ರಾರಂಭವಾಗಿದೆ. ಒಂದು ಸಾಹಿತ್ಯ ಸಮ್ಮೇಳನ ಮತ್ತೊಂದು ಪರ್ಯಾಯ ಸಾಹಿತ್ಯ ಸಮ್ಮೇಳನಕ್ಕಿಂತ ಕುತೂಹಲ ಕೆರಳಿಸಿರುವ ನಾಟಕ ಸ್ವಾಮೀಜಿಗಳದ್ದು. ಸಾಣೆಹಳ್ಳಿಯಲ್ಲಿ ಸ್ವಾಮೀಜಿ ರಂಗ ಕಲೆಗೆ ಪ್ರೋತ್ಸಾಹ ನೀಡಿ ಅಂತರಾಷ್ಟ್ರೀಯ ನಾಟಕೋತ್ಸವ ನಡೆಸುವ ಮಟ್ಟಕ್ಕೆ ಏರಿದ್ದಾರೆ. ಉಡುಪಿಯಲ್ಲಿ ಸ್ವಾಮೀಜಿಗಳು ತಾವೇ ಪಾತ್ರಧಾರಿಗಳಾಗಿ, ನಾಯಕ, ಖಳನಾಯಕ ವಿದೂಷಕರಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ 'ಸಾಗರೋಲ್ಲಂಘನವೂ ಪರ್ಯಾಯ ಶ್ರೀ ಕೃಷ್ಣ ಪೂಜೆಯೂ' ಎಂಬ ಪ್ರಸಂಗವನ್ನು ಅಭಿನಯಿಸುತ್ತಿದ್ದಾರೆ!

ಸಿನಿಮಾದಲ್ಲಿ ಆ ಭಾಷೆಯಿಂದ ಈ ಭಾಷೆಗೆ. ಈ ಭಾಷೆಯಿಂದ ಆ ಭಾಷೆಗೆ ರಿಮೇಕ್ ಮಾಡುವ ಪಿಡುಗು ಮಾಮೂಲು. ತಮಾಷೆಯೆಂದರೆ ಖಾದಿ ನಾಟಕದಲ್ಲಿ ಕಾವಿ ಪ್ರಸಂಗಗಳು, ಕಾವಿ ನಾಟಕದಲ್ಲಿ ಖಾದಿ ಪ್ರಸಂಗಗಳೂ ರಿಮೇಕ್ ಆಗುತ್ತಿರುವುದು ಕರ್ನಾಟಕದ ವಿಶೇಷ. ಕಾವಿಗಳೆಲ್ಲ ಹಿಂದೆ ಯಾವಾಗಲೋ ಕೃಷ್ಣಪೂಜೆಯ ಅಧಿಕಾರಕ್ಕಾಗಿ ಕಿತ್ತಾಡಿದ್ದಕ್ಕಾಗಿ ಬಹುಶಃ 'ಪರ್ಯಾಯ' ವ್ಯವಸ್ಥೆ ಜಾರಿಗೆ ಬಂದಿದೆ. (ಪರ್ಯಾಯ 20:20) ಇಂಥ ಪರ್ಯಾಯ ರಾಜಕೀಯ ಪ್ರಸಂಗ ರಿ[illegible]ಡಲು ಹೋಗಿ ಗಬ್ಬೆದ್ದು ಹೋಯಿತು. ಇತ್ತೀಚೆಗೆ ರಾಜಕೀಯದಲ್ಲಿ ಬಾಂಡ್ ಪೇಪರ್ ಪ್ರಹಸನ ನಡೆಯಿತಷ್ಟೇ? ಈಗ ಪರ್ಯಾಯ ವ್ಯವಸ್ಥೆ ಬಗ್ಗೆ ಕೆಲವು ಸ್ವಾಮೀಜಿಗಳು ಲಿಖಿತ ಸಂವಿಧಾನದ ಬಗ್ಗೆ (ಬಾಂಡ್ ಪೇಪರ್?) ಮಾತನಾಡುತ್ತಿದ್ದಾರೆ.



'ಹನ್ಮುಮಂತನೂ ಸಮುದ್ರೋಲಂಘನ ಮಾಡಿದ. ಅವನೂ ಅಪವಿತ್ರನೇ?' ಅಂತ ಹಾಕಿದ 'ಲಾ' ಪಾಯಿಂಟ್‌ಗೆ ವಿರೋಧಿಗಳ ಉತ್ತರವಿಲ್ಲ. (ಅದಕ್ಕೆ ರಾಮ ಸೇತುವೆ ಕಟ್ಟಿ ಸಮುದ್ರದಾಟಿದ ಅಂತ ಯಾರೂ ವಾದ ಮಂಡಿಸಿಲ್ಲ) ಸಮುದ್ರೋಲ್ಲಂಘನದ ವಿರೋಧಿಗಳಲ್ಲಿ ಯಾವ ಪ್ರಶ್ನೆಗಳಿಗೂ ಸರಿಯಾದ ಉತ್ತರವಿಲ್ಲ. ಆದರೂ ಅವರ ಬಿಗಿಪಟ್ಟು ಸ್ವಲ್ಪವೂ ಸಡಿಲಾಗಿಲ್ಲ. ಅವರ ಶಕ್ತಿಯ ಗುಟ್ಟೇನು? ಸಾಗರೋಲ್ಲಂಘನ ಮಾಡಿದ ಭಕ್ತಾದಿಗಳು ಸಾಗರದಾಚೆಯಿಂದ ಕಳುಹಿಸುವ ಝಣ ಝಣ ಡಾಲರ್‌ಗಳೇ, ಡಾಲರ್ ಲಕ್ಷ್ಮೀ ಎಂದೂ ಅಪವಿತ್ರಳಲ್ಲ! ಇಂಥ ಪವಿತ್ರ ಡಾಲರ್‌ಗಳಿಂದ ಬೆಳೆದಿರುವ ಸಂಸ್ಥೆ ವಿಶ್ವ ಹಿಂದೂ ಪರಿಷತ್ತು. ಈ ಪರಿಷತ್ತಿನ 'ವಿಶ್ವ' ದಲ್ಲಿ ಸಾಗರ ಸಮುದ್ರಗಳಿವೆಯೇ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಇದರ ಮುಖಂಡರು ಸಾಗರೋಲ್ಲಂಘನದ ಪರಮ ವಿರೋಧಿಗಳಾದ ಪೇಜಾವರರು.

ಏನೇ ಆಗಲಿ ಉಡುಪಿ ಮಠಕ್ಕೆ ಲಿಖಿತ ಸಂವಿಧಾನ ರಚಿಸುವಾಗ (ಬಾಂಡ್ ಪೇಪರ್‌ನಲ್ಲಿ?) ಸ್ವಾಮೀಜಿಗಳಿಗೆ ಭಕ್ತಾದಿಗಳು ಅರ್ಪಿಸಿದ ದಕ್ಷಿಣೆಯನ್ನು ಹೇಗೆ ಬಡ್ಡಿಗೆ ಕೊಡಬೇಕು. ಸರಿಯಾಗಿ ಬಡ್ಡಿ, ಅಸಲು ಕೊಡದಿದ್ದಾಗ ಅವರನ್ನು ಹೇಗೆ ಮಟ್ಟ ಹಾಕಿಸಬೇಕು, ರಾಜಕೀಯದಲ್ಲಿ ಯಾವ ಪಕ್ಷವನ್ನು ಬೆಂಬಲಿಸಬೇಕು. ಯಾವ ಯಾವ ಸಂದರ್ಭದಲ್ಲಿ ಎಂತೆಂಥಾ ರಾಜಕೀಯ ಮಾಡಬೇಕು. ವ್ಯಾಸಿದಿ, ಗೋಪುರ ಮುಂತಾದುವನ್ನು ಕೆಡವುವಾಗ ಹೇಗೆ ಮುಂದಾಳತ್ವ ವಹಿಸಬೇಕು. ಸ್ವಾಮೀಜಿಗಳಿಗಾಗಿ ಕೃಷ್ಣಪೂಜೆ ಹಾಗೂ 'ಕೃಷ್ಣಲೀಲಾ ವಿಧಾನ'ಗಳು ಮುಂತಾದ ವಿಷಯಗಳ ಬಗ್ಗೆ ನಮೂದಿಸಿದರೆ ಒಳ್ಳೆಯದು.

ಉಡುಪಿ ಪರ್ಯಾಯವೆಂದರೆ ನಾಲ್ಕು ದಿನದ ಜಾತ್ರೆ ಮಾತ್ರ ಆಗದೆ ತಿಂಗಳು ಮುಂಚೆನಿಂದ ಸಾರ್ವಜನಿಕರಿಗೆ ಮನರಂಜನೆ ಒದಗಿಸುತ್ತಿರುವುದಕ್ಕಾಗಿ ಧನ್ಯವಾದಗಳು.

- ಶ್ರೀ

ಕರಾವಳಿ ಮತ್ತೆ ಉದ್ವಿಗ್ನ

ಕೋಮುಗಲಭೆಗಳಿಂದಾದ ಗಾಯಗಳಿಂದ ನಲುಗಿರುವ ಕರಾವಳಿಯಲ್ಲಿ ಗಾಯದ ಮೇಲೆ ಬರೆ ಹಾಕುವ ಯತ್ನ ಆಗಾಗ ನಡೆಯುತ್ತಲೇ ಇರುತ್ತದೆ

ಸ್ವಲ್ಪ ಸಮಯ ಶಾಂತವಾಗಿದ್ದ ಕರಾವಳಿ ಮತ್ತೆ ಕೋಮು ಉದ್ವಿಗ್ನತೆಗೆ ಒಳಗಾಗಿದೆ. ಕಳೆದ ವರ್ಷ ನಡೆದ ಕೋಮು ಘರ್ಷಣೆಯ ನಂತರ ಕರಾವಳಿ ಸ್ವಲ್ಪ ಮಟ್ಟಿಗೆ ಶಾಂತವಾಗಿತ್ತು. ಆ ಸಂದರ್ಭದಲ್ಲಿ ಉಂಟಾದ ವಾರದ ಕರ್ಫ್ಯೂ ತಂದ ಸಂಕಟದಿಂದಾಗಿ ಜನಕೋಮು ಪ್ರಚೋದಕರಿಂದ ದೂರವೇ ಉಳಿದಿದ್ದಾರೆ. ಪೋಲಿಸ್, ಕೋರ್ಟ್, ಕಛೇರಿ ಅಲೆದು ಯುವಜನರು ಸುಸ್ತಾಗಿದ್ದಾರೆ.

ಆದರೆ ಡಿ.6ನ್ನು ನೆಪವಾಗಿಟ್ಟುಕೊಂಡು ಮತ್ತೆ ಕೋಮುಗಲಭೆ ನಡೆಸಲು ಪ್ರಯತ್ನಿಸಲಾಯಿತು. ಇದೆಲ್ಲಾ ಶುರುವಾದದ್ದು ತಿಂಗಳ ಹಿಂದೆ ಪಡುಬಿದ್ರೆಯ ಭಜರಂಗಿ ನಾಯಕ ಪ್ರಕಾಶನ ಮೇಲೆ ನಡೆದ ಮಾರಣಾಂತಿಕ ಹಲ್ಲೆಯಿಂದ, ಪಡುಬಿದ್ರೆಯ ಮುಸಲ್ಮಾನರಿಗೆ ನಿರಂತರ ಕಿರುಕುಳ ನೀಡಿ ಮೆರೆಯುತ್ತಿದ್ದ ಪ್ರಕಾಶನಿಗೆ ಪಲ್ಸರ್ ಬೈಕಿನಲ್ಲಿ ಬಂದ ಹೆಲ್ಮೆಟ್ ಧಾರಿಗಳು ಕೊಲೆ ಮಾಡುವ ಉದ್ದೇಶದಿಂದ ಭೀಕರ ಹಲ್ಲೆ ನಡೆಸಿದರು. ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿ ಭಜರಂಗಿಗಳು ನಿರಂತರ ಕೋಮು ಪ್ರಚೋದಕ ಪ್ರತಿಭಟನೆಗಳನ್ನು ನಡೆಸಿದರೂ ಆರೋಪಿಗಳ ಪತ್ತೆಯಾಗಲಿಲ್ಲ. ಗಲಭೆಯೂ ನಡೆಯಲಿಲ್ಲ. ಕಳೆದ ವಾರ ಮತ್ತೆ ಭಂಟ್ವಾಳದಲ್ಲಿ ಅಯ್ಯಪ್ಪ ವ್ರತಧಾರಿ ಹೂವಿನ ವ್ಯಾಪಾರಿಯ ಮೇಲೆ ಬೆಳಗಿನ ಜಾವ ಪಲ್ಸರ್ ಬೈಕಿನಲ್ಲಿ ಬಂದ ಹೆಲ್ಮೆಟ್‌ಧಾರಿಗಳು ಮಾರಕಾಯುಧ ದಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದರು. ಯಥಾ ಪ್ರಕಾರ ಭಜರಂಗಿಗಳು ಮಾಜಿ ಉಸ್ತುವಾರಿ ಮಂತ್ರಿ ನಾಗರಾಜಶೆಟ್ಟಿಯ ನೇತೃತ್ವದಲ್ಲಿ ಗಲಭೆಗೆ ಪ್ರಯತ್ನಪಟ್ಟರೂ ಜನರ ನಿರಾಸಕ್ತಿಯಿಂದ ಗಲಭೆ ನಡೆಯಲಿಲ್ಲ. ಇಲ್ಲಿಯವರೆಗೆ ಆರೋಪಿಗಳೂ ಪತ್ತೆಯಾಗಲಿಲ್ಲ.

ಆದರ ಬೆನ್ನಿಗೆ ಸುಖಾನಂದಶೆಟ್ಟಿಯ ಮರಣದ ವಾರ್ಷಿಕ ದಿನವನ್ನು ನೆಪವಾಗಿಟ್ಟುಕೊಂಡು ಸಂಘ ಪರಿವಾರ ಮುಲ್ಕಿಯಲ್ಲಿ ವೀರ ದಿನವನ್ನು ಆಚರಿಸಿತು. ಮಂಗಳೂರಿನಾದ್ಯಂತ ಪೋಸ್ಟರ್ ಬ್ಯಾನರ್‌ಗಳನ್ನು ಹಾಕಲಾಯಿತು. ಜನ ಸಾಮಾನ್ಯರು ಉಸಿರು ಬಿಗಿ ಹಿಡಿದಿದ್ದರು. ಗಲಾಟೆಗಳು ನಡೆಯುವ ಇದೂ ಸಹ ಮುಕ್ತಾಯವಾಯಿತು.

ಕದನ ಕುತೂಹಲಿ ಕೆಎಫ್‌ಡಿ

ನಂತರ ನಡೆದದ್ದೇ ಡಿಸೆಂಬರ್ 6ರ ನೆಪದಲ್ಲಿ ಗಲಭೆಗೆ ಯತ್ನ, ಕದನ ಕುತೂಹಲಿ ಕೆಎಫ್‌ಡಿ ಮುಸ್ಲಿಂರ ಮಧ್ಯೆ ನೆಲೆ ಕಂಡುಕೊಂಡ ನಂತರ ಕರಾವಳಿಯ ಕೋಮು ಕದನದ ಚಿತ್ರಣವೇ ಬದಲಾಗಿ ಹೋಗಿದೆ. ಭಜರಂಗಿಗಳಿಂದ ನಿರಂತರ ಪೆಟ್ಟು ತಿನ್ನುತ್ತಿದ್ದ ಮುಸ್ಲಿಮರ ಅಸಹಾಯಕತೆಯನ್ನೇ ಬಳಸಿಕೊಂಡು ಕೆಎಫ್‌ಡಿ ನೆಲೆ ವಿಸ್ತರಿಸಿದೆ. ಮುಸ್ಲಿಂ ಯುವಕರ ಹತಾಶೆ, ಆಕ್ರೋಶವನ್ನು ಬಳಸಿಕೊಂಡು ಕೆಎಫ್‌ಡಿ ಕುರುದ್ವೇಷವನ್ನು ಮುಸ್ಲಿಂ ಯುವಕರಲ್ಲಿ ಮೂಡಿಸುತ್ತಿದೆ. ಮುಸ್ಲಿಮರ ಭಜರಂಗದಳ ಎಂಬ ಕುಖ್ಯಾತಿಯನ್ನು ಗಳಿಸಿರುವ ಕೆಎಫ್‌ಡಿ ಭಜರಂಗಿಗಳ ರೀತಿಯಲ್ಲೇ ದಾಳಿ, ಚಟುವಟಿಕೆಯನ್ನು ನಡೆಸುತ್ತಿದೆ. ಪೋಸ್ಟರ್‌ನ್ನು ಅಂಟಿಸುವ ಸಂಬಂಧ ಮೂಲ್ಕಿಯಲ್ಲಿ ಕೆಎಫ್‌ಡಿ, ಭಜರಂಗಿ ಕಾರ್ಯಕರ್ತರು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಜಿಲ್ಲೆಯ ಅಲ್ಲಲ್ಲಿ ಕೆಎಫ್‌ಡಿಯ ಪೋಸ್ಟರ್‌ನ್ನು ಹರಿಯಲಾಯಿತು. ವಿಟ್ಲ ಸಮೀಪ ಪೋಸ್ಟರ್ ಹರಿದರು ಎಂಬ ಕಾರಣವನ್ನು ಒಡ್ಡಿ ಹಿಂದೂ ಹುಡುಗರ ಮೇಲೆ ಕೆಎಫ್‌ಡಿ ಕಾರ್ಯಕರ್ತರು ಗಂಭೀರ ಹಲ್ಲೆ ನಡೆಸಿದರು. ಇಲ್ಲಿಂದಲೇ ಜಿಲ್ಲೆ ಉದ್ವಿಗ್ನಗೊಳ್ಳತೊಡಗಿತು.





ಕೆಎಫ್‌ಡಿ ಪೋಸ್ಟರ್‌ಗಳಿಗೆ ಪ್ರತಿಯಾಗಿ ಸಂಘ ಪರಿವಾರ ವಿಜಯೋತ್ಸವ ಎಂಬ ತಲೆಬರಹದ ಪೋಸ್ಟರ್‌ನ್ನು ಅಂಟಿಸಿತು. ಇಲ್ಲಿಯ ವಿಶೇಷವೆಂದರೆ ಕೆಎಫ್‌ಡಿಯ ಪೋಸ್ಟರಿಗೆ ಮುಸ್ಲಿಂ ಸಮುದಾಯದಲ್ಲೇ ವ್ಯಾಪಕ ವಿರೋಧ ವ್ಯಕ್ತವಾಯಿತು. ಮುಸ್ಲಿಂ ಮೊಹಲ್ಲಾಗಳಲ್ಲಿದ್ದ ಕೆಎಫ್‌ಡಿ ಪೋಸ್ಟರ್‌ಗಳನ್ನು ಮುಸ್ಲಿಮರೇ ನಾಶ ಮಾಡಿದ್ದಾರೆ.

ಸರಣಿ ಹಲ್ಲೆ

ಒಟ್ಟು ಪರಿಸ್ಥಿತಿ ವಿಕೋಪಕ್ಕೆ ಹೋದದ್ದು, ಸುರತ್ಕಲ್‌ನಲ್ಲಿ. 98ರ ಗಲಭೆಯಿಂದ ಕುಖ್ಯಾತವಾಗಿದ್ದ ಸುರತ್ಕಲ್ ಆ ನಂತರ ಹೆಚ್ಚು ಕಡಿಮೆ ದೊಡ್ಡ ಗಲಭೆಗಳಿಲ್ಲದೆ ಶಾಂತವಾಗಿತ್ತು. ಕಳೆದ ಚುನಾವಣೆಯಲ್ಲಿ ಕಪ್ಪು ಹಣದ ಕುಬೇರ ಕೃಷ್ಣ ಪಾಲೇಮಾರ್ ಎಂಬ 'ಮುಸ್ಲಿಮರ ಮಿತ್ರ' ಶಾಸಕರಾದ ನಂತರ ಭಜರಂಗಿ ನಾಯಕರು ದುಡ್ಡು ಮಾಡಿಕೊಂಡು ಸುಖವಾಗಿದ್ದಾರೆ. ದುಡ್ಡು ಮಾಡುವುದರಲ್ಲಿ ಮೈ ಮರೆತು ಗಲಾಟೆಯ 'ರಿಸ್ಕ್'ನಿಂದ ದೂರವಾಗಿ ರಾಜಿ ಪಂಚಾಯಿತಿಕೆಯಲ್ಲಿ ತೊಡಗಿದ್ದಾರೆ. ಸುರತ್ಕಲ್‌ನಲ್ಲಿ ನಾಲ್ಕನೇ ತಾರೀಖು ಬೆಳಗಿನ ಜಾವ 2 ಪಲ್ಸರ್ ಬೈಕ್‌ನಲ್ಲಿ ಬಂದ ಹೆಲ್ಮೆಟ್‌ಧಾರಿಗಳು ಸುಖಾನಂದನ ಕಟೌಟ್‌ಗೆ ಬೆಂಕಿ ಹಚ್ಚಿದ್ದಾರೆ. ಮಧ್ಯಾಹ್ನ 12ರ ಹೊತ್ತಿಗೆ ಕಾರ್ಪೊರೇಟರ್ ರಜನಿ ದುಗ್ಗಣ್ಣರ ಮಗ 98ರ ಗಲಭೆಯ 'ಹೀರೋ' ಸದ್ಯದ ಉದ್ಯಮಿ ಭಜರಂಗಿ ಸತೀಶನಿಗೂ ಸ್ಥಳೀಯ ಮುಸ್ಲಿಂ ಹುಡುಗರಿಗೂ ಕಾರಿಗೆ ಸೈಡ್ ಕೊಡುವ ವಿಷಯದಲ್ಲಿ ವಾಗ್ವಾದ ನಡೆದಿದೆ. ಸುರತ್ಕಲ್‌ನಲ್ಲಿ ತನ್ನ ಅಹಂಗೆ ಪೆಟ್ಟು ಬಿದ್ದುದರಿಂದ ಕೆರಳಿದ ಸತೀಶನ ಪಡೆ ಮುಸ್ಲಿಂ ಹುಡುಗರ ಮೇಲೆ ಹಲ್ಲೆ ಮಾಡಿದೆ. ತಕ್ಷಣ ಪೊಲೀಸರು ಸತೀಶನನ್ನು ಬಂಧಿಸಿದ್ದಾರೆ. ಸಾಯಂಕಾಲ 4 ರ ಹೊತ್ತಿಗೆ ಹತ್ತಿರದ ಮುಸ್ಲಿಂ ಬಾಹುಳ್ಯದ ಕೃಷ್ಣಾಪುರದಲ್ಲಿ ಮತ್ತೆ ಪ್ರತ್ಯಕ್ಷರಾದ ಪಲ್ಸರ್ ಬೈಕಿನ ಹೆಲ್ಮೆಟ್‌ಧಾರಿಗಳು ಸ್ಥಳೀಯ ಕೇಬಲ್ ಉದ್ಯಮಿ ಮುಸ್ಲಿಮರೊಂದಿಗೆ ಸ್ನೇಹದಿಂದಿರುವ ಯಶವಂತನ ಮೇಲೆ ಮಾರಕಾಯುಧದಿಂದ ಹಲ್ಲೆ ನಡೆಸಿ ಕ್ಷಣಾರ್ಧದಲ್ಲಿ ಮಾಯವಾಗಿದ್ದಾರೆ. ಮತ್ತೆ ರಾತ್ರಿ 9ರ ಹೊತ್ತಿಗೆ ಬೈಕಂಪಾಡಿಯ ಬಳಿ ಇದೇ ಹೆಲ್ಮೆಟ್‌ಧಾರಿಗಳು ಸುನೀಲ್ ಎಂಬ ಭಜರಂಗಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಪರಾರಿಯಾದರು.

ಚೆಡ್ಡಿಪಡೆ ಇಬ್ಭಾಗ

ಅನಂತರ ಸುರತ್ಕಲ್‌ನಲ್ಲಿ ವದಂತಿಗಳು ಹರಡತೊಡಗಿತು. ಪೇಟೆ ನಿರ್ಜನವಾಯಿತು. 98ರ ಗಲಭೆಯನ್ನು ನೆನೆದ ಜನ ಭಯಗೊಂಡರು. ಭಜರಂಗಿಗಳು ಕೈ ಕೈ ಹಿಸುಕಿಕೊಂಡರು. ಚೆಡ್ಡಿಪಡೆ ಸುರತ್ಕಲ್‌ನಲ್ಲಿ ಇಬ್ಭಾಗಗೊಂಡಿದೆ. ಶಾಸಕ ಪಾಲೆಮಾರ್ ಬಣ ಮುಸ್ಲಿಂವೋಟಿನ ಮೇಲೆ ಕಣ್ಣಿಟ್ಟು ಗಲಭೆ ನಡೆಯಕೂಡದು ಅಂದರೆ, ಪಾಲೇಮಾರರ 'ಒಲೈಕೆ'ಯನ್ನು ವಿರೋಧಿಸುತ್ತಿರುವ ಜಾಗರಣಾ ವೇದಿಕೆಯ ನಾಯಕ ಹುಬ್ಬಳ್ಳಿ ಈದ್ಗಾದಲ್ಲಿ ಬಾವುಟನೆಟ್ಟ 'ವೀರ' ಸತ್ಯಜಿತ್ ಬಣ ಗಲಭೆಯೆಬ್ಬಿಸಲು ನೋಡಿದೆ. ಮರುದಿನ ಕೊಳಾಯಿ ಬಳಿ ಅಮಾಯಕ ಮುಸ್ಲಿಂ ಯುವಕನ ಮೇಲೆ ಗಂಭೀರ ಹಲ್ಲೆ ನಡೆಯಿತು. ಸುರತ್ಕಲ್‌ನಲ್ಲಿ ವದಂತಿಗಳು ಹರಡಿ ಜನ ಭಯದಿಂದ ಮನೆ ಸೇರತೊಡಗಿದರು. ಪೊಲೀಸರು ಹಲ್ಲೆಕೋರ ಹೆಲ್ಮೆಟ್‌ಧಾರಿಗಳನ್ನು ಪತ್ತೆ ಹಚ್ಚಲು ವಿಫಲರಾದರೂ ಕಟ್ಟುನಿಟ್ಟಿನ ಕ್ರಮದಿಂದ ಪರಿಸ್ಥಿತಿಯನ್ನು ನಿಭಾಯಿಸಿದರು. ○

ಇಬ್ಬರಿಗೂ ಜನರಿಂದ ತರಾಟೆ

'ದ್ರೋಹ' ಪೋಸ್ಟರ್ ಮತ್ತು ಹಲ್ಲೆಗಳಿಂದ ಕೆಎಫ್‌ಡಿ ಮುಸ್ಲಿಮರಿಂದಲೇ ತೀವ್ರ ಟೀಕೆಗೊಳಗಾಗಿದೆ. ವಿಜಯೋತ್ಸವ ಪೋಸ್ಟರ್ ಮತ್ತು ಉದ್ರೇಕಿತ ವರ್ತನೆಯ ಬಗ್ಗೆ ಜಾಗರಣಾ ವೇದಿಕೆಯನ್ನು ಹಿಂದೂ ಜನ ಸಾಮಾನ್ಯರು ತರಾಟೆಗೆ ತೆಗೆದುಕೊಂಡಿದ್ದಾರೆ. ಡಿಸೆಂಬರ್ 5 ರಂದು ಸಾಯಂಕಾಲ ಸುರತ್ಕಲ್‌ನಲ್ಲಿ ಶಾಂತಿ ಸಭೆ ನಡೆದಿದೆ. ಈ ಸಭೆಯಲ್ಲಿ ಕೆಎಫ್‌ಡಿ ಯು ಮುಸ್ಲಿಮರಿಂದಲೇ ವ್ಯಾಪಕ ಟೀಕೆಗೊಳಗಾಗಿ ಮುಖಭಂಗವನ್ನನುಭವಿಸಿತು. ಡಿಸೆಂಬರ್ 5 ರ ಸಾಯಂಕಾಲದಿಂದ ಜಿಲ್ಲೆಯಾದ್ಯಂತ ಸೆಕ್ಷನ್ ಜಾರಿಗೊಳಿಸಲಾಗಿದೆ. ಕತ್ತಲಾಗುತ್ತಿದ್ದಂತೆಯೇ ಸುರತ್ಕಲ್ ಪರಿಸರದಲ್ಲಿ ಅಘೋಷಿತ ಕರ್ಫ್ಯೂವಿನ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರ ಮಧ್ಯೆ ಡಿಸೆಂಬರ್ 6 ಆತಂಕ ಭಯದ ಮಧ್ಯೆ ಶಾಂತವಾಗಿ ಸರಿದುಹೋಗಿದೆ.

ಇಬ್ಬದಿಯ ಮತಾಂಧರು ಜನರ ನಿರಾಸಕ್ತಿ ಪೋಲೀಸರ ಕಟ್ಟುನಿಟ್ಟಿನ ಕ್ರಮದಿಂದ ನಿರಾಶೆಗೊಳಗಾಗಿದ್ದಾರೆ. ಮುಂದೆಯೂ ಪರಿಸ್ಥಿತಿ ಹದಗೆಡಿಸಲು ಪ್ರಯತ್ನಗಳು ನಡೆಯಬಹುದು. ಪ್ರಜಾಪ್ರಭುತ್ವ ಚಳುವಳಿಗಳು ಎಚ್ಚರದಿಂದ ಕೋಮುವಾದದ ವಿರುದ್ಧದ ಹೋರಾಟವನ್ನು ಮುಂದುವರಿಸಬೇಕಾಗಿದೆ.

ಬೆಳ್ತಂಗಡಿ: ಕರ್ನಾಟಕ ಪ್ರಾಂತ ರೈತ ಸಂಘದ ಸುವರ್ಣ ಮಹೋತ್ಸವ

ಕರ್ನಾಟಕ ರಾಜ್ಯದ ಕಳೆದ ಹತ್ತು ವರ್ಷದಲ್ಲಿ ಕೃಷಿ ರಂಗದಲ್ಲಿ ಆಗುತ್ತಿರುವ ಬಿಕ್ಕಟ್ಟಿನ ಪರಿಣಾಮವಾಗಿ ಸುಮಾರು 30 ಸಾವಿರ ರೈತರ ಆತ್ಮ ಹತ್ಯೆ ನಡೆದಿದೆ. ಸ್ವಾಮಿನಾಥನ್ ಆಯೋಗದ ವರದಿಯಲ್ಲಿ ಇರುವ ಮುಖ್ಯಾಂಶಗಳಾದ ಸಮಗ್ರ ಭೂ ಸುಧಾರಣೆ, ಕೃಷಿ ವೆಚ್ಚದ ಆಧಾರದಲ್ಲಿ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಮತ್ತು ಸಬ್ಸಿಡಿ ದರದಲ್ಲಿ ಗೊಬ್ಬರಗಳು, ಕೀಟನಾಶಕಗಳು, ಮತ್ತು ಕೃಷಿ ಸಲಕರಣೆಗಳನ್ನು ಸರಬರಾಜು ಮಾಡಬೇಕು. ಶೇ.4 ರ ಬಡ್ಡಿ ದರದಲ್ಲಿ ರೈತರಿಗೆ ಬೇಕಾದಷ್ಟು ಸಾಲ ಸೌಲಭ್ಯ ಘೋಷಣೆ ಮಾಡಿ ಕೃಷಿ ಬಿಕ್ಕಟ್ಟನ್ನು ತಕ್ಷಣ ಸರಿಪಡಿಸಿ ದೇಶದ ಬೆನ್ನೆಲುಬಾದ ರೈತರ ಜೀವನವನ್ನು ಕಾಪಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಸುವರ್ಣ ಮಹೋತ್ಸವ ಮತ್ತು ಜನಶ್ರೀ ವಿಮಾ ಯೋಜನೆ, ವಿದ್ಯಾರ್ಥಿ ವೇತನ ವಿತರಣೆಯ ಬೃಹತ್ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿರವರು ಕರೆ ನೀಡಿದರು.

ಜೀವ ವಿಮಾ ನಿಗಮದ ಪಿಂಚಣಿ ಮತ್ತು ಸಮೂಹ ವಿಮಾ ಘಟಕದ ಪ್ರಬಂಧಕರು ಕೆ.ಎನ್.ಶಶಿಧರ್‌ರವರು 501 ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ಬಿಡುಗಡೆ ಮಾಡುತ್ತಾ ಸಮಾಜದ ಬಡ ಕುಟುಂಬಗಳಿಗೆ ಸಾಂತ್ವನ ಮತ್ತು ರಕ್ಷಣೆಗೆ ನೀಡುವಂತಹ ಜನಶ್ರೀ ವಿಮಾ ಯೋಜನೆಯ ಪ್ರಾಮುಖ್ಯತೆಯನ್ನು ವಿವರಿಸಿ ಇಂತಹ ಕೆಲಸ ಮಾಡಿದ ಕರ್ನಾಟಕ ಪ್ರಾಂತ ರೈತ ಸಂಘವನ್ನು ಅಭಿನಂದಿಸಿದರು.

ಈ ಬಂಡವಾಳಶಾಹಿ ಸಮಾಜದಲ್ಲಿ ಶಿಕ್ಷಣದ ವ್ಯಾಪಾರೀಕರಣದ ಪರಿಣಾಮವಾಗಿ ಬಡ ರೈತರ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುವುದನ್ನು ತಡೆಗಟ್ಟಲು ವಿದ್ಯಾರ್ಥಿ ಸಮೂಹ ಪ್ರಜಾಪ್ರಭುತ್ವ ಚಳುವಳಿಗಳನ್ನು ಬಲಪಡಿಸುವುದು ಅಗತ್ಯ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್‌ನ ರಾಜ್ಯ ಕಾರ್ಯದರ್ಶಿ ರಾಜಶೇಖರ್ ಮೂರ್ತಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು.

ಸಮಾರಂಭದಲ್ಲಿ ಹಿರಿಯ ರೈತ ಮುಖಂಡರುಗಳಲ್ಲಿ ಅಗ್ರಗಣ್ಯರಾದ ಕೆ.ಆರ್.ಶ್ರೀಯಾನ್, ರಾಮಚಂದ್ರ ಉಚ್ಚಿಲ್, ವಾಸುಗಟ್ಟಿ ಮತ್ತು ಪ್ರಗತಿಪರ ರೈತರಾದ ಪರಮೇಶ್ವರನ್ ನಾಯರ್‌ರವರಿಗೆ ಸನ್ಮಾನಿಸಲಾಯಿತು. ರೈತ ಸಂಘವನ್ನು ಬಲಪಡಿಸುವ ಮೂಲಕ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡಿದ ರೈತ ಸಂಘದ ಕಾರ್ಯಕರ್ತರಾದ ಕ್ಲೇವಿಯರ್, ಮಂಜುನಾಥ್ ಪೌಲೋಸ್, ರಾಮಕೃಷ್ಣ, ವಿಜಯ, ಸುಲೈಮಾನ್ ಮುಂತಾದವರಿಗೆ ಬಯ್ಯಾರೆಡ್ಡಿಯವರು ನೆನಪಿನ ಕಾಣಿಕೆ ನೀಡಿದರು.

ಈ ಸಮಾರಂಭದಲ್ಲಿ ರೈತ ಸಂಘಕ್ಕೆ ಅತ್ಯಂತ ತ್ಯಾಗಪೂರ್ಣವಾದಂತಹ ಕೊಡುಗೆ ನೀಡಿದ ರೈತ ಹೋರಾಟಗಾರರು ಮತ್ತು ಬರಹಗಾರರಾಗಿದ್ದಂತಹ ಕೆ.ವಿ.ರಾವ್, (ಎಳಚಿತ್ತಾಯರು) ಉಜಿರೆ, ರುಕ್ಮಯ ಭಂಡಾರಿ, ಪಾಪಚ್ಚನ್ ಇವರ ಭಾವಚಿತ್ರ ಬಿಡುಗಡೆ ಮಾಡಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಶಿವಕುಮಾರ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ರೈತ ಮುಖಂಡ ಯಾಧವ ಶೆಟ್ಟಿ ಸಂಜೀವ ಬಂಗೇರ, ಬಿ.ಎಂ.ಭಟ್ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಪರಿಮಳ ಸ್ವಾಗತಿಸಿ ಸುಕನ್ಯಾ ಧನ್ಯವಾದ ನೀಡಿದರು ಎಂದು ಸಂಘದ ಕಾರ್ಯದರ್ಶಿ ಹರಿದಾಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಸನ್ಮಾನಿತರಾದ ಹಿರಿಯ ರೈತ ಮುಖಂಡರುಗಳಲ್ಲಿ ಒಬ್ಬರಾದ ಕಾಂ. ರಾಮಚಂದ್ರ [illegible]

ದೇಶದ ಸಾರ್ವಭೌಮತೆಯನ್ನು ಒತ್ತೆಯಿಟ್ಟು ಅಣುಒಪ್ಪಂದ ಬೇಡ

ದಾಂಡೇಲಿ ಸಂವಾದದ ಒಟ್ಟಾಭಿಪ್ರಾಯ

40 ಲಕ್ಷ ಕೋಟಿ ರೂ.ಗಳನ್ನು ವ್ಯಯಿಸಿ ಶೇ. 7ರಷ್ಟು ಕನಿಷ್ಠ ವಿದ್ಯುತ್‌ನ್ನು ಉತ್ಪಾದಿಸಬೇಕಾದಂತಹ ಅನಿವಾರ್ಯತೆ ಯಂತೂ ಇಲ್ಲವೇ ಇಲ್ಲ, ಹಾಗೊಮ್ಮೆ ಆ ಅನಿವಾರ್ಯತೆಯಿದ್ದರೂ ದೇಶದ ಅಭದ್ರತೆಗೆ ಕಾರಣವಾಗಲಿರುವ ರಣನೀತಿಗೆ ಒಪ್ಪಿಗೆ ನೀಡಿ ಹಾಗೂ ದೇಶದ ಸಾರ್ವಭೌಮತೆಯನ್ನು, ಸ್ವಾಭಿಮಾನವನ್ನು ಒತ್ತೆಯಿಟ್ಟು ಅಮೇರಿಕಾದ ಜೊತೆ ನಾಗರಿಕ ಅಣು ಒಪ್ಪಂದ ಮಾಡಿಕೊಂಡು ಅಣು ವಿದ್ಯುತ್ ಉತ್ಪಾದಿಸಬೇಕಾದಂತಹ ಅನಿವಾರ್ಯ ಪರಿಸ್ಥಿತಿಯಂತೂ ನಮ್ಮ ದೇಶಕ್ಕೆ ಇಲ್ಲವೇ ಇಲ್ಲ....

ಭಾರತಕ್ಕೆ ಅಣು ವಿದ್ಯುತ್ತಿನ ತೀರಾ ಅನಿವಾರ್ಯತೆಯಿಲ್ಲ, ಇದ್ದರೂ 40 ಲಕ್ಷ ಕೋಟಿ ರೂ.ಗಳನ್ನು ವ್ಯಯಿಸಿ ಶೇ. 7ರಷ್ಟು ಕನಿಷ್ಠ ವಿದ್ಯುತ್‌ನ್ನು ಉತ್ಪಾದಿಸಬೇಕಾದಂತಹ ಅನಿವಾರ್ಯತೆಯಂತೂ ಇಲ್ಲವೇ ಇಲ್ಲ. ಹಾಗೊಮ್ಮೆ ಆ ಅನಿವಾರ್ಯತೆಯಿದ್ದರೂ ದೇಶದ ಅಭದ್ರತೆಗೆ ಕಾರಣವಾಗಲಿರುವ ರಣನೀತಿಗೆ ಒಪ್ಪಿಗೆ ನೀಡಿ ಹಾಗೂ ದೇಶದ ಸಾರ್ವಭೌಮತೆಯನ್ನು, ಸ್ವಾಭಿಮಾನವನ್ನು ಒತ್ತೆಯಿಟ್ಟು ಅಮೇರಿಕಾದ ಜೊತೆ ನಾಗರಿಕ ಅಣು ಒಪ್ಪಂದ ಮಾಡಿಕೊಂಡು ಅಣು ವಿದ್ಯುತ್ ಉತ್ಪಾದಿಸಬೇಕಾದಂತಹ ಅನಿವಾರ್ಯ ಪರಿಸ್ಥಿತಿಯಂತೂ ನಮ್ಮ ದೇಶಕ್ಕೆ ಇಲ್ಲವೇ ಇಲ್ಲ....

ಇದಿಷ್ಟು ದಾಂಡೇಲಿಯ ಕಾರ್ಮಿಕ ಸಂಘಗಳ ಜಂಟಿ ಸಂಧಾನ ಸಮಿತಿ ಹಾಗೂ ಗಣ್ಯ ನಾಗರಿಕರು ಸಂಯುಕ್ತವಾಗಿ ಹಮ್ಮಿಕೊಂಡಿದ್ದ 'ಭಾರತ-ಅಮೇರಿಕಾ 123 ನಾಗರಿಕ ಅಣು ಒಪ್ಪಂದ ಉಚಿತವೋ -ಅನುಚಿತವೋ' ಎಂಬ ಸಂವಾದ ಕಾರ್ಯಕ್ರಮದಲ್ಲಿ ಕೇಳಿಬಂದ ಒಟ್ಟಾಭಿಪ್ರಾಯಗಳು.

ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಿ.ಐ.ಟಿ.ಯು ಸಂಘಟನೆಯ ರಾಜ್ಯಾಧ್ಯಕ್ಷರಾದ ಬಿ.ಮಾಧವ ಅವರು ಅಮೇರಿಕಾಕ್ಕೆ ಈ ಅಣು ವಿದ್ಯುತ್ ಶಕ್ತಿ ಕೇವಲ ಒಂದು ನೆಪವಷ್ಟೇ. ರಣನೀತಿ ಸೇರಿದಂತೆ ಭಾರತವನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳುವಂತಹ ಶರತ್ತುಗಳನ್ನು ಹಾಕುವುದರ ಮೂಲಕ ಅಮೇರಿಕ ಅಣುಒಪ್ಪಂದಕ್ಕೆ ಮುಂದಾಗಿದೆ. ಅದಕ್ಕೆ ಭಾರತ ಸರಕಾರ ಜನ ವಿರೋಧದ ನಡುವೆಯೂ ಮುಂದಾಗಿರುವುದು ವಿಪರ್ಯಾಸದ ಸಂಗತಿ ಎಂದು ಆಕ್ಷೇಪಿಸಿದರು.

ಅವರು ಒಪ್ಪಂದ ಮುರಿದರೆ?

ಅಂದು ನರಸಿಂಹರಾವ್ ಕಾಲದಿಂದಲೆ ಆರಂಭಗೊಂಡ ಈ ಒಪ್ಪಂದದ ಪ್ರಕ್ರಿಯೆ ಎನ್.ಡಿ.ಎ ಸರಕಾರದಲ್ಲೂ ಮುಂದುವರೆದಿತ್ತು. ಈಗ ಮತ್ತೆ ಚಾಲನೆ ದೊರೆತಿದೆ. ತನಗೆ ಬೇಕಾದ ಶರತ್ತುಗಳನ್ನು ಹಾಕಿರುವ ಅಮೇರಿಕಾ ಭಾರತಕ್ಕೆ ತಂತ್ರಜ್ಞಾನದ ಅವಕಾಶ ನೀಡಿಲ್ಲ, ನಿರಂತರ ಇಂಧನ ಪೂರೈಕೆ ಮಾಡುವ ಭರವಸೆ ನೀಡಿಲ್ಲ, ಯಾವುದೇ ಕಾರಣ ನೀಡಿಒಪ್ಪಂದ ರದ್ದು ಮಾಡಬಹುದು. ವಿದ್ಯುತ್ ಉತ್ಪಾದನೆಯಾಗುವ ಹೊತ್ತಿಗೆ 40ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಖರ್ಚಾಗಿರುತ್ತದೆ. ಒಂದೊಮ್ಮೆ ಇಂಧನ ಪೂರೈಕೆಯಾಗದಿದ್ದರೆ, ಒಪ್ಪಂದ ರದ್ದಾದರೆ ವಿನಿಯೋಗಿಸಿದ ಬಂಡವಾಳ ಹಾಗೂ ಯೋಜನೆಯ ಗತಿಯೇನಾಗಬಹುದು ಎಂದು ಮಾಧವ ಪ್ರಶ್ನಿಸಿದರು.

ನಮ್ಮ ದೇಶದ ರಕ್ಷಣಾ ವ್ಯವಸ್ಥೆಗೆ ಬಾಧಕವಾಗುವಂತಹ, ಹಾಗೂ ಮುಂದೊಂದುದಿನ ಅನಿವಾರ್ಯವಾಗಿ ಅಮೇರಿಕಾದ ಮಾತಿಗೆ ತಲೆದೂಗಬೇಕಾದಂತಹ ಶರತ್ತುಗಳು ಈ ಒಪ್ಪಂದದಲ್ಲಿವೆ ಎಂದ ಬಿ.ಮಾಧವ ಅವರು ನಮ್ಮ ದೇಶದ ಒಂದಿಷ್ಟು ಸಾರ್ವಭೌಮತೆಯನ್ನು ಅಮೇರಿಕಾಕ್ಕೆ ಒತ್ತೆಯಿಟ್ಟು ಅದಕ್ಕೆ ಪ್ರತಿಯಾಗಿ ಅನಿವಾರ್ಯತೆಯಿಲ್ಲದ ಇಂಧನವನ್ನು ಪಡೆಯುವಂತಹ, ದೇಶದ ಹಿತಾಸಕ್ತಿಯನ್ನು ಬಲಿಕೊಡುವ ಜನವಿರೋಧಿ ಒಪ್ಪಂದ ನಮಗೆ ಬೇಕಾಗಿಲ್ಲ ಎಂದರು.

ಮಾರಿಕೊಳ್ಳುವ ಕೆಲಸ ಆಗಬಾರದು

ಸಂವಾದಕರಲ್ಲೊಬ್ಬರಾದ ಪ್ರೊ.ಎಸ್.ಕೆ.ಭಟ್ಟ ಅವರು ಮಾತನಾಡಿ ಕೇವಲ ಶೇ.7ರಷ್ಟರ ವಿದ್ಯುತ್ ಉತ್ಪಾದನೆಗಾಗಿ ನಮ್ಮನ್ನು ನಾವು ಮಾರಿಕೊಳ್ಳುವಂತ ಕೆಲಸ ಆಗಬಾರದಾದು. ಇದರಲ್ಲಿ ರಾಜಕೀಯ ಹಿತಾಸಕ್ತಿ ಸಲ್ಲದು ಬದಲಿ ಶಕ್ತಿ ಮೂಲಗಳನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸುವತ್ತ ದೇಶ ಕಾರ್ಯಪ್ರವೃತ್ತವಾಗ ಬೇಕಾಗಿದೆ ಎಂದರು.

ಅಮೇರಿಕಾ ಈ ಒಪ್ಪಂದದ ಮೂಲಕ ನಮ್ಮ ದೇಶವನ್ನು ಚಕ್ರವ್ಯೂಹದೊಳಗೆ ಸಿಲುಕಿಸುತ್ತಿದೆ ಎಂದು ತಾರ್ಕಿಕವಾಗಿ ಮಾತನಾಡಿದ ನ್ಯಾಯವಾದಿ ಶ್ರೀಮತಿ ಅನಿತಾ ಸೋಮಕುಮಾರ ಅವರು ಈ ಒಪ್ಪಂದದಲ್ಲಾಗಿರುವ ಕರಾರಿನಲ್ಲಿ ಕೆಲವು ಅಂಶಗಳ ಬದಲಾವಣೆಯಾಗಬೇಕಿದೆ ಎಂಬ ಅಭಿಪ್ರಾಯ ಮಂಡಿಸಿದರು. ನಗರದ ಪ್ರಸಿದ್ಧ ವೈದ್ಯರಾದ ಡಾ. ಎನ್.ಜಿ.ಬ್ಯಾಕೋಡ ಅವರು ಈ ಒಪ್ಪಂದದಿಂದ ವೈದ್ಯಕೀಯ ವಿಭಾಗಗಕ್ಕೆ ಪ್ರಯೋಜನವಿದೆ ಎಂದರು. ಎಲ್ಲ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೂ ಅಣು ಶಕ್ತಿಯ ಪ್ರಯೋಜನ ಪಡೆಯುತ್ತಿವೆ, ಅದರ ಹಾನಿಯನ್ನು ತಡೆಗಟ್ಟುತ್ತಿವೆ ಎಂದರು. ಹಿರಿಯರಾದ ಜಿ.ಎಲ್.ಬ್ಯಾಹತಿಯವರು ಒಪ್ಪಂದಗಳು ಈ ದೇಶದ ಹಿತಕ್ಕಾಗಿರಬೇಕೆಂದರು.

ಸಂವಾದದ ಅಧ್ಯಕ್ಷತೆ ವಹಿಸಿದ್ದ ಕಾರ್ಮಿಕ ಮುಖಂಡ ನಿತ್ಯಾನಂದ ಸ್ವಾಮಿಯವರು ಒಟ್ಟಾರೆ ಒಪ್ಪಂದ ದಲ್ಲಿ ಭಾರತಕ್ಕಿಂತ ಅಮೇರಿಕಾಕ್ಕೇ ಹೆಚ್ಚಿನ ಲಾಭವಿದೆ ಅಮೇರಿಕಾ ಈ ಒಪ್ಪಂದದ ಮೂಲಕ ಭಾರತದ ಮೇಲೆ ತನ್ನ ಹಿಡಿತಸಾಧಿಸಲೆತ್ನಿಸುತ್ತಿದೆ ಎಂದರು.

ಕನಸುಗಾರ(?)ರು

ಈ ಒಪ್ಪಂದಕ್ಕೆ ಆಳುವ ಪಕ್ಷಗಳು ಮಾತ್ರ ಕಾರಣರಲ್ಲ, ಅಮೇರಿಕಾದ ಬಂಡವಾಳಶಾಹಿಗಳ ಜೊತೆಯಲ್ಲಿ ಪಾಲುದಾರರಾಗುವ ಕನಸು ಕಂಡಿರುವ ನಮ್ಮ ದೇಶದ ಈ ಆಳುವ ವರ್ಗವೆಂಬ ಬಂಡವಾಳ ಶಾಹಿಗಳಿಗೆ ಈ ಒಪ್ಪಂದ ಆಗಬೇಕಿದೆ., ಅದನ್ನು ಆಳುವ ಪಕ್ಷಗಳ ಮೂಲಕ ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತಿವೆ. ಎಂದ ನಿತ್ಯಾನಂದ ಸ್ವಾಮಿಯವರು ಇಂತಹ ಸಂವಾದ, ಜನಾಂದೋಲನಗಳ ಮೂಲಕ ಈ ಒಪ್ಪಂದದ ವಿರುದ್ಧವಾಗಿ ಜನಾಭಿಪ್ರಾಯ ರೂಪಿಸಬೇಕಾಗಿದೆ ಎಂದರು. ಸಂವಾದದಲ್ಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಯುನಿಯನ್ನಿನ ಕಾರ್ಯದರ್ಶಿ ಎಸ್.ವಿ.ಸಾವಂತ, ಏಐಐಇಏ ಅಧ್ಯಕ್ಷರಾದ ಪಿ.ಎ.ಮಾದರ, ಕ.ಸಾ.ಪ ಅಧ್ಯಕ್ಷ ಹರೀಶ ನಾಯ್ಕ ಮುಂತಾದವರು ಪಾಲ್ಗೊಂಡಿದ್ದರು. ಉದಯ ನಾಯ್ಕ ನಿರೂಪಿಸಿದ ಕಾರ್ಯಕ್ರಮದ ಆರಂಭದಲ್ಲಿ ಕಾರ್ಯಕ್ರಮ ಸಂಘಟಕ ಹರೀಶ್ ನಾಯ್ಕ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರೆ ಜೋಸೆಫ್ ಗೊನ್ಸಾಲ್ವಿಸ್ ವಂದಿಸಿದರು.

■ ಬಿ.ಎನ್.ವಾಸರೆ

ಉದ್ಯೋಗ ಖಾತ್ರಿ(!) ಯೋಜನೆ
ಕೂಲಿಕಾರ ಮತ್ತು ರೈತರಿಂದ
ಕೂಲಿಗಾಗಿ ಅಧಿಕಾರಿಗಳಿಗೆ ದಿಗ್ಬಂಧನ

ದೇವದುರ್ಗ ತಾಲ್ಲೂಕು ಜಾಲಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ 23 ಕೂಲಿಕಾರರ ಗುಂಪುಗಳಿಗೆ ಕಳೆದ 4 ತಿಂಗಳು ಕೂಲಿ ಕೊಡದೆ ಇದ್ದುದನ್ನು ಖಂಡಿಸಿ, ನಿಂತಿರುವ 15 ಲಕ್ಷ ರೂ ಕೂಲಿ ಕೊಡಬೇಕು ಮತ್ತು ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ಕೂಲಿಕಾರರಿಗೆ ಕೆಲಸ ಕೊಡಬೇಕೆಂದು ಎರಡು ಬೇಡಿಕೆಗಳಿಗಾಗಿ 13.11.2007ರಂದು ಗ್ರಾಮದ ಅಂಬೇಡ್ಕರ್ ಚೌಕದಲ್ಲಿ ಜಂಟಿಯಾಗಿ ರಸ್ತೆ ತಡೆ ಕಾರ್ಯಕ್ರಮ ಯೋಜಿಸಲಾಗಿತ್ತು. ಹೋರಾಟಗಾರರ ಮೇಲೆ ಹಾಗು ಕೃಷಿ ಕೂಲಿಕಾರರ/ ರೈತ ಸಂಘಟನೆ ಮುಖಂಡರ ಮೇಲೆ ಲಾಠಿ ಚಾರ್ಜ್ ಮಾಡಿ 'ಕನಿಷ್ಠ 27' ಸಂಗಾತಿಗಳನ್ನು ಬಂಧಿಸಬೇಕೆಂದು ದೇವದುರ್ಗ ಪೊಲೀಸ್ ಠಾಣೆ ಪಿಎಸ್ಐ ನರಸಿಂಹಪ್ಪ, ಗಬ್ಬೂರು ಠಾಣೆ ಪಿಎಸ್ಐ ಚನ್ನಯ್ಯ, ಜಾಲಹಳ್ಳಿ ಠಾಣೆ ಪಿಎಸ್ಐ ಆರ್ಐ ನದಾಫ ಮತ್ತು ಸಿಪಿಐ ಎಸ್.ವೈ.ಹುಣಸೆಕಟ್ಟಿ 3 ಜೀಪು ಮತ್ತು ಒಂದು ಪೊಲೀಸ್ ವ್ಯಾನ್ ಜೊತೆ ಬಂದಿದ್ದರು.

ಕೂಲಿಕಾರ ಮಹಿಳೆಯರು ಹಾಗೂ ಪುರುಷರು ಸೇರಿ ಶ್ರೀರಂಗನಾಥ ದೇವಾಲಯದ ಆವರಣದ ಮುಂದೆ 800 ಜನ ಸೇರಿದ್ದರು. ಜನ ಸೇರಿದ್ದನ್ನು ಗಮನಿಸಿ ಪೊಲೀಸ್ ಅಧಿಕಾರಿಗಳು ತಾಲ್ಲೂಕು ಪಂಚಾಯತಿ ಅಧಿಕಾರಿ (ಯೋಜನೆ ಅಧಿಕಾರಿ) ಪ್ರಾಣೇಶ ಕೊಪ್ಪರದ ಹಾಗೂ ಮಹೇಶ ಪಾಟೀಲ್‌ರನ್ನು ರಂಗನಾಥ ದೇವಾಲಯಕ್ಕೆ (ಮೆರವಣಿಗೆ ಸ್ಥಳಕ್ಕೆ) ಕರೆದುಕೊಂಡುಬಂದರು. ತಾಲ್ಲೂಕು ಪಂಚಾಯತಿ ಅಧಿಕಾರಿಗಳನ್ನು ಕೂಲಿಕಾರ/ ರೈತ ಮಹಿಳೆಯರು ಸೇರಿ ಕೂಲಿ ಕೊಡಬೇಕು ಮತ್ತು ಕೆಲಸ ಕೊಡಬೇಕೆಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೆ 3 ತಾಸು ಅಧಿಕಾರಿಗಳಿಗೆ ದಿಗ್ಬಂಧನ ಹಾಕಿದರು.

ದಿಗ್ಬಂಧನದಿಂದ ತತ್ತರಿಸಿದ ಅಧಿಕಾರಿಗಳು ಜಿಲ್ಲಾ ಪಂಚಾಯತಿ ಅಧಿಕಾರಿ ಸಿಇಓ ಹಾಗೂ ತಾಲ್ಲೂಕು ಪಂಚಾಯತಿ ಅಧ್ಯಕ್ಷ ಹಾಗೂ ಇಒ ಜೊತೆ ದೂರವಾಣಿ ಮೂಲಕ ಮಾತನಾಡಿ ಒಂದು ವಾರದಲ್ಲಿ ಕೂಲಿ ಕೊಡುತ್ತೇವೆ ಮತ್ತು ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆ ಮುಗಿದ ತಕ್ಷಣ ಕೂಲಿಕಾರರಿಗೆ ಕೆಲಸ ಕೊಡುತ್ತೇವೆ ಎಂದು ಲಿಖಿತ ಭರವಸೆ ಕೊಟ್ಟಾಗ ರಸ್ತೆತಡೆ ವಾಪಸ್ಸು ಪಡೆಯಲಾಯಿತು.

ರೈತ ಕೃಷಿ ಕೂಲಿಕಾರರನ್ನು ಉದ್ದೇಶಿಸಿ ಕೃಷಿ ಕೂಲಿಕಾರ ಸಂಘದ ಮುಖಂಡರಾದ ಅಲಿಬಾಬ, ತಿಪ್ಪಯ್ಯನಾಯಕ ರೈತಸಂಘದ ಮುಖಂಡ ನರಸಣ್ಣನಾಯಕ, ಡಿವೈಎಫ್ಐ ಮುಖಂಡ ಸಿ.ಎಸ್.ನಾಡಗೌಡ ಹಾಗು ಸಿಐಟಿಯು ಮುಖಂಡ ಗಿರಿಯಪ್ಪ ಪೂಜಾರಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ರೈತ ಕೃಷಿ ಕೂಲಿಕಾರರ ಹೋರಾಟಕ್ಕೆ ಬೆಂಬಲ ಸೂಚಿಸಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಂಗಣ್ಣ ಕೋಲ್ಕರ ಮಾತನಾಡಿದರು. ಎಸ್ಎಫ್ಐ ಮುಖಂಡರಾದ ಶಬ್ಬೀರ ಹಾಗೂ ಸಿದ್ದುಬಸವನಾಯಕ ಕೂಡ ಮಾತನಾಡಿದರು.

ತಣ್ಣಗಾದ ಪೊಲೀಸರು : ಹೋರಾಟವನ್ನು ಬಗ್ಗುಬಡಿಯಲು ಲಾಠಿ, ವಾಹನಗಳ ಜೊತೆ ಬಂಧಿಸಲು ಬಂದಿದ್ದ ಪೊಲೀಸರಿಗೆ ನಿರಾಸೆಯಾಯಿತು. ಬಂದಿದ್ದು ಬಂಧಿಸಲಿಕ್ಕೆ, ಹೋದದ್ದು ಬರಿಗೈಯಿಂದ ಎಂದು ಹೆಸರು ಹೇಳದ ಪೊಲೀಸ್ ಒಬ್ಬರು ಪತ್ರಿಕೆಗೆ ತಿಳಿಸಿದರು.

■ ಗಿರಿಯಪ್ಪ ಪೂಜಾರಿ,
ಜಾಲಹಳ್ಳಿ


ಸಿಂಧನೂರು : ದೇವದಾಸಿಯರ ಪ್ರತಿಭಟನೆ

ನವೆಂಬರ್ 20ರಂದು ಹಳ್ಳಿಗಳಿಂದ ದೇವದಾಸಿ ಮಹಿಳೆಯರು ತಮ್ಮ ತುತ್ತಿನ ಚೀಲ ತುಂಬಿಕೊಳ್ಳಲು ಮೈ ಮುರಿದು ದುಡಿದು ಬೆವರ ಸುರಿಸಿ ಮಾಡಬೇಕಾಗಿದ್ದ ಕೆಲಸವನ್ನು ಬದಗಿರಿಸಿ, ಇದು ಭತ್ತ ಕಟಾವು ಮಾಡುವ ಸೀಜನ್ ಆಗಿರುವುದರಿಂದ ದುಡಿಸಿಕೊಳ್ಳುವ ತಮ್ಮ ಧಣಿಗಳ ಬೆದರಿಕೆಗೂ ಮಣಿಯದೇ ಸಿಕ್ಕ ಸಿಕ್ಕ ವಾಹನಗಳನ್ನು ಹತ್ತಿ ಸಿಂಧನೂರಿಗೆ ಬಂದು ಇಳಿದರು. ಗುಂಪು ಗುಂಪಾಗಿ ಪ್ರವಾಸಿ ಮಂದಿರದ ಕಡೆ ಕೈ ಬೀಸುತ್ತಾ ಹೆಜ್ಜೆ ಹಾಕುವ ದೇವದಾಸಿಯರ ಸಾಲು ಮಧ್ಯಾಹ್ನ 1.00 ಗಂಟೆಗೆ ಪ್ರವಾಸಿ ಮಂದಿರದಿಂದ ಮೆರವಣಿಗೆ ಹೊರಟಿತು. ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯದ ಘೋಷಣೆಗಳನ್ನು ಕೂಗುತ್ತಾ ಸರ್ಕಾರದ ನಿರ್ಲಕ್ಷ್ಯತನಕ್ಕೆ ಧಿಕ್ಕಾರ ಹೇಳುತ್ತಾ ಮುಂದೆ ಮುಂದೆ ಸಾಗಿ ಹೋಗುವ ಮೆರವಣಿಗೆಯನ್ನು ನೋಡಿದ ಕೆಲವರು 'ಅರೇ, ಇದೇನಿದು ಬರೆ ಹೆಣ್ಮಕ್ಕೆ ಹೊಂಟಾರ' ಅಂಬದೇ ಇರಲಿಲ್ಲಾ; ತಹಶೀಲ್ ಆಫೀಸಿನ ಮುಂದೆ ಮೆರವಣಿಗೆಕಾರರ 'ಸಾಕಪ್ಪ ಸಾಕು' ಅನ್ನುವವರೆಗೆ ಘೋಷಣೆ ಮೊಳಗಿದವು. ನಂತರ ಕಾಂ: ನರಸಿಂಹಪ್ಪನವರ ಭಾಷಣ, ಸರ್ಕಾರದ ವಿಳಂಬ ನೀತಿಯನ್ನು ಖಂಡಿಸುತ್ತಾ ಸರ್ವೆ ಕಾರ್ಯ ಬೇಗನೆ ಪ್ರಾರಂಭಿಸಿ, ದೇವದಾಸಿಯರ ಬದುಕಿಗೆ ಆಸರೆಯಾಗುವ ಪುನರ್ವಸತಿಯಂತಹ ಕಲ್ಯಾಣ ಕಾರ್ಯಕ್ರಮ ರೂಪಿಸಿ ಜಾರಿಗೊಳಿಸುವಂತೆ ಒತ್ತಾಯಿಸಿದರು. ತಹಶೀಲ್ದಾರ್‌ರಿಗೆ ಸಂಘದ ಅಧ್ಯಕ್ಷೆ ಕರಿಯಮ್ಮ ಮನವಿ ಪತ್ರ ಸಲ್ಲಿಸಿದರು. ಅಪ್ಪಣ್ಣ ಕಾಂಬ್ಳೆ ವಂದನೆ ಹೇಳಿದರು. ಕಾಂ: ಯಂಕಪ್ಪ, ಡಿವೈಎಫ್ಐನ ಅಧ್ಯಕ್ಷ ಹುಸೇನ್‌ಬಾಷ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ 25 ಮಹಿಳೆಯರಿಗೆ ದೇವದಾಸಿ ಪ್ರಮಾಣ ಪತ್ರ ವಿತರಿಸಲಾಯಿತು.



ಗುವಾಹಾಟಿಯಲ್ಲೊಂದು ಪಾಶವೀ ಹಲ್ಲೆ

ನವಂಬರ್ 24 ರಂದು ಅಸ್ಸಾಂನ ರಾಜಧಾನಿ ಗುವಾಹಾಟಿಯ ಬೆಲ್ತೋಲಾ ಪ್ರದೇಶ ಸಮರಾಂಗಣವಾಗಿ ಬಿಟ್ಟಿತು. ಇಬ್ಬರು ಬಲಿಯಾದರು, 300ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ವಾಸ್ತವವಾಗಿ ಸಾವು-ನೋವುಗಳ ಸಂಖ್ಯೆ ಇನ್ನೂ ಹೆಚ್ಚು ಎಂದು ಹೇಳಲಾಗುತ್ತಿದೆ. 20ಮಂದಿ ಈಗಲೂ ಕಾಣೆಯಾಗಿದ್ದಾರೆ, ಗಾಯ ಗೊಂಡವರಲ್ಲಿ ಕನಿಷ್ಟ 10 ಮಂದಿಯ ಸ್ಥಿತಿ ಗಂಭೀರವಾಗಿದೆ ಎನ್ನಲಾಗಿದೆ. ದಿಸ್ಪುರ್ ರಾಜ್ಯದ ಅಧಿಕಾರದ ಕೇಂದ್ರವಿರುವ ಸ್ಥಳ. ಅಲ್ಲಿಂದ ಕೆಲವೇ ನೂರು ಮೀಟರುಗಳ ದೂರದಲ್ಲಿ ಈ ಹಿಂಸಾಚಾರ ನಡೆದಿದೆ. ಈ ಹಿಂಸಾಚಾರವನ್ನು ಪ್ರತಿಭಟಿಸಿ ನವಂಬರ್ 26ರಂದು ಆದಿವಾಸಿ ವಿದ್ಯಾರ್ಥಿ ಸಂಘಟನೆ ನೀಡಿದ 36 ಗಂಟೆಗಳ ಬಂದ್ ಸಂದರ್ಭದಲ್ಲಿಯೂ ರಾಜ್ಯದ ಹಲವೆಡೆ ಹಿಂಸಾತ್ಮಕ ಘಟನೆಗಳು ನಡೆದಿವೆ, ಕೋಕ್ರಾರಾರ್ ನಲ್ಲಿ ಒಂದು ಸಾವು ಸಂಭವಿಸಿದೆ.



ಹಿಂದೆ ವಲಸೆ ಬಂದ ಆದಿವಾಸಿಗಳಿಗೆ ಪರಿಶಿಷ್ಟ ಬುಡಕಟ್ಟು ಸ್ಥಾನಮಾನದ ಬೇಡಿಕೆಯ 'ದಿಸ್ಪುರ್ ಚಲೋ' ರ್‍ಯಾಲಿಯ ಮೇಲೆ ಅಮಾನುಷ ಧಾಳಿ ನಡೆದಿದೆ.

ನವಂಬರ್ 24ರಂದು ಅಖಿಲ ಅಸ್ಸಾಂ ಆದಿವಾಸಿ ವಿದ್ಯಾರ್ಥಿ ಸಂಘ ರಾಜ್ಯಕ್ಕೆ ವಲಸೆ ಬಂದು ನೆಲೆಸಿರುವ ಆದಿವಾಸಿಗಳಿಗೆ ಪರಿಶಿಷ್ಟ ಬುಡಕಟ್ಟು ಎಂಬ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿ 'ದಿಸ್ಪುರ್ ಚಲೋ' ಕಾರ್ಯಕ್ರಮದ ಭಾಗವಾಗಿ ಒಂದು ರ್‍ಯಾಲಿಯನ್ನು ಸಂಘಟಿಸಿತ್ತು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಆದಿವಾಸಿ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು.

ಶಾಂತಿಯುತವಾಗೇ ಇದ್ದದ್ದು....

ಈ ರ್‍ಯಾಲಿ ಶಾಂತಿಯುತವಾಗಿಯೇ ಆರಂಭವಾಗಿ ಅದುವರೆಗೂ ಶಾಂತವಾಗಿಯೆ ಇತ್ತು. ಆದರೆ ಬೆಲ್ತೋಲಾ ಪ್ರದೇಶ ತಲುಪುತ್ತಿದ್ದಂತೆ ಮೆರವಣಿಗೆಕಾರರಲ್ಲಿ ಒಂದು ಸಣ್ಣ ಗುಂಪು ಪಕ್ಕದಲ್ಲಿದ್ದ ಅಂಗಡಿಗಳಿಗೆ, ಮನೆಗಳಿಗೆ ಕೂಡಾ ಕಲ್ಲೆಸೆಯಲಾರಂಭಿಸಿ ಕಾನೂನು ವ್ಯವಸ್ಥೆಯ ಸಮಸ್ಯೆ ಉಂಟಾಯಿತು. ಇದನ್ನು ನಿಭಾಯಿಸಲು ಅಲ್ಲಿ ಪೋಲೀಸರೇ ಇರಲಿಲ್ಲ.

ತಡವಾಗಿ ಬಂದ ಪೋಲೀಸರು ತಮ್ಮ ವಿಳಂಬವನ್ನು ಸರಿಹೊಂದಿಸಲೆನ್ನುವಂತೆ ಬಂದ ಕೂಡಲೆ ದೊಣ್ಣೆ ಬೀಸಲಾರಂಭಿಸಿದರು, ಅಶ್ರುವಾಯು ಸಿಡಿಸಿದರು ಹಾಗೂ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಆದಿವಾಸಿಗಳನ್ನು ಅಟ್ಟಿಸಿಕೊಂಡು ಹೋದರು. ಆದಿವಾಸಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಕೆಲವರ ದೊಂಬಿಯಿಂದ ಕ್ರುದ್ಧರಾಗಿದ್ದ ಸ್ಥಳೀಯ ನಿವಾಸಿಗಳು ಪ್ರತಿಯಾಗಿ ಧಾಳಿ ಆರಂಭಿಸಿದರು.,ಆದಿವಾಸಿಗಳ ಮೇಲೆ ಹಿಂಸಾಚಾರಕ್ಕೆ ಇಳಿದರು. ಸುಮಾರು 300 ಮೆರವಣಿಗೆಕಾರರು ಗಾಯಗೊಂಡರು. ಕೆಲವು ಕಿಡಿಗೇಡಿಗಳು ಮಹಿಳೆಯರ ಮಾನಭಂಗ ನಡೆಸಲು ಪ್ರಯ್ನಿಸಿದರು ಎನ್ನಲಾಗಿದೆ. ಒಬ್ಬ ಆದಿವಾಸಿ ಹುಡುಗಿಯನ್ನು ಬತ್ತಲೆಗೊಳಿಸಿ ಹೊಡೆದು ಅಟ್ಟಿಸಿಕೊಂಡು ಹೋದರು. ಇನ್ನೊಬ್ಬಳ ಮೇಲ ಸಾಮೂಹಿಕ ಅತ್ಯಾಚಾರ ನಡೆಯಿತು. ಇನ್ನೊಂದು ಕಡೆ ಬಹಳ ಮಂದಿ ಸ್ಥಳೀಯರೂ ತಮ್ಮದೇ ಪ್ರದೇಶದ ಜನಜಂಗುಳಿಯ ಅಬ್ಬರವನ್ನು ಎದುರಿಸಿ ಆದಿವಾಸಿಗಳ ರಕ್ಷಣೆಗೆ ಧಾವಿಸಿದರು. ಪಾಶವೀಯ ವರ್ತನೆಯ ನಡುವೆಯೂ ಹೃದಯವಂತಿಕೆ ಧೈಯರ್ಯವಾಗಿ ದನಿಯೆತ್ತಿತ್ತು. ಆದರೂ ಸುಮಾರು ಮೂರು ಗಂಟೆಗಳ ಕಾಲ ಮೂರು ಕಿಲೋಮೀಟರ್ ವ್ಯಾಪ್ತಿಯ ಆ ಪ್ರದೇಶ ಭೀಕರ ಸಮರಾಂಗಣವಾಗಿ ಬಿಟ್ಟಿತು.

ಕಾಂಗ್ರೆಸ್ ಸರ್ಕಾರವೇ ಹೊಣೆ

ಈ ಘಟನೆಗೆ ಅಸ್ಸಾಂನ ಕಾಂಗ್ರೆಸ್ ಸರಕಾರವೇ ಹೊಣೆ ಎಂದು ನವೆಂಬರ್ 27ರಂದು ಸ್ಥಳಕ್ಕೆ ಭೇಟಿ ನೀಡಿದ ಎಡಪಕ್ಷಗಳ ನಿಯೋಗ ಹೇಳಿದೆ. ಆಡಳಿತ ಸಂಪೂರ್ಣವಾಗಿ ವಿಫಲಗೊಂಡಿತ್ತು ಮತ್ತು ಕಾನೂನು-ವ್ಯವಸ್ಥೆ ಕುಸಿದಿತ್ತು. ಪೊಲೀಸರ ನಿಷ್ಕ್ರಿಯತೆಯಿಂದಾಗಿ ವ್ಯಾಪಕ ಹಿಂಸಾಚಾರ ನಡೆದಿದೆ ಎಂದಿರುವ ಆಯೋಗ ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದೆ.

ಅಸ್ಸಾಂನಲ್ಲಿ ಆದಿವಾಸಿಗಳ ಜನಸಂಖ್ಯೆ ಸುಮಾರು 60ಲಕ್ಷ. ಇದು ಒಟ್ಟು ಜನಸಂಖ್ಯೆಯ 20ಶೇ.ರಷ್ಟಾಗುತ್ತದೆ. ಆದಿವಾಸಿಗಳು ರಾಜ್ಯದಾದ್ಯಂತ ಪಸರಿಸಿದ್ದರೂ ಚಹ ತೋಟಗಳಲ್ಲಿ ಇವರ ಪ್ರಮಾಣ ಹೆಚ್ಚಿದೆ. 19ನೇ ಶತಮಾನದ ಮಧ್ಯಭಾಗದಿಂದ ಬ್ರಿಟಿಷ್ ಚಹ ಕಂಪನಿಗಳು ಅವರ ಪ್ಲಾಂಟೇಶನುಗಳಲ್ಲಿ ಕೆಲಸ ಮಾಡಲು ಈಗಿನ ಬಿಹಾರ, ಒರಿಸ್ಸಾ, ಜಾರ್ಖಂಡ್, ಮಧ್ಯಪ್ರದೇಶ ಮತ್ತು ಆಂಧ್ರಪ್ರದೇಶದಿಂದ ಆದಿವಾಸಿಗಳನ್ನು ಕರೆತರಲಾರಂಭಿಸಿದರು. ಈಗ ಈ ಜನರನ್ನು ತಮ್ಮ ಮೂಲರಾಜ್ಯಗಳಲ್ಲಿ ಪರಿಶಿಷ್ಟ ಬುಡಕಟ್ಟು (ಎಸ್.ಟಿ)ಗಳಿಗೆ ಸೇರಿದವರೆಂದು ಪರಿಗಣಿಸಿದ್ದರೂ ಅಸ್ಸಾಂನಲ್ಲಿ ಮಾತ್ರ ಅವರನ್ನು ಇತರ ಹಿಂದುಳಿದ ವರ್ಗಗಳೆಂದೆ ಪರಿಗಣಿಸಿ ಹಲವು ಸೌಲಭ್ಯಗಳಿಂದ ಅವರು ವಂಚಿತರಾಗಿದ್ದಾರೆ.

ಅಸ್ಸಾಂನ ಎಲ್ಲ ರಾಜಕೀಯ ಪಕ್ಷಗಳು, ಕಾಂಗ್ರೆಸ್ ಕೂಡ ಈ ಜನಗಳಿಗೆ ಮತ್ತು ಅಸ್ಸಾಂನ ಇನ್ನೂ ಐದು ಸಮುದಾಯಗಳಿಗೆ ಎಸ್‌ಟಿ ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿಕೊಂಡು ಬಂದಿವೆ. ಅಸ್ಸಾಂ ವಿಧಾನ ಸಭೆ ಈ ಬಗ್ಗೆ ಒಂದು ಸರ್ವಾನುಮತದ ನಿರ್ಣಯವನ್ನೂ ಅಂಗೀಕರಿಸಿದೆ. ಇದರ ಅನುಷ್ಠಾನವಾಗಲಿ ಎಂದು ಆದಿವಾಸಿ ಸಂಘಟನೆಗಳು ಬಹಳ ವರ್ಷಗಳಿಂದ ಆಗ್ರಹಿಸುತ್ತಾ ಬಂದಿವೆ. ಆದರೆ ಕಾಂಗ್ರೆಸ್ ನೇತೃತ್ವದ ಸರಕಾರ ಈ ಕುರಿತು ಏನೇನೂ ಕ್ರಮ ಕೈಗೊಳ್ಳದಿರುವುದೇ ಆದಿವಾಸಿ ಯುವಜನರ ಅತೃಪ್ತಿಗೆ ಕಾರಣವಾಗಿದೆ.

ಹಿಂಸಾಚಾರ ನಡೆದ ಮರುದಿನವೆ ರಾಜ್ಯ ಸಿಪಿಐ(ಎಂ) ಗುವಹಾಟಿಯಲ್ಲಿ ಒಂದು ಬೃಹತ್ ಮೆರವಣಿಗೆ ನಡೆಸಿ ಹಿಂಸಾಚಾರವನ್ನು ಹಾಗೂ ರಾಜ್ಯಸರಕಾರದ ವಿಫಲತೆಯನ್ನು ಖಂಡಿಸಿದೆ. ಎಸ್‌ಟಿ ಸೌಲಭ್ಯಗಳನ್ನು ಈ ಸಮುದಾಯಗಳಿಗೆ ನೀಡಲು ಕೂಡಲೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದ ಮೆರವಣಿಗೆಕಾರರು ರಾಜ್ಯದಲ್ಲಿ ಜನಾಂಗೀಯ ಐಕ್ಯತೆ ಮತ್ತು ಸಾಮರಸ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ರಾಜ್ಯದ ಮುಖ್ಯಮಂತ್ರಿ ತರುಣ್ ಗೊಗೊಯ್ ಈಗ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಆರ್.ಕೆ.ಮನಿಸನಾ ಸಿಂಗ್‌ರವರು ಈ ಘಟನೆಯ ನ್ಯಾಯಾಂಗ ತನಿಖೆ ನಡೆಸುತ್ತಾರೆ ಎಂದಿದ್ದಾರೆ.

ನಂದಿಗ್ರಾಮ : ಸಂಕಟಗಳನ್ನು ತೋಡಿಕೊಂಡ ವಾಸಿಗಳು

ಸಾತೆಂಗಬಾರಿ ಎಂಬ ಹಳ್ಳಿ. ನರ್ಗಿಸ್ ಪರ್ವಿನ್ ಎರಡನೆ ತರಗತಿಯಲ್ಲಿ ಓದುತ್ತಿರುವ ಪುಟ್ಟ ಹುಡುಗಿ. ಸುಟ್ಟ ಬೊಂಬುಗಳ ರಾಶಿಯನ್ನು ತೋರಿಸುತ್ತಾ ಅದು ನಮ್ಮ ಮನೆಯಾಗಿತ್ತು ಎಂದು ಹೇಳಿದಳು. ಕತ್ತಲ ಮಸುಕಿನಲ್ಲಿ ಬಂದ ಕಿಡಿಗೇಡಿಗಳು ಈ ಬಡ ರೈತ ಕುಟುಂಬವನ್ನು ಮನೆಯಿಂದ ಹೊರಗಟ್ಟಿ ಮನೆಗೆ ಬೆಂಕಿ ಹಚ್ಚಿದ್ದನ್ನು ನೆನಪಿಸಿಕೊಳ್ಳುವಾಗ ಆಕೆ ನಡುಗುತ್ತಿದ್ದಳು.

ಘರ್ಚಕ್ರಬೇರಿಯಾದ ಪಂಚಾಯತಿನ ಶಿಕ್ಷಣ ಉಪಸಮಿತಿಯ ಮಹಮ್ಮದ್ ಯಾಸೀನ್ ಕುಟಂಬದ ಮನೆಯನ್ನು ಸುಟ್ಟು, ಲೂಟಿ ಮಾಡಿ ಓಡಿಸಲಾಯಿತು. ಸುಮಾರು 10ತಿಂಗಳ ಕಾಲ ಒಂದು ರೀತಿಯ ಬಹಿಷ್ಕಾರಕ್ಕೆ ಗುರಿ ಮಾಡಲಾಯಿತು. ಆತನ ಮಗಳು ಕಾಯಿಲೆ ಬಿದ್ದಾಗ ವೈದ್ಯಕೀಯ ನೆರವು ಸಿಗದೆ ಕೊನೆಯುಸಿರೆಳೆದಳು.

ಮೊದಲು ತೃಣಮೂಲ ಕಾಂಗ್ರೆಸ್, ನಂತರ ಮಾವೋವಾದಿಗಳು ಎಂದು ಹೇಳಿಕೊಳ್ಳುವವರು ಜನವರಿ 3ರಿಂದಲೇ ತಮ್ಮ ಜೀವನವನ್ನು ನರಕಗೊಳಿಸಿದರು ಎಂದರು ಅಮರ್ ಪ್ರಾಮಾಣಿಕ್, ಶೇಖ್ ರಾಕಿರ್ ಹುಸೇನ್, ದಿಲ್ಜಾನ್ ಮಹಮ್ಮದ್. ಈ ಶಿಕ್ಷೆಗೆ ಇವರೆಲ್ಲರ ತಪ್ಪಾದರೂ ಏನು? ಅವರು ಸಿಪಿಐ(ಎಂ) ಬೆಂಬಲಿಗರಾಗಿದ್ದುದೇ ಅವರ ದೊಡ್ಡ ತಪ್ಪು! ಇನ್ನು ಮುಂದೆ ಸಿಪಿಐ(ಎಂ)ನ್ನು ಬೆಂಬಲಿಸುವುದಿಲ್ಲ ಎಂದು ಬಡಜನಗಳಿಂದ ಬಾಂಡ್ ಬರೆಸಿಕೊಂಡರು, ಕೆಲವರಿಗೆ ಐವತ್ತು ಸಾವಿರ ರೂಪಾಯಿ ವರಗೆ 'ದಂಡ' ವಿಧಿಸಿದರು!

ಇವು ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯರಾದ ಶ್ಯಾಮಲ್ ಚಕ್ರವರ್ತಿ, ಶ್ಯಾಮಲಿ ಗುಪ್ತ ಮತ್ತು ಮಹಮ್ಮದ್ ಸಲೀಂ ನಂದಿಗ್ರಾಮಕ್ಕೆ ಭೇಟಿ ನೀಡಿದಾಗ ಜನರು ಬಂದು ತೋಡಿಕೊಂಡ ಗೋಳಿನ ಕಥೆಗಳು. ನವಂಬರ್ 27ರಂದು ಹಲವು ಬಾರಿ ಸುಟ್ಟು ಹಾಕಲ್ಪಟ್ಟ, ಈಗ ಮತ್ತೆ ಕಟ್ಟಿರುವ ಪಕ್ಷದ ನಂದಿಗ್ರಾಮ ವಲಯ ಕಚೇರಿಯಿಂದ ಕಾಲ್ನಡಿಗೆಯಲ್ಲಿ ಹೊರಟ ಇವರು ದಿನವಿಡೀ ಸಂತ್ರಸ್ತ ಪ್ರದೇಶಗಳಿಗೆ ಭೇಟಿ ನೀಡಿ ಜನಗಳ ಸಂಕಟಗಳನ್ನು ಕೇಳಿದರು,

ಜನಗಳು ಸಿಆರ್‌ಪಿಎಫ್(ಕೇಂದ್ರೀಯ ಮೀಸಲು ಪೋಲೀಸ್ ಪಡೆ) ನಡೆಸಿದ ಅತ್ಯಾಚಾರಗಳ ವಿವರಗಳನ್ನೂ ಮುಖಂಡರ ಮುಂದಿಟ್ಟರು. ಇವು ಮೂರು ರೀತಿಗಳಲ್ಲಿ ನಡೆದುವು ಎಂದು ತಿಳಿದು ಬಂತು. ಒಂದು, ಸಿಆರ್‌ಪಿಎಫ್‌ನವರೇ ನೇರವಾಗಿ ಅತ್ಯಾಚಾರ ನಡೆಸಿದರು, ಎರಡು, ತೃಣಮೂಲ ಕಾಂಗ್ರೆಸಿನ ಗೂಂಡಾಗಳ ಕುಮ್ಮಕ್ಕಿನಿಂದ ಹಾಗೂ ಮೂರು, ಆ ಗೂಂಡಾಗಳು ಹಿಂಸಾಚಾರಕ್ಕೆ ಇಳಿದಾಗ ಅವರಿಗೆ ರಕ್ಷಣೆ. ಈ ಸಿಆರ್‌ಪಿಎಫ್ ನವರು ಮಾನಭಂಗ ಮಾಡುವ ಬೆದರಿಕೆ ಹಾಕಿದರು ಎಂದು ಮಹೇಶಪುರದ ಸುಪ್ರೀತಿದಾಸ್ ನಿವೇದಿಸಿದರೆ, ಶಂಕರಿ ಮನ್ನ ಮತ್ತು ಗೀತಾ ಬರ್ಮನ್‌ಗೆ ತಮ್ಮ ಕಥೆ ಹೇಳುವಾಗ ಅಳು ಒತ್ತರಿಸಿ ಬಂತು.

ಸಿಪಿಐ(ಎಂ) ಮುಖಂಡರು ಇನ್ನೂ ಭಯದ ವಾತಾವರಣದಲ್ಲಿರುವ ನಂದಿ ಗ್ರಾಮ ದ ನಿವಾಸಿಗಳಿಗೆ ಭದ್ರತೆ ಒದಗಿಸುವಂತೆ ರಾಜ್ಯ ಆಡಳಿತದೊಡನೆ ಮಾತಾಡುವುದಾಗಿ ಭರವಸೆ ನೀಡಿದರು. ನಂತರ ತಾಲೂಕ್ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಭೇಟಿಯಾದರು. ○



ಕೇರಳದಲ್ಲಿ ಕೋಮುಗಲಭೆ ಎಬ್ಬಿಸುವ ಆರೆಸ್ಸೆಸ್ ಯೋಜನೆ

ಆರೆಸ್ಸೆಸ್ ಕೇರಳದಲ್ಲಿ ಶಿಕ್ಷಣ ಸಂಸ್ಥೆಗಳ ಮೇಲೆ ಮತ್ತು ತಮ್ಮ ರಾಜಕೀಯ ಶತ್ರುಗಳ ಮೇಲೆ ಸರಣಿ ಧಾಳಿಗಳನ್ನು ನಡೆಸುವ ಪಿತೂರಿ ನಡೆಸುತ್ತಿದೆ ಎಂದು ಕೇರಳದ ಗುಪ್ತಚರ ಮುಖ್ಯಾಲಯಕ್ಕೆ ವರದಿಗಳು ಬಂದಿವೆಯೆಂದು ತಿಳಿದು ಬಂದಿದೆ. ಇದಕ್ಕಾಗಿ ಅವರು ಸ್ಫೋಟಕಗಳನ್ನು, ಮಾರಕಾಸ್ತ್ರಗಳನ್ನು ಸಂಗ್ರಹಿಸಿಟ್ಟಿದ್ದಾರೆ ಎಂದೂ ತಿಳಿದು ಬಂದಿದೆ. ಅವರು ಈ ಕೃತ್ಯಗಳನ್ನು ನಡೆಸುವುದಕ್ಕಾಗಿ 30 ವರ್ಷಗಳ ಕೆಳಗಿನ ಗಂಡಸರ ಭರ್ತಿ ನಡೆಸುತ್ತಿದ್ದಾರೆ ಎಂದು ಗುಪ್ತಚರ ಮೂಲಗಳಿಂದ ತಿಳಿದು ಬಂದಿದೆ. ಮುಖ್ಯವಾಗಿ ಪಾಲಕ್ಕಡ್, ಕಣ್ಣೂರು ಮತ್ತು ಕೋಜಿಕೋಡ್ ಈ ಮೂರು ಜಿಲ್ಲೆಗಳನ್ನು ಅವರು ಆರಿಸಿಕೊಂಡಿದ್ದಾರಂತೆ. ಕೋಜಿಕೋಡ್‌ನ ಮರಾಡ್, ಮುಖ್ಯಮಂತ್ರಿಗಳ ಚುನಾವಣಾ ಕ್ಷೇತ್ರದಲ್ಲಿರುವ ಮಾಲಂಪುಳ, ಚಂಗನಚೇರಿ ಮುಂತಾದೆಡೆ ಆಗಲೇ ಇದರ ಸಂಕೇತ ದೊರೆತಿದೆ.

ಎಲ್‌ಡಿಎಫ್ ವಿರುದ್ಧ ಟೀಕೆಗಳು ಫಲಪ್ರದವಾಗುತ್ತಿಲ್ಲ ಎಂದು ಹತಾಶಗೊಂಡಿರುವ ಕಾಂಗ್ರೆಸ್ ಈ ಪಿತೂರಿಗಾರರಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿನರಾಯಿ ವಿಜಯನ್ ಆರೆಸ್ಸೆಸ್‌ನ್ನು ದೂರವಿಟ್ಟು ರಾಜ್ಯವನ್ನು, ಅದರ ಶಾಂತಿಯುತ ಜೀವನವನ್ನು ಕಾಪಾಡಿಕೊಳ್ಳಬೇಕು ಎಂದು ಎಲ್ಲಾ ಜನರಿಗೆ ಮನವಿ ಮಾಡಿದ್ದಾರೆ.



ಭಾರತೀಯ ಮುಸ್ಲಿಮರು ಸಾಮಾಜಿಕವಾಗಿ, ಆರ್ಥಿಕವಾಗಿ ತೀರಾ ಹಿಂದುಳಿದವರಾಗಿದ್ದಾರೆ. ಶಿಕ್ಷಣಾವಕಾಶಗಳ ಹೆಚ್ಚಳ, ಆಧುನಿಕ ಶಿಕ್ಷಣ ಅವರ ಪ್ರಗತಿಗೆ ಒಂದು ಆಧಾರವಾಗಬಲ್ಲದು.

ಮುಸ್ಲಿಮರ ಮುಂದಿರುವ ಹಾದಿ

ಇಕ್ಬಾಲ್ ಹುಸೇನ್

ಸಾಮಾನ್ಯವಾಗಿ ಎಲ್ಲಾ ರಾಜಕೀಯ ಪಕ್ಷಗಳು ಮುಸ್ಲಿಂ ಮತದಾರರ ಒಲವುಗಳಿಸಲು ಅದರಿಂದ ರಾಜಕೀಯ ಲಾಭ ಪಡೆಯಲು ಚುನಾವಣಾ ಸಮಯದಲ್ಲಿ ಪ್ರಯತ್ನಿಸುತ್ತವೆ. ಆದರೆ, ಚುನಾವಣೆ ಮುಗಿದು ಅಧಿಕಾರದ ಗದ್ದುಗೆ ಏರಿದ ನಂತರ ಮುಸಲ್ಮಾನರನ್ನು ಕಾಡುತ್ತಿರುವ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ, ಇಡೀ ಸಮುದಾಯವನ್ನು ಭಾರತೀಯ ಸಮಾಜದ ಒಂದು ಅಂಗವಾಗಿ ಮೇಲಕ್ಕೆ ತರುವ ಕಾರ್ಯಕ್ರಮ ರೂಪಿಸುವುದೇ ಇಲ್ಲ. ಕಾಂಗ್ರೆಸ್ ಪಕ್ಷವಂತೂ ಮೊದಲಿನಿಂದಲೂ ಅಲ್ಪಸಂಖ್ಯಾತರ ಜೊತೆ ಕಣ್ಣು ಮುಚ್ಚಾಲೆ ಆಡುತ್ತಾ ಬಂದಿದೆ. ಎಡಪಕ್ಷಗಳು ಮಾತ್ರ ಇದಕ್ಕೆ ಹೊರತು.

ಶಿಕ್ಷಣದ ಸಾಕ್ಷಿ

ಇದಕ್ಕೆ ಶಿಕ್ಷಣ ಕ್ಷೇತ್ರವೇ ಸಾಕ್ಷಿ. ಒಮ್ಮೆ ಸರ್ಕಾರಿ ಉರ್ದು ಶಾಲೆಗಳತ್ತ ಗಮನಹರಿಸಿ, ಅಲ್ಲಿ ಓದುವ, ಆಡುವ ಮಕ್ಕಳಿಗೂ ಕಾನ್ವೆಂಟ್ ಸ್ಕೂಲುಗಳಲ್ಲಿ ಓದುವ ಮಕ್ಕಳಿಗೂ ಎಷ್ಟು ವ್ಯತ್ಯಾಸ? ಸರ್ಕಾರಿ ಕನ್ನಡ ಶಾಲೆಯ ಮಕ್ಕಳು ಮತ್ತು ಉರ್ದು ಶಾಲೆಯ ಮಕ್ಕಳಿಗೂ ವ್ಯತ್ಯಾಸವಿಲ್ಲ. ಏಕೆಂದರೆ ಇಲ್ಲಿ ಓದುವವರು ಸಮಾಜದ ಅತ್ಯಂತ ಕೆಳಸ್ತರದಲ್ಲಿ ಜೀವನ ಮಾಡುವ ಕೂಲಿ, ರಿಪೇರಿ, ಗ್ಯಾರೇಜು, ಗಾರೆಕೆಲಸ ಮುಂತಾದ ದಿನಗೂಲಿ ಕೆಲಸಗಾರರ ಮಕ್ಕಳು. ಇವರಿಗೆ ಸಮವಸ್ತ್ರವೂ ಇಲ್ಲ, ಪಠ್ಯ ಪುಸ್ತಕಗಳೂ ಇಲ್ಲ. ಹಲವಾರು ವಿದ್ಯಾರ್ಥಿಗಳ ಕಾಲಿಗೆ ಚಪ್ಪಲಿಯೂ ಇರುವುದಿಲ್ಲ.

ಹೀಗಾಗಿ ಭಾರತದ ಒಟ್ಟು ಸಾಕ್ಷರತೆ ಶೇಕಡ 63.07 ಇದ್ದರೆ ಮುಸ್ಲಿಮರ ಸಾಕ್ಷರತೆ ಕೇವಲ ಶೇ.41.27. ದೇಶದಲ್ಲಿ ಮಹಿಳಾ ಸಾಕ್ಷರತೆ ಶೇ.40.54 ಇದೆ. ಆದರೆ ಮುಸ್ಲಿಂ ಮಹಿಳೆಯರ ಸಾಕ್ಷರತೆ ಶೇ.21.68 ಮಾತ್ರ. ಈ ಸಮೀಕ್ಷೆಯನ್ನು "ಫ್ರೆಂಡ್ಸ್ ಫಾರ್ ಎಜುಕೇಷನ್" ಸ್ವಯಂ ಸೇವಾ ಸಂಸ್ಥೆ ಹೊರತಂದಿದೆ. ಇತ್ತೀಚೆಗೆ ಬಿಡುಗಡೆ ಆದ ಸಾಚಾರ್ ಸಮಿತಿ ವರದಿ ಹಾಗೂ ಯೋಜನಾ ಆಯೋಗದ ಅಂಕಿ ಅಂಶಗಳು ಭಾರತೀಯ ಅಲ್ಪಸಂಖ್ಯಾತರಲ್ಲಿ ಬಹುಸಂಖ್ಯಾತರಾದ ಮುಸ್ಲಿಮರು ವಿದ್ಯೆಯ ಜೊತೆಯಲ್ಲಿ ತಮ್ಮ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಂತಸ್ತಿನಲ್ಲಿ ಅಧೋಗತಿಗೆ ಇಳಿದಿರುವುದನ್ನು ಎತ್ತಿ ತೋರಿಸುತ್ತದೆ.

ಭಾರತೀಯ ಜನಸಂಖ್ಯೆಯಲ್ಲಿ ಗಣನೀಯ ಸಂಖ್ಯೆಯಲ್ಲಿ ಇದ್ದರೂ ಶಾಸನ ಸಭೆ ಮತ್ತು ಸಂಸತ್ತಿನ ಚುನಾವಣೆಗಳು ಬಂದಾಗ ಬೆರಳಣಿಕೆಯಷ್ಟು ಮುಖಂಡರು ಮಾತ್ರ ಚುನಾವಣೆಯಲ್ಲಿ ಆಯ್ಕೆ ಆಗುತ್ತಾರೆ. ಉಳಿದಂತೆ, ಬಹುತೇಕ ರಾಜಕೀಯ ಪಕ್ಷಗಳು ಮುಸ್ಲಿಮರನ್ನು ಮರಿ ನಾಯಕರನ್ನಾಗಿ, ಹಿಂಬಾಲಕರನ್ನಾಗಿ ಮಾಡಿ "ನಮ್ಮ ಹಿಂದೆ ಇರುವುದೇ ನಿಮಗೆ ಕ್ಷೇಮ" ಎನ್ನುವಂತೆ ಮಾಡಿದ್ದಾರೆ. ಸ್ವಲ್ಪಮಟ್ಟಿಗೆ ವಿದ್ಯೆ ಮತ್ತು ಸಂಘಟನೆ ಮಾಡಿಕೊಂಡಿರುವ ಮುಸ್ಲಿಮರು ಯಾವುದಾದರೂ ಸಮಿತಿ ಸದಸ್ಯನೋ, ಪದಾಧಿಕಾರಿಯೋ ಅಥವಾ ಅಪರೂಪಕ್ಕೆ ಆರು ತಿಂಗಳು ಅಧ್ಯಕ್ಷ ಆದರೆ ಅಲ್ಲಿಗೆ ಅವನ ರಾಜಕೀಯ ಜೀವನ ಮುಗಿಯಿತು.

ಮೀಸಲಾತಿ ಪ್ರಶ್ನೆ

ಈಗೀಗ ಮುಸ್ಲಿಮರಿಗೆ ಮೀಸಲಾತಿ ನೀಡಬೇಕು ಎನ್ನುವ ಹೊಸ ಘೋಷಣೆ ಕೇಳಿ ಬರುತ್ತಿದೆ. ಆದರೆ, ಸ್ವಾತಂತ್ರ್ಯ ನಂತರದ ಬೆಳವಣಿಗೆಗಳು ಹಾಗೂ 1947ರಲ್ಲಿ ಆದ ಮೀಸಲಾತಿ ಪದ್ಧತಿಯ ಫಲಿತಾಂಶಗಳನ್ನು ಪರೀಕ್ಷಿಸಿದರೆ ಧರ್ಮ/ಜಾತಿ ಆಧರಿಸಿ ಮಾಡಿರುವ



ಮೀಸಲಾತಿಗಳಿಂದ ಆಯಾ ಧರ್ಮ ಅಥವಾ ಜಾತಿ ಇಡೀ ಜನಾಂಗವಾಗಿ ಏಳಿಗೆ ಹೊಂದಿಲ್ಲದಿರುವುದು ವಿಧಿತ. ಮೀಸಲಾತಿಯ ಫಲವೂ ಆಯಾ ವರ್ಗ-ಜಾತಿಗಳಲ್ಲಿರುವ ಶ್ರೀಮಂತರು, ಮೇಲು ಮಧ್ಯಮ ವರ್ಗದವರೇ ಹೆಚ್ಚಾಗಿ ಅನುಭವಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ಒಂದು ಕಡೆ ನೆಮ್ಮದಿಯ ಜೀವನಕ್ಕಾಗಿ ಹೋರಾಟ ನಡೆಸುತ್ತಾ ಮತ್ತೊಂದು ಕಡೆ ತನ್ನನ್ನು ಜೆಹಾದೀ, ಭಯೋತ್ಪಾದಕ, ಸಂಪ್ರದಾಯಸ್ಥ, ಮಕ್ಕಳನ್ನು ಜಾಸ್ತಿ ಮಾಡುವವನು, ಜಗಳಗಂಟ ಮುಂತಾಗಿ ನಿಂದಿಸುವ ನಿಂದನೆಗಳ ನಡುವೆ ಧರ್ಮ, ಭಾಷೆ, ವೈಯಕ್ತಿಕ ಕಾನೂನು, ಬಾಬರಿ ಮಸೀದಿ ಇತ್ಯಾದಿ ತನಗೆ ಅರಿವೇ ಇಲ್ಲದ ಸಮಸ್ಯೆಗಳ ಸರಮಾಲೆಯಲ್ಲಿ ಭಾರತೀಯ ಮುಸಲ್ಮಾನರು ಸಿಲುಕಿದ್ದಾರೆ. ದೇಶಕ್ಕೆ, ಭಾರತೀಯ ಮುಸಲ್ಮಾನರ ಕೊಡುಗೆ, ತ್ಯಾಗ, ಬಲಿದಾನಗಳ ವರ್ಣನೆಯನ್ನು ಕೇಳುವ-ಓದುವ ಬದಲಿಗೆ ದೂಷಣೆಯನ್ನೇ ಕೇಳಬೇಕಾಗಿದೆ. ಈ ದೂಷಣೆಯನ್ನು ಮಾಡುತ್ತಿರುವವರು ಶೇಕಡ ಎರಡು ಅಥವಾ ಮೂರು ಮಂದಿ ಮಾತ್ರ. ಉಳಿದಂತೆ ಸಾಮಾನ್ಯ ಭಾರತೀಯರಿಗೂ ಮುಸ್ಲಿಮರಿಗೂ ವ್ಯತ್ಯಾಸವಿಲ್ಲ. ಸೋದರತೆ, ಸಾಮಾಜಿಕ ನ್ಯಾಯ ಹಳ್ಳಿ ಹಳ್ಳಿಗಳಲ್ಲಿ ಇಂದಿಗೂ ಜೀವಂತವಿದೆ. ಇದ ದೊಡ್ಡ ಸಮಾಧಾನ.

ಶೇ ಒಂದು ಮೀರಲಾರದು

ಬಾಬರಿ ಮಸೀದಿ ಬಿದ್ದಾಗ ನಿಜವಾಗಿ ಸಂತೋಷ ಅನುಭವಸಿದ ಹಿಂದೂಗಳ ಸಂಖ್ಯೆ ಶೇಕಡ ಒಂದನ್ನು ಮೀರಲಾರದು. ಜಾತ್ಯಾತೀತ ಭಾರತದ ಮುಸ್ಲಿಮರು ಇತರೆ ದೇಶಗಳಲ್ಲಿ ಇರುವ ಮುಸ್ಲಿಮರಷ್ಟೇ, ಅದಕ್ಕಿಂತ ಹೆಚ್ಚಾಗಿಯೇ ಸುರಕ್ಷಿತವಾಗಿ ಇದ್ದಾರೆ. ಏಕೆಂದರೆ ಇಲ್ಲಿ ಆರ್ಥಿಕ ಸಾಮ್ರಾಜ್ಯವಾದ ಇದೆ. ಆದರೆ ಇಲ್ಲಿ ಅಷ್ಟು ಕೆಟ್ಟ ಸರ್ವಾಧಿಕಾರದ ಪರಿಸ್ಥಿತಿಯಿಲ್ಲ.

ಉಳಿದಿರುವ ಉಪಾಯ

ಎಲ್ಲಿಯವರೆಗೆ ಮುಸ್ಲಿಮರು ವಿದ್ಯೆಗಳಿಸುವುದಿಲ್ಲವೋ ಅಲ್ಲಿಯವರೆಗೆ ಅವರು ದೇಶದ ಪ್ರಜಾಪ್ರಭುತ್ವದಲ್ಲಿ ಗಟ್ಟಿ ಧ್ವನಿಯಾಗುವುದಕ್ಕೆ ಸಾಧ್ಯವಿಲ್ಲ. ಭಾರತೀಯ ಪ್ರಜಾಸತ್ತೆಯ ಎಲ್ಲಾ ಅನುಕೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ತಲೆಎತ್ತಿ ನಿಲ್ಲುವುದಕ್ಕೆ ಆಗುವುದಿಲ್ಲ. ಇದನ್ನು ಸಾಧ್ಯ ಮಾಡಿ ಬದುಕುವುದೇ ಉಳಿದಿರುವ ಉಪಾಯ. ಇದಕ್ಕಾಗಿ, ಮದರಸಗಳಲ್ಲಿಯೂ ಆಧುನಿಕ ಶಿಕ್ಷಣವನ್ನು ಅಳವಡಿಸಿ ಇತರರೊಂದಿಗೆ

ಪುಟ 14 ಕ್ಕೆ

ಪರಿಷತ್ ಸಮ್ಮೇಳನದ ಎದುರು ಸೌಹಾರ್ದ ಸಮ್ಮೇಳನ

ಒಂದು ತಪ್ಪನ್ನು ಇನ್ನೊಂದು ತಪ್ಪಿಂದ ಸರಿಪಡಿಸಬಹುದೇ?

ಡಿಸೆಂಬರ್ 12 ರಿಂದ 15ರವರೆಗೆ 74ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಉಡುಪಿಯಲ್ಲಿ ನಡೆಯಲಿದ್ದು, ಮತ್ತೊಮ್ಮೆ ಕರ್ನಾಟಕ ಸಾಹಿತ್ಯದ ಸಾಂಸ್ಕೃತಿಕ ವಲಯದಲ್ಲಿ ತೀವ್ರವಾದ ಚರ್ಚೆಗಳು ನಡೆಯುತ್ತಿವೆ.

ಸಂಘ ಪರಿವಾರದ ಹಿಡಿತದಲ್ಲಿ ಈ ಸಾಹಿತ್ಯ ಸಮ್ಮೇಳನವು ನಡೆಯುತ್ತಿದೆ. ಸಮ್ಮೇಳನಾಧ್ಯಕ್ಷರು ಸಂಘ ಪರಿವಾರಕ್ಕೆ ಸೇರಿದ, 'ರಾಷ್ಟ್ರೋತ್ಥಾನ' ದ ಪ್ರಕಟಣಾ ವಿಭಾಗದಲ್ಲೇ ಸುದೀರ್ಘವಾಗಿ ಕೆಲಸ ಮಾಡಿ ಅದೇ ಗರಡಿಯಲ್ಲಿ ಪಳಗಿದವರು. ಇಂತಹ ಸಮ್ಮೇಳನದಲ್ಲಿ ಕರ್ನಾಟಕದ ನಾಡು, ನುಡಿ, ಜನ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು ಸಮರ್ಥವಾಗಿ ಚರ್ಚೆಗೆ ಬರುವ ಸಂಭವವಿಲ್ಲ ಎಂಬ ಕಾರಣ ನೀಡಿ, ಇದೇ ಉಡುಪಿಯಲ್ಲಿ ಡಿಸೆಂಬರ್ 9 ರಂದು. ಸೌಹಾರ್ದ ಸಾಹಿತ್ಯ ಸಮ್ಮೇಳನ ಎಂಬುದೊಂದನ್ನು ಸಂಘಟಿಸಲಾಗುತ್ತಿದೆ.

ಎಸ್.ಎಲ್.ಶೇಷಗಿರಿರಾಯರು, ಕೇಶವ ಕೃಪ, ಕೇಶವ ಶಿಲ್ಪ ಕಡೆದ ಶಿಲ್ಪ ಎಂಬ ಬಗ್ಗೆ ಅನುಮಾನವೇನೂ ಇಲ್ಲ. ಇದರ ಪರಿಣಾಮವೋ ಎಂಬಂತೆ ಪರಿಷತ್‌ನ ಸಮ್ಮೇಳನದಲ್ಲಿ ಈ ಬಾರಿ ಕರ್ನಾಟಕದ ಜನರ ಬದುಕನ್ನು ಬಾಧಿಸುತ್ತಿರುವ ಕೋಮುವಾದದ ವಿಷಯದ ಬಗ್ಗೆ ಚರ್ಚೆ ಇಲ್ಲ. ದಲಿತ ಸಮುದಾಯದ ನೋವು ಸಂಕಟಗಳ ಬಗೆಗೂ ಗೋಷ್ಠಿಗಳಿಲ್ಲ.

ಕಳೆದ ವರ್ಷದ ಶಿವಮೊಗ್ಗ ಸಮ್ಮೇಳನದಲ್ಲಿ ಕೋಮುವಾದಿಗಳಿಗೂ ಕೋಮುವಾದದ ವಿರೋಧಿಗಳಿಗೂ ನೇರ ಹಣಾಹಣಿ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಚಂಪಾರವರು ಕೋಮುವಾದದ ವಿರುದ್ಧ ಸ್ಪಷ್ಟ ನಿಲುವು ತೆಗೆದುಕೊಂಡಿದ್ದರು. ಆದರೆ ಈ ಬಾರಿ ಅವರ ಪಾತ್ರ ಯಾಕೋ ಮಂಕಾದಂತಿದೆ. ಕೋಮುವಾದಿ ಶಕ್ತಿಗಳ ಬಿಗಿಪಟ್ಟಿಗೆ ಅವರು ಮಣಿದು ಬಿಟ್ಟರೆ(!) ಎಂಬ ಪ್ರಶ್ನೆ ಎದುರಾಗಿದೆ.

ಸಮ್ಮೇಳನಾಧ್ಯಕ್ಷರ ಆಯ್ಕೆ ನಡೆದ ವಿಧಾನವೇ ಈ ಬಾರಿ ಆತಂಕಕ್ಕೆ ಕಾರಣವಾಯಿತು. ಸಮ್ಮೇಳನಾಧ್ಯಕ್ಷರ ಸ್ಥಾನಕ್ಕೆ ಮೊದಲಿನಿಂದಲೂ ಕನ್ನಡದ ಹಿರಿಯ ಸಾಹಿತಿ ವ್ಯಾಸರಾಯಬಲ್ಲಾಳರ ಹೆಸರು ಪರಿಗಣನೆಯಲ್ಲಿತ್ತು. ಸಾಕಷ್ಟು ದಿನ ಈ ಪ್ರಸ್ತಾಪಕ್ಕೆ ಪ್ರತಿರೋಧ, ವಿರೋಧ ಇದ್ದಂತೆ ಕಾಣಬರಲಿಲ್ಲ. ಆದರೆ ಅಧಿಕೃತವಾಗಿ ಅಧ್ಯಕ್ಷರ ಆಯ್ಕೆಯಾಗುವ ಹೊತ್ತಿಗೆ ದಿಢೀರ್ ಬೆಳವಣಿಗೆಗಳಾದಂತೆ ಕಂಡು ಬಂದವು.

ಒಬ್ಬ ಗೌರವಾನ್ವಿತ ಸಾಹಿತಿಯ ಹೆಸರನ್ನು ಹೀಗೆ ಬಹಿರಂಗವಾಗಿ ಎಳೆದಾಡಿ ಆ ಮೇಲೆ ಈ ರೀತಿಯ ಬೆಳವಣಿಗೆಯಾಗುವುದು ನಿಜಕ್ಕೂ ಆ ಸಾಹಿತಿಗೆ ಮಾಡುವ ಅವಮಾನ. ಎಸ್.ಎಲ್.ಶೇಷಗಿರಿ ರಾಯರ ಜಾಗದಲ್ಲಿ ನಿಜಕ್ಕೂ ಒಬ್ಬ ಸೂಕ್ಷ್ಮ ಮನಸ್ಸಿನ ವಿವೇಕವಂತ ಇದ್ದಿದ್ದರೆ ಇಂತಹ ಸನ್ನಿವೇಶದಲ್ಲಿ ಸಮ್ಮೇಳನ ಅಧ್ಯಕ್ಷಗಿರಿಯನ್ನು ಒಪ್ಪುತ್ತಲೇ ಇರಲಿಲ್ಲ. ಇರಲಿ ಅದೀಗ ಹಳೆಯ ಮಾತು.

ಇನ್ನೂ ಕೆಲವರಿಂದ ಪರ್ಯಾಯ ಸಮ್ಮೇಳನ ಎಂದೂ ಕೆಲವರಿಂದ ಪೂರಕ ಸಮ್ಮೇಳನ ಎಂದೂ



'ಸಂಘ ಮಿತ್ರ' ಎಸ್.ಎಲ್.ಶೇಷಗಿರಿರಾಯರು ಆಹ್ವಾನ ಪತ್ರಿಕೆಯ ಹಿನ್ನೆಲೆಯಲ್ಲಿ

ಕರೆಸಿಕೊಳ್ಳುತ್ತಿರುವ ಸೌಹಾರ್ದ ಸಾಹಿತ್ಯ ಸಮ್ಮೇಳನದ ಬಗೆಗೆ ಹೇಳುವುದಾದರೆ ಡಾ. ಜಿ.ರಾಮಕೃಷ್ಣ ಇದರ ಅಧ್ಯಕ್ಷರು ಜಿ.ರಾಜಶೇಖರ್, ಸಾರಾ ಅಬೂಬಕರ್,

ಪುಟ 10 ಕ್ಕೆ

ಚಾರಿತ್ರಿಕ ಮಹಾಡ್ ಸತ್ಯಾಗ್ರಹಕ್ಕೆ ಸ್ಫೂರ್ತಿಯಾದ ದಾಸ್‌ಗಾಂವ್ ಸತ್ಯಾಗ್ರಹಕ್ಕೆ 81 ವರ್ಷ

ಮಹಾರಾಷ್ಟ್ರದ ಚಾರಿತ್ರಿಕ ಮಹಾಡ್ ಸತ್ಯಾಗ್ರಹಕ್ಕೆ ಸ್ವಲ್ಪ ಮುಂಚೆ 'ದಾಸ್‌ಗಾಂವ್' ಸತ್ಯಾಗ್ರಹ ನಡೆದಿದ್ದು ಅದರ ನೇತೃತ್ವವನ್ನು ಕಮ್ಯುನಿಸ್ಟ್ ನಾಯಕ, ಅಂಬೇಡ್ಕರರ ನಿಕಟವರ್ತಿ ಕಾಂ. ಆರ್.ಬಿ.ಮೋರೆ ವಹಿಸಿದ್ದರು. ಚರಿತ್ರೆಯ ಪುಟಗಳಲ್ಲಿ ಸ್ವಲ್ಪ ಮರೆಯಲ್ಲೇ ಉಳಿದಿರುವ ಈ ಹೋರಾಟದ ಬಗೆಗೆ ಒಂದು ಲೇಖನ.

ನಿತ್ಯಾನಂದಸ್ವಾಮಿ

ದಲಿತರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಗುರುತಿಸಲಾಗುತ್ತಿರುವ 'ಮಹಾಡ್ ಸತ್ಯಾಗ್ರಹ' ನಡೆದದ್ದು 1927ರ ಮಾರ್ಚ್ 27ರಂದು. ಅಂದು ಮಹಾನ್ ಹೋರಾಟಗಾರ ಡಾ. ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸುಮಾರು ಹತ್ತು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ದಲಿತರು ಮಹಾರಾಷ್ಟ್ರದ ಕೊಲಾಬಾ ಜಿಲ್ಲೆಯ ಮಹಾಡ್ ನಗರದ ಚೌದರ್ ಕೆರೆಯ ನೀರನ್ನು ಸ್ಪರ್ಶಿಸುವ ಮೂಲಕ ಶತಮಾನಗಳಿಂದ ಅವರು ಅನುಭವಿಸುತ್ತಾ ಬಂದಿದ್ದ ಅಮಾನುಷವಾದ ಜಾತಿ ಅಸ್ಪೃಶ್ಯತೆಯ ವಿರುದ್ಧ ಸಮರ ಸಾರಿದರು. ಈ ಚಳುವಳಿಯನ್ನು ಅಂದಿನ ಬೊಂಬಾಯಿ ಶಾಸನ ಸಭೆಯ ಸದಸ್ಯರಾದ ಶ್ರೀ ಎಸ್.ಕೆ.ಬೋಲೆಯವರು ಮಂಡಿಸಿದ ಮತ್ತು ಬಾಂಬೆ ಸರ್ಕಾರ 1923ರಲ್ಲಿ ಅಂಗೀಕರಿಸಿದ ಗೊತ್ತುವಳಿಯ ಜಾರಿಗಾಗಿ ಹಮ್ಮಿಕೊಳ್ಳಲಾಗಿತ್ತು. ಗೊತ್ತುವಳಿಯಲ್ಲಿ ಹೀಗೆ ಹೇಳಲಾಗಿತ್ತು.

"ಸಾರ್ವಜನಿಕ ಹಣದಿಂದ ನಿರ್ಮಿಸಿರುವ ಅಥವಾ ಸರ್ಕಾರದಿಂದ ಸ್ಥಾಪಿತವಾದ ಇಲ್ಲವೇ ಕಾನೂನಿನಿಂದ ಸೃಜಿಸಲ್ಪಟ್ಟ ಸಮಿತಿಗಳಿಂದ ಆಡಳಿತ ನಡೆಸುವ ಎಲ್ಲ ಸಾರ್ವಜನಿಕ ಜಲಾಶಯಗಳನ್ನು, ಭಾವಿಗಳನ್ನು ಧರ್ಮಶಾಲೆಗಳನ್ನು, ಸಾರ್ವಜನಿಕ ಶಾಲೆಗಳನ್ನು ನ್ಯಾಯಸ್ಥಾನಗಳನ್ನು, ಕಚೇರಿಗಳನ್ನು ಮತ್ತು ಔಷಧಾಲಯಗಳನ್ನು ಅಸ್ಪೃಶ್ಯರೂ ಉಪಯೋಗಿಸಿಕೊಳ್ಳಲು ಅವಕಾಶ ನೀಡಬೇಕು". ಬೊಂಬಾಯಿ ಸರ್ಕಾರ 1923 ಸೆಪ್ಟೆಂಬರ್ 11ರಂದು ಎಲ್ಲಾ ಕಲೆಕ್ಟರುಗಳಿಗೆ ಹಾಗೂ ಇಲಾಖೆಗಳ ಮುಖ್ಯಸ್ಥರಿಗೆ ಆದೇಶವೊಂದನ್ನು ಹೊರಡಿಸಿ ಶ್ರೀ ಬೋಲೆ ಗೊತ್ತುವಳಿಯನ್ನು ಜಾರಿಗೊಳಿಸುವಂತೆ ಸೂಚಿಸಿತು. ಕೊಲಾಬಾ ಜಿಲ್ಲೆಯ ಮಹಾಡ್‌ನಗರ ಸಭೆ 1924ರಲ್ಲಿ ಶ್ರೀ ಬೋಲೆಯವರ ಗೊತ್ತುವಳಿಯನ್ನು ಅಂಗೀಕರಿಸಿತು. ಆದರೆ ಗೊತ್ತುವಳಿಯನ್ನು ಅಂಗೀಕರಿಸುವಾಗ ತೋರಿದ ಉತ್ಸುಕತೆಯನ್ನು ನಗರಸಭೆಯ ಆಡಳಿತ ವರ್ಗ ಅದರ ಅನುಷ್ಠಾನದಲ್ಲಿ ತೋರಲಿಲ್ಲ. ಹೀಗಾಗಿ ನಗರ ಸಭೆಯ ದೂಳು ತುಂಬಿದ ಕಡತಗಳಲ್ಲಿ ಮಸೂದೆ ಅಭಂಗ ನಿದ್ರೆಯಲ್ಲಿ ಕಾಲ ತಳ್ಳತೊಡಗಿತ್ತು. ಮುಂದೆ 1927ರ ಮಾರ್ಚ್ 18 ಮತ್ತು 20ರಂದು ಡಾ. ಅಂಬೇಡ್ಕರ್ ಅವರ ಸೂಚನೆ ಹಾಗೂ ಮಾರ್ಗದರ್ಶನದ ಮೇರೆಗೆ ಮಹಾಡ್ ನಗರದಲ್ಲಿ ಏರ್ಪಡಿಸಲಾಗಿದ್ದ ದಲಿತರ ಬೃಹತ್ ಪ್ರತಿಭಟನಾ ಸಮಾವೇಶದ ಭಾಗವಾಗಿ 'ಮಹಾಡ್ ಸತ್ಯಾಗ್ರಹ' ಎಂದೇ ಪ್ರಸಿದ್ಧವಾಗಿರುವ ಐತಿಹಾಸಿಕವಾದ ಹೋರಾಟ ನಡೆಯಿತು. ಈ ಹೋರಾಟಕ್ಕೆ ಸವರ್ಣೀಯರ ಒಂದು ಗುಂಪು ಮುಕ್ತ ಮನಸ್ಸಿನ ಬೆಂಬಲ ನೀಡಿತ್ತು. ಆದರೆ ಇನ್ನೊಂದು ಗುಂಪು, ಕಾರ್ಯಕ್ರಮವನ್ನು ಮುಗಿಸಿಕೊಂಡು ವಾಪಸ್ಸಾಗುತ್ತಿದ್ದ ದಲಿತರ ಮೇಲೆ, ಊಟ ಮಾಡಲು ಕುಳಿತಿದ್ದ ಇನ್ನು ಕೆಲವರ ಮೇಲೆ ಹಲ್ಲೆ ಮಾಡಿದ ಘಟನೆಯೂ ನಡೆದುಹೋಯಿತು. ಆದರೆ ಈ ದಾಳಿಯಿಂದ ದಲಿತರು ವಿಚಲಿತರಾಗಲಿಲ್ಲ. ಮನುವಾದಿ ವ್ಯವಸ್ಥೆಯ ವಿರುದ್ಧ ತಮ್ಮ ಹೋರಾಟವನ್ನು ಮುನ್ನಡೆಸುವ ದೃಢ ಸಂಕಲ್ಪದೊಂದಿಗೆ ಹಿಂತಿರುಗಿದರು. ಈ ಹೋರಾಟದಿಂದಾಗಿ ಡಾ. ಅಂಬೇಡ್ಕರ್ ಅವರ ಹೆಸರು ದೇಶಾದ್ಯಂತ ದಲಿತರ ನಡುವೆ ಪ್ರಚಲಿತವಾಯಿತು ಮತ್ತು ಪ್ರೀತಿಗೆ ಪಾತ್ರವಾಯಿತು.

ದಾಸ್‌ಗಾಂವ್ ಸತ್ಯಾಗ್ರಹ

ಇತಿಹಾಸ ಪ್ರಸಿದ್ಧ 'ಮಹಾಡ್ ಸತ್ಯಾಗ್ರಹ'ದ ಪೂರ್ವಭಾವಿಯಾಗಿ ನಡೆದ ಇನ್ನೊಂದು ಸತ್ಯಾಗ್ರಹಕ್ಕೆ ದೊರೆಯಬೇಕಾದ ಪ್ರಚಾರ ದೊರಕಲಿಲ್ಲ. ಅದು ನಡೆದದ್ದು ದಾಸ್‌ಗಾಂವ್ ನಗರದಲ್ಲಿ, ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತ ಕಾಂ.ಆರ್.ಬಿ.ಮೋರೆ ಅವರ ನೇತೃತ್ವದಲ್ಲಿ.

ಕಾಮ್ರೆಡ್ ಆರ್.ಬಿ.ಮೋರೆಯವರು ಡಾ.ಅಂಬೇಡ್ಕರ್ ಅವರ ಖಾಸಾ ಸಹವರ್ತಿಯಾಗಿದ್ದರು. ಮಹಾಡ್ ಸತ್ಯಾಗ್ರಹದ ಪ್ರಮುಖ ರೂವಾರಿಯೂ ಅವರೇ ಆಗಿದ್ದರು. ಇಬ್ಬರ ರಾಜಕೀಯ ವಿಚಾರಧಾರೆಗಳು ಭಿನ್ನವಾಗಿದ್ದರೂ ಅದು ಅವರ ನಡುವಿನ ಸ್ನೇಹ, ವಿಶ್ವಾಸಕ್ಕೆ ಅಡ್ಡಿಯಾಗಿರಲಿಲ್ಲ. ಇಬ್ಬರೂ ಅಸ್ಪೃಶ್ಯತೆಯ ಕ್ರೌರ್ಯವನ್ನು, ಹಿಂಸೆಯನ್ನು ಸ್ವತ: ಅನುಭವಿಸಿದವರಾಗಿದ್ದು ಅಸ್ಪೃಶ್ಯರ ವಿಮೋಚನೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟಿದ್ದರು.

ದಾಸ್‌ಗಾಂವ್ ನಗರವು ಅನೇಕ ಸಮಾಜ ಸುಧಾರಣಾ ಚಳುವಳಿಗಳ ಕೇಂದ್ರವಾಗಿತ್ತು. ಕಾಂ.ಮೋರೆ ಅವರ ತಂದೆ ಬಾಬಾಜಿ ಮೋರೆ ಇಂತಹ ಚಳುವಳಿಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು. 1885ರಲ್ಲಿ ವಿಠ್ಠಲ್ ಹಾಟೇ ಎಂಬ ದಲಿತನೊಬ್ಬರು ಒಂದು ಮಾಳಿಗೆಯ ಮನೆಯನ್ನು ಕಟ್ಟಿಸಿದರು. ದಲಿತರಾದವರು ಇಂತಹದೊಂದು ಮನೆಯನ್ನು ಕಟ್ಟುವುದು ಸನಾತನ ಧರ್ಮಶಾಸ್ತ್ರದ ಪ್ರಕಾರ ಅಪರಾಧವಾಗಿತ್ತು. ನಗರದ ಸವರ್ಣೀಯರಲ್ಲಿ ಇದರಿಂದಾಗಿ ದೊಡ್ಡ ಹಾಹಾಕಾರ ಏಳುವಂತಾಯಿತು. ಆ ಮನೆಯ ಭೂಮಿ ಪೂಜೆ ನಡೆಸಿದ ಬ್ರಾಹ್ಮಣ ಪುರೋಹಿತನನ್ನು ಜಾತಿಯಿಂದ ಬಹಿಷ್ಕರಿಸಲಾಯಿತು. ಮಹಾತ್ಮ ಜ್ಯೋತಿಬಾ ಪುಲೆಯವರ ಅನುಯಾಯಿ ಗೋಪಾಲ ಬಾಬಾ ವೆಲಾಂಗಕರ್ ಈ ಕುರಿತಾಗಿಯೇ ಒಂದು ಪುಸ್ತಕವನ್ನು ಬರೆದು ಘಟನೆಯನ್ನು ದಾಖಲಿಸಿದ್ದಾರೆ.

ಈ ಘಟನೆಯಿಂದ ಕ್ರೋಧಿತರಾದ ನಗರದ ಬ್ರಾಹ್ಮಣರು, ಆ ಮನೆ ಕಟ್ಟುವುದಕ್ಕಾಗಿ ಬಾಬಾಜಿ ಮೋರೆಯವರು ಅರಣ್ಯದಿಂದ ಕಟ್ಟಿಗೆಯನ್ನು ಕದ್ದು ತಂದು ಕೊಟ್ಟಿದ್ದಾರೆ ಎಂದು ಸುಳ್ಳು ಆರೋಪ ಹೊರಿಸಿದರು. ಇದರ ಪರಿಣಾಮವಾಗಿ ಬಾಬಾಜಿ ಮೋರೆಯವರು ಎರಡು ವರ್ಷ ಜೈಲು ವಾಸ ಅನುಭವಿಸುವಂತಾಯಿತು. ತನ್ನ ತಂದೆಗೆ ಆದ ಅನ್ಯಾಯವನ್ನು ನೋಡಿದ ಕಾಮ್ರೆಡ್ ಮೋರೆ ಅವರು ತುಂಬಾ ನೊಂದುಕೊಂಡರಲ್ಲದೆ ಈ ಅನಿಷ್ಟ ಜಾತಿ ಪದ್ಧತಿಯ ವಿರುದ್ಧ ಹೋರಾಡಲು ನಿರ್ಧರಿಸಿದರು. ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಿ ಕಾಮ್ರೆಡ್ ಮೋರೆ ಪಾಸಾಗಿದ್ದರೂ ಅವರಿಗೆ ಹೈಸ್ಕೂಲ್ ಪ್ರವೇಶ ನಿರಾಕರಿಸಲಾಗಿತ್ತು. ಈ ತಾರತಮ್ಯದ ವಿರುದ್ಧವೂ ಅವರು ಹೋರಾಟ ನಡೆಸಬೇಕಾಯಿತು.

ಅಪನಂಬಿಕೆ

ಮಹಾರಾಷ್ಟ್ರದ ಅಂದಿನ ಕಮ್ಯೂನಿಸ್ಟ್ ಪಾರ್ಟಿಯಲ್ಲಿ ಹೆಚ್ಚಿನ ನಾಯಕರು ಸುಶಿಕ್ಷಿತ ಮೇಲ್ಜಾತಿಯ ಯುವಕರಾಗಿದ್ದರು. ಡಾ.ಅಂಬೇಡ್ಕರ್ ಈ ನಾಯಕರನ್ನು ಅಪನಂಬಿಕೆಯಿಂದಲೇ ನೋಡಿದರು. ಜವಳಿ ಗಿರಣಿಗಳಲ್ಲಿ ಮೇಲ್ಜಾತಿ ಕೆಲಸಗಾರರ ಮಡಿವಂತಿಕೆ, ಪೂರ್ವಾಗ್ರಹಗಳಿಂದಾಗಿ ಅಸ್ಪೃಶ್ಯ ಕೆಲಸಗಾರರಿಗೆ ನೂಲುವ ವಿಭಾಗದಲ್ಲಿ ಕೆಲಸ ಮಾಡಲು ಅವಕಾಶ ನೀಡಲಾಗುತ್ತಿರಲಿಲ್ಲ. ಭಾರತದ ದುಡಿಯುವ ವರ್ಗವು ಜಾತಿಗಳ ಆಧಾರದಲ್ಲಿ ವಿಭಜನೆಗೊಂಡಿರುವುದರಿಂದ ಮತ್ತು ಜಾತಿ ಅಸ್ಪೃಶ್ಯತೆಯನ್ನು ಪಾಲಿಸುತ್ತಿರುವದರಿಂದ ಕಾರ್ಮಿಕ ವರ್ಗವು ಸಮಾಜದ ಆಮೂಲಾಗ್ರ ಬದಲಾವಣೆಯನ್ನು ಸಾಧಿಸಬಲ್ಲ ಒಂದು ಏಕರೂಪದ ವರ್ಗ ಎಂಬುದನ್ನು ಡಾ: ಅಂಬೇಡ್ಕರ್ ಒಪ್ಪಲಿಲ್ಲ. ಜಾತಿ ವಿರೋಧಿ ಹೋರಾಟಗಳಿಗೆ ಕಮ್ಯೂನಿಸ್ಟರು ಸಾಕಷ್ಟು ಆಸಕ್ತಿ ತೋರದೆ ಇದ್ದುದರಿಂದ ಡಾ: ಅಂಬೇಡ್ಕರ್ ಅವರು ಕಮ್ಯೂನಿಸ್ಟ್ ಪಕ್ಷದ ಹೋರಾಟಗಳಿಗೆ ಬೆಂಬಲ ನೀಡುತ್ತಿರಲಿಲ್ಲ. ಕಮ್ಯೂನಿಸ್ಟ್ ಪಕ್ಷವು ಪ್ರತಿಪಾದಿಸುವ ಕಾರ್ಮಿಕ ವರ್ಗದ ಐಕ್ಯತೆಯ ಘೋಷಣೆಯು ದಲಿತರ ಐಕ್ಯತೆಯನ್ನು ಬುಡಮೇಲು ಮಾಡುತ್ತದೆ ಎಂಬ ಅಭಿಪ್ರಾಯವು ಮಹಾರಾಷ್ಟ್ರದ ದಲಿತರಲ್ಲಿ ವಿಶೇಷವಾಗಿ ಪ್ರಚಾರದಲ್ಲಿತ್ತು. ಕಮ್ಯೂನಿಸ್ಟ್ ಪಕ್ಷದ ಬಗ್ಗೆ ಆಗ ಎಷ್ಟೊಂದು ಪೂರ್ವಾಗ್ರಹಗಳಿದ್ದುವೆಂದರೆ, ದಲಿತನಾದವನು ಕಮ್ಯೂನಿಸ್ಟ್ ಪಕ್ಷವನ್ನು ಸೇರಿದರೆ ಅವನನ್ನು ಜಾತಿಯಿಂದ ಬಹಿಷ್ಕರಿಸುವ ಸಾಧ್ಯತೆ ಇತ್ತು. ಇಂತಹ ಪರಿಸ್ಥಿತಿಯಲ್ಲಿಯೂ ಡಾ.ಅಂಬೇಡ್ಕರ್ ಅವರ ಆತ್ಮೀಯ ಸ್ನೇಹಿತರಾಗಿದ್ದ ಕಾಂ.ಮೋರೆಯವರು ಕಮ್ಯೂನಿಸ್ಟ್ ಪಕ್ಷವನ್ನು ಸೇರಿದರು ಮಾತ್ರವಲ್ಲ ಕೊನೆಯವರೆಗೂ ವರ್ಗ ಹೋರಾಟದೊಂದಿಗೆ ಜಾತಿ ವಿನಾಶದ ಹೋರಾಟವನ್ನು ಜೋಡಿಸಿಕೊಂಡು ದಲಿತರ ವಿಮೋಚನೆಗಾಗಿ ಹೋರಾಡಿದರು.

ಚಾರಿತ್ರಿಕ ಮಹಾಡ್ ಸತ್ಯಾಗ್ರಹ




ಮಹಾಡ್ ಸತ್ಯಾಗ್ರಹಕ್ಕೆ ಸ್ಫೂರ್ತಿ


ಮಹಾಡ್ ಸತ್ಯಾಗ್ರಹದ ಕೇವಲ 4 ತಿಂಗಳುಗಳ ಮೊದಲು ಶ್ರೀ ಬೋಲೆಯವರ ಗೊತ್ತುವಳಿಯನ್ನು ದಾಸ್‌ಗಾಂವ್ ನಗರದಲ್ಲಿ ಅನುಷ್ಠಾನಗೊಳಿಸಲು ಕಾಂ.ಮೋರೆಯವರು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. 1926, ಡಿಸೆಂಬರ್ 4 ದಾಸ್‌ಗಾಂವ್ ನಗರದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನವಾಯಿತು. ಅಂದು ಸುಮಾರು 300 ಜನ ದಲಿತರು ಕಾಮ್ರೆಡ್ ಮೋರೆ ಅವರ ನೇತೃತ್ವದಲ್ಲಿ, ತಹಶೀಲ್ದಾರರ ಸಮಕ್ಷಮದಲ್ಲಿ ಕ್ರೋಫೋರ್ಡ್ ಬಾವಿಯಿಂದ ನೀರನ್ನು ಎತ್ತಿ ಕುಡಿಯುವ ಮೂಲಕ ಶ್ರೀ ಬೋಲೆ ಗುತ್ತುವಳಿಯನ್ನು ಜಾರಿಗೆ ತಂದರು. ಇಡೀ ಕೊಂಕಣ ಪ್ರದೇಶದ ದಲಿತರ ಮೇಲೆ ಈ ಘಟನೆ ವ್ಯಾಪಕವಾದ ಪ್ರಭಾವವನ್ನು ಬೀರುವಂತಾಯಿತು. ಜಾತಿ ಅಸಮಾನತೆ, ಜಾತಿ ತಾರತಮ್ಯದ ವಿರುದ್ಧ ತಾವು ಸಂಘಟಿತರಾಗಿ ಹೋರಾಟ ಮಾಡಿದರೆ ನಾವು ಖಂಡಿತವಾಗಿ ನಮ್ಮ ಹಕ್ಕುಗಳನ್ನು ಹಾಗೂ ಗೌರವವನ್ನು ಪಡೆಯಲು ಸಾಧ್ಯವಿದೆ ಎಂಬ ಆತ್ಮವಿಶ್ವಾಸ ಅವರಲ್ಲಿ ಮೂಡುವಂತಾಯಿತು. ಇದರ ಸ್ಫೂರ್ತಿಯೇ ಮಹಾಡ್ ಸತ್ಯಾಗ್ರಹವನ್ನು ಏರ್ಪಡಿಸುವ ಕಾರಣವಾಯಿತು. ಸಮಾವೇಶದ ವ್ಯವಸ್ಥೆಗೆ ಸತತವಾಗಿ ಎರಡು ತಿಂಗಳು ಶ್ರಮಿಸಲಾಯಿತು. ಮಹಾರಾಷ್ಟ್ರ ಮತ್ತು ಪಕ್ಕದ ಗುಜರಾತ್ ರಾಜ್ಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ದಲಿತರು ಭಾಗವಹಿಸುವಂತೆ ಏರ್ಪಾಡು ಮಾಡಲಾಯಿತು. ಕಾರ್ಯಕರ್ತರಲ್ಲಿ ಉತ್ಸಾಹದ ಬುಗ್ಗೆ ಹರಿಯಿತು. ಇದರ ಪರಿಣಾಮವಾಗಿ ಸ್ವಯಂ ಸ್ಫೂರ್ತಿಯಿಂದ, ಸ್ವಂತ ಖರ್ಚುವೆಚ್ಚದಲ್ಲಿ ನೂರಾರು ಮೈಲಿಗಳ ದೂರದ ಹಳ್ಳಿಗಳಿಂದ ಸಾವಿರಾರು ಜನ ದಲಿತರು ಕಾಲುನಡಿಗೆಯಲ್ಲಿ ಮಹಾಡ್ ನಗರಕ್ಕೆ ಧಾವಿಸಿದರು. ಡಾ.ಅಂಬೇಡ್ಕರ್ ತಮ್ಮ ಕೆಲವು ಒಡನಾಡಿಗಳೊಂದಿಗೆ ದೋಣಿಯ ಮೂಲಕ ಪ್ರಯಾಣ ಮಾಡಿ ಮೊದಲು ದಾಸ್‌ಗಾಂವ್ ನಗರಕ್ಕೆ ಬಂದರು. ಅಲ್ಲಿಂದ ಕಾಮ್ರೆಡ್ ಮೋರೆಯವರೊಂದಿಗೆ ಮೆರವಣಿಗೆಯಲ್ಲಿ ಹೊರಟು ಮಹಾಡ್ ನಗರವನ್ನು ಪ್ರವೇಶಿಸಿದರು. ಹೀಗೆ, ಸಾಮಾಜಿಕ ಬದಲಾವಣೆಯನ್ನು ಬಯಸುವ ಎಲ್ಲರಿಗೂ ಇಂದು ದಾಸ್‌ಗಾಂವ್ ಮತ್ತು ಮಹಾಡ್ ಎರಡು ಯಾತ್ರಾ ಕ್ಷೇತ್ರಗಳಾಗಿವೆ.

ಕಳೆದ ಮಾರ್ಚ್ 18ರಂದು ಸಿಪಿಐ(ಎಂ) ದಾಸ್‌ಗಾಂವ್ ನಗರದಲ್ಲಿ ಒಂದು ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಹಿಂದೆ ಕಾಂ.ಮೋರೆ ಅವರೇ ಆರಂಭಿಸಿದ್ದ 'ಪ್ರಗತಿಶೀಲ ಮಾಧ್ಯಮಿಕ ವಿದ್ಯಾಲಯ' ಅಂದು "ಕಾಂ.ಆರ್.ಬಿ.ಮೋರೆ ಪ್ರಗತಿಶೀಲ ಮಾಧ್ಯಮಿಕ ಶಾಲೆ" ಎಂದು ಪುನರ್ ನಾಮಕರಣ ಮಾಡಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ.ಸೀತಾರಾಮ್ ಯೆಚೂರಿ ಅವರು "ಕಾಂ.ಮೋರೆ ಅವರು 'ಆಹ್ವಾನ' ಎಂಬ ವಾರಪತ್ರಿಕೆಯನ್ನು ಹೊರಡಿಸುತ್ತಿದ್ದಾಗ, ಪತ್ರಿಕೆಯು ಕಾರ್ಮಿಕರ, ರೈತರ ಮತ್ತು ದಲಿತರ ಹಕ್ಕುಗಳಿಗಾಗಿ ಹೋರಾಡುವುದು ಎಂದು ಘೋಷಿಸಿದ್ದರು. ಈ ಸಂದೇಶ ಇಂದಿಗೂ ಪ್ರಸ್ತುತವಾಗಿದ್ದು ಈ ವಿಭಾಗಗಳನ್ನು ಒಟ್ಟಿಗೆ ತರುವುದು ಇಂದಿನ ಅಗತ್ಯತೆಯಾಗಿದೆ. ಈ ಐಕ್ಯತೆಯನ್ನು ರೂಪಿಸಲು ನಾವೆಲ್ಲರೂ ಶ್ರಮಿಸಬೇಕಾಗಿದೆ" ಎಂದರು. ಕಾಂ.ಮೋರೆಯವರು ಆರಂಭಿಸಿದ ಇನ್ನೊಂದು ಮರಾಠಿ ವಾರಪತ್ರಿಕೆ "ಜೀವನಮಾರ್ಗ" ಈಗ ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯಸಮಿತಿಯ ಮುಖವಾಣಿಯಾಗಿ ಪ್ರಕಟವಾಗುತ್ತಿದೆ.

ಮಹಾನ್ ಹೋರಾಟಗಾರ ಡಾ. ಬಿ.ಆರ್.ಅಂಬೇಡ್ಕರ್







ಶಾಂತಿ ಕಾಪಾಡಲು ಕಾವಲಿಗೆಂದು ಉದ್ದಕ್ಕೂ ಪೋಲೀಸ್ ಪಡೆ. ತಲೆ ಮೇಲೆ ಸುಡು ಬಿಸಿಲು. ಮಸೀದಿ ಕಾಯುವ ಪೋಲಿಸರಿಗೆ ನೀರಡಿಕೆ. ಮಂದಿರದ ತಣ್ಣನೆ ನೀರು, ಸರಿ ಈ ಕಡೆಯ ಕಾವಲುಗಾರರು ನೀರಿನ ಬಾಟಲಿಗೊಂದು ದಾರ ಕಟ್ಟಿದರು. ಮಂದಿರ-ಮಸೀದಿಯ ಗೋಡೆಗಳ ನಡುವಿಗೆ ಸೇತುವೆಯಂತೆ ಕಟ್ಟಿದ ಹಗ್ಗಕ್ಕೆ ನೀರಿನ ಬಾಟಲಿ ತೂಗಿಸಿ ಆಚೆಗೆ ರವಾನಿಸಿದರು. ದೇಶ ಒಡೆವ ಜನಕೆ ಇದು ಕಾಣುವುದೇ?

ಹೌದು... ನೇಣಿಗ್ಹಾಕಿ ಕೋಮುವಾದವನ್ನು ಅರಳಲು ಬಿಡಿ ಶಾಂತಿ ಹೂಗಳನ್ನು

ಟಿ.ವಿ.ಯಲ್ಲಿ ಎರಡು ಸುದ್ದಿಗಳು ತಲ್ಲಣದ ಅಲೆಗಳನ್ನೆಬ್ಬಿಸುತ ನಿರಂತರ ಹರಿದು ಬರುತ್ತಿದ್ದವು. ಕ್ಯಾಲೆಂಡರ್‌ನತ್ತ ದಿಟ್ಟಿ ಹೊರಳಿಸಿದೆ. ಹೌದು ಡಿಸೆಂಬರ್ 6! ಸರ್ವ ಜನಾಂಗದ ಶಾಂತಿಯ ತೋಟಕ್ಕೆ ಸಂಘ ಪರಿವಾರಗಳು ಲಗ್ಗೆ ಇಟ್ಟು ಧ್ವಂಸಗೊಳಿಸಿದ ದಿನ, ಸುದ್ದಿ ಚಾನಲ್‌ಗಳನ್ನು ಬದಲಿಸತೊಡಗಿದೆ. ಅದೇ ಸುದ್ದಿಗಳು; ಒಂದು; ಗುಜರಾತಿನ ಮಾಜಿ ಮುಖ್ಯಮಂತ್ರಿ ನರೇಂದ್ರಮೋದಿಯ ಚುನಾವಣಾ ಭಾಷಣ. ಅತ್ಯಂತ ನಿರ್ಲಜ್ಜ ಮತ್ತು ಭಂಡತನದಿಂದ ಸೊಹ್ರಾಬುದ್ದಿನನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಲ್ಲಿರುವುದನ್ನು ಸಮರ್ಥಿಸಿಕೊಂಡು, "ನೇಣಿಗೆ ಹಾಕ್ತೀರಾ? ಹಾಕಿ", ಎಂದು ಸವಾಲು ಹಾಕುತ್ತಿದ್ದ. ಎರಡು; ರಾಜಸ್ಥಾನದಲ್ಲಿ 2500ದಷ್ಟು ಬಾಲ ವಿದ್ಯಾಮಂದಿರಗಳಲ್ಲಿ ಬಾಬ್ರಿ ಮಸೀದಿ ಕೆಡವಿದ ಪ್ರಕರಣದಲ್ಲಿ ಮಡಿದ ಸಂಘ ಪರಿವಾರದ ವ್ಯಕ್ತಿಗಳನ್ನು ದೇಶಭಕ್ತರೂ ಹುತಾತ್ಮರು' ಎಂದು ಪಾಠ ಮಾಡುವುದು, ಸರ್ಕಾರದ ಅನುದಾನದಲ್ಲಿ ಆರ್.ಎಸ್.ಎಸ್. ನಡೆಸುವ ಈ ವಿದ್ಯಾ ಮಂದಿರಗಳಲ್ಲಿ ಪ್ರೈಮರಿ ಓದುವ ಎಳೆ ಮಕ್ಕಳನ್ನು ದೇಶಘಾತಕರನ್ನಾಗಿ ದೇಶದ್ರೋಹಿಗಳನ್ನಾಗಿ ತಯಾರಿಸುತ್ತಿರುವ ಸಂಗತಿಯನ್ನು ಎನ್‌ಡಿಟಿವಿ ಬಿತ್ತರಿಸುತ್ತಿತ್ತು. ಭಾರತದ ಸಂವಿಧಾನದ ಪ್ರಾಥಮಿಕ ತಳಹದಿಯ ಮೇಲೆಯೇ ಪ್ರಹಾರ ಮಾಡುತ್ತಿರುವ ಆರ್‌ಎಸ್‌ಎಸ್ ಮತ್ತು ಬಿಜೆಪಿಯು ಪಾತಕಿಗಳದ್ದಲ್ಲದೆ ಮತ್ತೇನು? ಸೌಹಾರ್ದ ಪರಂಪರೆಯ ಭಾರತದ ಶ್ವೇತ ಉಡುಪಿನ ಮೇಲೆ ಕೆಸರೆರಚಿದವರಲ್ಲವೇ ಇವರು? ಬಿಜೆಪಿಯಂತು ಕ್ರೌರ್ಯ ಸಂಸ್ಕೃತಿಯನ್ನು ಹುಟ್ಟು ಹಾಕಲು ಜನಾಂಗ ದ್ವೇಷ ಬಿತ್ತುವ ಹಿಟ್ಲರ್ ವಾದವನ್ನು ಜಾರಿಗೊಳಿಸಲು ದೇಶಾದ್ಯಂತ ಅವಮಾನವೀಯವಾಗಿ ಠಳಾಯಿಸುತ್ತಿದೆ. ಅತಿ ದೊಡ್ಡ ಪಕ್ಷ ತಾನೆಂದು ಬೀಗುವ ಕಾಂಗ್ರೆಸ್ಸಿಗೇನಾಗಿದೆ ಎಂದು ನೀವು ಕೇಳಬಹುದು.

ಜನ ವಿರೋಧಿ ನೀತಿಯ ಅಂಗಳದಲ್ಲಿ ಬಿಜೆಪಿಯ ನರಹಂತಕರು ಬೆಳೆದಿರುವುದೇ ಕಾಂಗ್ರೆಸ್ಸಿನ ವೈಫಲ್ಯತೆಯ ಸ್ವಾರ್ಥದ, ಜನವಿರೋಧಿ ನೀತಿಯ ಅಂಗಳದಲ್ಲಿ ಅಲ್ಲವೇ? ಬಾಬ್ರಿ ಮಸೀದಿ ಕೆಡವಿದ ಆ ದಿನಗಳಲ್ಲಿ ಕಾಂಗ್ರೆಸ್ ಕುರುಡು ನಾಟಕದ ಆಟ ಬಹಿರಂಗವೇ ಆಡಿತಲ್ಲ, ಜನಸಾಮಾನ್ಯರ ರಕ್ತ ಹೀರುವ ತುತ್ತು ಕಸಿಯುವ, ಬದುಕು ಕೊಲ್ಲುವ, ಬಾರ್ಬರಿಕ ಸಂಸ್ಕೃತಿಯನ್ನು ಅತ್ಯಂತ ನಿರ್ಭಯವಾಗಿ ಗುಜರಾತಿನಲ್ಲಿ ನರೇಂದ್ರ ಮೋದಿ ನೆಡುತ್ತಿದ್ದಾನೆ. ಸಂಘ ಪರಿವಾರಿಗಳಿಗೆ ಕಾನೂನಿನ ಭಯವಿಲ್ಲ. ಸಂವಿಧಾನದ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗೌರವಿಸುವ ಮನಸಿಲ್ಲ. ಗುಜರಾತಿನತ್ತ ಒಂದು ಸಾರಿ ನೋಡಿ. ಗೋಧ್ರಾ ಕಾಂಡದಿಂದ ಅಲ್ಲಿಯ ಮುಸ್ಲಿಮರು ಬಸವನ ಹುಳುವಿನಂತೆ, ಮುದುಡಿ ಒಳಸರಿದಿದ್ದಾರೆ. ಆತಂಕ ಭಯದ ಗಳಿಗೆಗಳಲ್ಲಿ ದಿನ ತಳ್ಳುತ್ತಿದ್ದಾರೆ. ಇನ್ನೊಂದು ಕಡೆ ಜನಮಾನಸದಲ್ಲಿ ಕೋಮು ವಿಭಜನೆಯ ಗೆರೆ ಕೊರೆಯಲಾಗಿದೆ. ಆದ್ದರಿಂದಲೇ ಚುನಾವಣಾ ಆಯೋಗದ ನೋಟಿಸ್ಸಿಗೂ ಅಳುಕದಂತೆ ಮೋದಿ ಸೊಕ್ಕಿನಿಂದ ಸಂಚರಿಸುತ್ತಿದ್ದಾನೆ. ಮೋದಿಯ ಹೇಳಿಕೆಯನ್ನು ಬಿಜೆಪಿಯು ಸಮರ್ಥಿಸಿಕೊಳ್ಳುತ್ತಿದೆ. ಇದು ಏನನ್ನು ಪುಷ್ಟಿಕರಿಸುತ್ತದೆ? ಜನರನ್ನು ಕೋಮುವಾದಿಗಳಾಗಿಸುತ್ತ ಅವರ ಬೆಂಬಲದಿಂದಲೇ ಅಧಿಕಾರದ ಅಟ್ಟ ಹತ್ತುವುದು ಎಂದಲ್ಲವೇ? ಹಾಗಾದರೆ ಪ್ರಜಾಪ್ರಭುತ್ವ ಮೌಲ್ಯಗಳು? ಜಾತ್ಯಾತೀತತೆಯ ಅರ್ಥ? ಊಹುಂ. ಬಿಜೆಪಿಯು ಗುಜರಾತಿನಲ್ಲೀಗ ಕೊಲೆಗಳ ಖಳನಾಯಕನಂತೆ ವಿಜೃಂಭಿಸುತ್ತಿದೆ. ಆದರೆ ಮೋದಿಯ ಮತ್ತು ಬಿಜೆಪಿಯ ಅನಾಚಾರವನ್ನು ಸಹಿಸಲು ಸಾಧ್ಯವಿಲ್ಲವೆಂಬ ಅಭಿಪ್ರಾಯ ದೇಶಾದ್ಯಂತ ಮೂಡಿಬಂದಿದೆ. ಗುಜರಾತ್ ಸರ್ಕಾರ ಪರ ವಕೀಲರಾದ ಇ.ಟಿ.ಎಸ್.ತುಳಸಿ ಮೋದಿಯ ತಪ್ಪೊಪ್ಪಿಗೆ ಆಗ್ರಹಿಸಿದ್ದಾರೆ. ಇಲ್ಲದಿರೆ ಸರ್ಕಾರದ ಪರ ವಕಾಲತ್ತು ಸಾಧ್ಯವಿಲ್ಲ ಎಂದಿದ್ದಾರೆ. ಮೋದಿಯ ವಿರುದ್ಧ ಕೇಸು ದಾಖಲಿಸಲಾಗಿದೆ. ಖಂಡನೆಗಳ ಮಹಾಪೂರ ಹರಿದು ಬರುತ್ತಿದೆ. ನಾಚಿಗ್ಗೇಡಿ ಬಿಜೆಪಿಯ ಕೈಗೆ ಅಧಿಕಾರ ಬರದಂತೆ ಮಾಡುವುದೇ ಸರಿಯಾದ ಪಾಠವಾಗುವುದು. ಗುಜರಾತಿನ ಮತದಾರರು ಮನಸು ಮಾಡಬೇಕು.

ರಾಜಸ್ಥಾನದ ಕರ್ಮಕಾಂಡ

ರಾಜಸ್ಥಾನ ಸರ್ಕಾರದ ಕರ್ಮಕಾಂಡವು ಅಷ್ಟೇ ಭಯಾನಕವಾಗಿದೆ.ಹಿಟ್ಲರ್ ಎಂಬ ನರಹಂತಕನ ಜೀವನ ಚರಿತ್ರೆಯನ್ನು ಪಠ್ಯದಲ್ಲಿ ಸೇರಿಸಿದ್ದ ಅಲ್ಲಿಯ ಸರ್ಕಾರದ ಕೋಮು ನೀತಿಗೆ ವ್ಯಾಪಕ ವಿರೋಧ ವ್ಯಕ್ತವಾದ ಮೇಲೆ 'ಹಿಟ್ಲರ್' ವಿಷಯ ಕೈ ಬಿಡಲಾಯಿತು. ಆದರೆ ಅಲ್ಲಿಯ ಮುಖ್ಯಮಂತ್ರಿಯು ಜನತೆಯ ಬೆವರ ಹಣವನ್ನು ಬೊಕ್ಕಸದಿಂದ ಮೊಗೆ ಮೊಗೆದು ಕೊಡುತ್ತಿರುವುದು ಸರಸ್ವತಿ ವಿದ್ಯಾ ಮಂದಿರಗಳಿಗೆ. ಅಂದರೆ ಆರ್‌ಎಸ್‌ಎಸ್‌ನ ಕೆಲಸಕ್ಕೆ, ಈ ಸಂಗತಿಯು ಹಗುರವೆಂದು ಪರಿಗಣಿಸುವಂತೆ ಇಲ್ಲ. ಮಕ್ಕಳ ಮೆದುಳಲ್ಲಿ ದ್ವೇಷ ಭಾವನೆ ತುಂಬುವ ಈ ವಿಷದ ಆಟಕ್ಕೆ ತಡೆ ಹಾಕಲೇಬೇಕಿದೆ. ಇಲ್ಲದಿರೆ ಇಡೀ ಭಾರತವನ್ನು ನುಂಗಿ ನೊಣೆದು ಕೆಲವೇ ದೊರೆಗಳು ಬೀಗಿ ಮೆರವ ದಿನಗಳು ದೂರವಿಲ್ಲ.

ಮುಸ್ಲಿಮ ಸಮುದಾಯವನ್ನು ಆಕ್ರಮಣಕಾರರೆಂದು ಸುಳ್ಳು ಚಿತ್ರಣ ಸೃಷ್ಟಿಸುತ್ತಿರುವ ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಗ್ಗೆ ಖಂಡಿತ ಹೇಸಿಗೆ ಬರುತ್ತದೆ. ಎಲ್ಲ ಜನತೆಯೊಂದಿಗೆ ಸ್ನೇಹದಿಂದ ಬದುಕಿ ಬಾಳುವ ಸಾಮಾನ್ಯ ಜನರನ್ನೊಮ್ಮೆ ಮಾತಾಡಿಸಿ ನೋಡಿ, ಎಲ್ಲ ಸಮುದಾಯ ಜನರು ತುಂಬ ಪ್ರೀತಿಯಿಂದ ಬದುಕುವ ಮನಸ್ಸು ಹೊಂದಿದ್ದಾರೆ. ನಾನು ಎರಡು ವರ್ಷದ ಹಿಂದೆ ಹರಿದ್ವಾರ ಮಥುರಾಕ್ಕೆ ಭೇಟಿ ಕೊಟ್ಟಿದ್ದೆ. ಅಯೋಧ್ಯ ರಾಮಜನ್ಮ ಭೂಮಿಯಾದರೆ ಮಥುರಾ ಕೃಷ್ಣನ ಜನ್ಮಸ್ಥಾನ, ಅದಕ್ಕಾಗಿ ಮತ್ತೆ ಭಾರತವನ್ನು ರಣರಂಗ ಮಾಡುತ್ತೇವೆ ಎಂದು ಸಂಘಪರಿವಾರಗಳು ಧುಮುಕಿ ಹಾಕುತ್ತಿದ್ದಾರೆ. ಸಿಮೆಂಟ್, ಕಾಂಕ್ರಿಟ್‌ನಿಂದ ಕಟ್ಟಿದ, ಕೃಷ್ಣನ ತರಹಾವರಿ ಫೋಟೋಗಳಿರುವ ಇತ್ತೀಚಿನ ಗೋಡೆಗಳ ಮೇಲಿನ ಪ್ರಾಚೀನ ಕಟ್ಟಡವೆಂಬ ಬರಹ ಓದುತ್ತಾ ಎಲ್ಲೆಡೆ ಓಡಾಡಿದೆ. ಮೆಟ್ಟಿಲು ಹತ್ತಿ ಎಡಕ್ಕೆ ಹೊರಳಿದರೆ ಕೃಷ್ಣ ಮಂದಿರದ ಪಕ್ಕದಲ್ಲಿಯೇ ಒಂದು ವಿಶಾಲ ಪಾಳು ಬಿದ್ದ ಮಸೀದಿ ಇದೆ. ಶಾಂತಿ ಕಾಪಾಡಲು ಕಾವಲಿಗೆಂದು ಉದ್ದಕ್ಕೂ ಪೋಲೀಸ್ ಪಡೆ. ತಲೆ ಮೇಲೆ ಸುಡು ಬಿಸಿಲು. ಮಸೀದಿ ಕಾಯುವ ಪೋಲಿಸರಿಗೆ ನೀರಡಿಕೆ. ಮಂದಿರದ ತಣ್ಣನೆ ನೀರು, ಸರಿ ಈ ಕಡೆಯ ಕಾವಲುಗಾರರು ನೀರಿನ ಬಾಟಲಿಗೊಂದು ದಾರ ಕಟ್ಟಿದರು. ಮಂದಿರ-ಮಸೀದಿಯ ಗೋಡೆಗಳ ನಡುವಿಗೆ ಸೇತುವೆಯಂತೆ ಕಟ್ಟಿದ ಹಗ್ಗಕ್ಕೆ ನೀರಿನ ಬಾಟಲಿ ತೂಗಿಸಿ ಆಚೆಗೆ ರವಾನಿಸಿದರು. ದೇಶ ಒಡೆವ ಜನಕೆ ಇದು ಕಾಣುವುದೇ? ಮಂದಿರ ಕಾಯುವ ಪೋಲಿಸರು, ಮಸೀದಿ ಕಾಯುವ ಪೋಲೀಸರ ಎದೆಯಲ್ಲಿ ಒಂದೇ ಮಾತಿತ್ತು. ಅದು; 'ಬಿಸಿಲಲ್ಲಿ ಕಾಯುವ ಶಿಕ್ಷೆ ತಪ್ಪಲಿ, ಹಿಂದೂ-ಮುಸ್ಲಿಂ ಜಗಳ ನಿಲ್ಲಲಿ' ... ಎಂಬುದು.

ಪ್ರೀತಿಲಿಂದ ಇದ್ರು

ಈ ಎರಡು ದಿನಗಳಲ್ಲಿ ಮೂವರು ಸಂಗಾತಿಗಳೊಂದಿಗೆ ದೀರ್ಘ ಹೊತ್ತು ಮಾತಾಡಿದ್ದೇನೆ. ಅವರಲ್ಲಿ ಸಿಪಿಐ(ಎಂ) ಪಕ್ಷದ ಗುಲಬರ್ಗಾ ನೇತಾರರಾಗಿದ್ದ ಮ.ಹಸನ್‌ಖಾನ್ ಸಾಬರ ಹೆಂಡತಿ ರಹಿಮುನ್ನಿಸಾ ಬೇಗಂ ಒಬ್ಬರು. 75ರ ಇಳಿ ವಯಸ್ಸಿನ ರಹಿಮುನ್ನಿಸ ಬೇಗಂ ಹೇಳುತ್ತಿದ್ದರು. 'ಅವರು (ಖಾನ್‌ಸಾಬ್) ಎಲ್ಲ ಜನರ ಸಂಗಾಟ ಪ್ರೀತಿಲಿಂದ ಇದ್ರು. ಅದಕ್ಕೆ ಅವ್ರು ಸತ್ತಾಗ ಎಲ್ಲ ಕಡಿಂದ ಜನ ಹರದು ಬಂದಿತ್ತು. ಹಿಂದೂ-ಮುಸ್ಲಿಂ ಬ್ಯಾರೇ ಅಲ್ಲ. ಪ್ರೀತಿ ಒಂದೇ ದೊಡ್ಡದು ಅಂತಿದ್ರು...' ರೆಹೆಮುನ್ನಿಸಾ ಬೇಗಂ ಕಣ್ಣಲ್ಲಿ ತೆಳು ನೀರಿನ ಪೊರೆ ಇತ್ತು. 'ಖಾನ್ ಸಾಬ ಕಾಮ್ರೇಡ್ ಇಲ್ಲದಿದ್ದರೇನಾಯ್ತು... ಪಾರ್ಟಿ ನಮ್ದೂನೂ, ನೀ ಬರ್ತಾ ಇರು ತಂಗಿ...' ಅಂದರು. ಮತ್ತ ಬರ್ತೀನಿ...' ಅಂದು ಗಾಡಿ ಸ್ಟಾರ್ಟ್ ಮಾಡಿದೆ. ಒಂದೇ ಊರಲ್ಲಿದ್ದೂ ಅವರ ಮನೆಯತ್ತ ಹಣಿಕದ ನನ್ನ ತಪ್ಪಿಗೆ ಪಶ್ಚಾತ್ತಾಪ ಪಡುತ್ತಾ ಹಾದಿ ಕ್ರಮಿಸಿದೆ.

ನನ್ನ ಗಾಡಿಯು ಎಂ.ಎಸ್.ಕೆ. ಮಿಲ್ ಮುಂದಿನ ಕಾಂ: ಅಬ್ದುಲ್ ಖಾದರ್ ಹನ್ನುಬಾಯಿ ಮನೆ ಮುಂದೆ ನಿಂತಿತು. ಅವರು ನಮ್ಮನ್ನಗಲಿ 2 ತಿಂಗಳಾದವು.ಪಕ್ಷದ ಶಿಸ್ತು, ಬದ್ಧತೆಯ ಸಾಕಾರಮೂರ್ತಿಯಂತಿದ್ದ ಕಾಂ: ಹನ್ನುಬಾಯಿ ನಾನು ಗುಲ್ಬರ್ಗಾ ಬಂದ ಹೊಸದರಲ್ಲಿ ಅನೇಕ ಕಡೆ ನನ್ನೊಂದಿಗೆ ಓಡಾಡಿ ಭರವಸೆ ತುಂಬಿದ್ದರು. ಈ ರಂಜಾನ್‌ನಲ್ಲಿ ಮಾತ್ರ ಅವರ ಮನೆಯಲ್ಲಿನ ಸುರಕುಂಬ(ಹಾಲು) ತಪ್ಪಿದೆ. ಅವರ ಹೆಂಡತಿ-ಸೊಸೆಯೊಂದಿಗೆ ಬಹಳ ಹೊತ್ತು ಮಾತಾಡಿದೆ. ಪಕ್ಷದ ಬಗ್ಗೆ ಅವರ ಎದೆಯಲ್ಲಿ ಅದಮ್ಯ ಪ್ರೀತಿ ಮತ್ತು ಗೌರವವಿತ್ತು. ತನ್ನ ತವರಿನವರೆಲ್ಲ ಪಾಕಿಸ್ಥಾನದಲ್ಲಿರುವವರು, ನನ್ನವರೆನ್ನುವ ಗಂಡನೊಬ್ಬನನ್ನು ಕಳಕೊಂಡು ಈಗ ಒಂಟಿಯಾದೆ ಎನ್ನುತ್ತಿದ್ದರು, ಹನ್ನುಬಾಯಿಯ ಹೆಂಡತಿ. ಸೈಕಲ್ ತುಳಿಯುತ ಕೆಂಪು ಬಾವುಟ ಹಿಡಿದು ದುಡಿವ ಜನರನ್ನು ಸಂಘಟಿಸಲು ತಮ್ಮ ಇತಿ-ಮಿತಿಯಲ್ಲಿಯೇ ದಣಿವರಿಯದೆ ಶ್ರಮಿಸಿದ ಸಂಗಾತಿ ನೆನಪಿನಂಗಳದಲ್ಲಿ ಮೂಡಿದರು. ಇವರೆಲ್ಲ ಸೌಹಾರ್ದ ಬಾವುಟದ ನಕ್ಷತ್ರಕ್ಕೆ ಹೊಳಪು ತಂದ ಚೇತನಗಳಲ್ಲವೇ?....

.....ಒಂದು ತಪ್ಪನ್ನು ಇನ್ನೊಂದು ತಪ್ಪಿಂದ ಸರಿಪಡಿಸಬಹುದೇ?

ಪುಟ 9 ರಿಂದ

ಫಣಿರಾಜ್ ಸೇರಿದಂತೆ ಕೆಲವು ಸಾಹಿತಿ ಬುದ್ಧಿಜೀವಿಗಳು ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರಾದರೂ ಈ ಸಮ್ಮೇಳನದ ಬೆನ್ನೆಲುಬು ಕರ್ನಾಟಕ ಸೌಹಾರ್ದ ವೇದಿಕೆ ಮತ್ತು ಕರ್ನಾಟಕ ಫೋರಂ ಫಾರ್ ಡಿಗ್ನಿಟಿ(ಕೆಎಫ್‌ಡಿ) ಎಂಬ ಸಂಘಟನೆ ಎಂಬುದು ರಹಸ್ಯವಾಗೇನೂ ಉಳಿದಿಲ್ಲ.

ಕೋಮುವಾದವನ್ನು ವಿರೋಧಿಸಬೇಕು ಸರಿ, ನಾಡಿನ ಸಾಹಿತ್ಯಕ, ಸಾಂಸ್ಕೃತಿಕ ಲೋಕದ ಜನರಿಗೂ ಈ ಬಗ್ಗೆ ಗುರುತರ ಹೊಣೆಗಾರಿಕೆ ಇದೆ. ಆ ಬಗ್ಗೆ ಸಾಹಿತ್ಯ ಸಮ್ಮೇಳನ ಈ ಬಗೆಗೆ ಚರ್ಚಿಸಬೇಕು ಎಂಬುದೂ ಸರಿಯೇ.

ಆದರೆ ಹಿಂದೂತ್ವವಾದಿಗಳ, ಸಂಘ ಪರಿವಾರದ ಕೋಮುವಾದಿಗಳನ್ನು ಖಂಡಿಸುತ್ತಾ ಬಹುಸಂಖ್ಯಾತರ ಕೋಮುವಾದ ವಿರೋಧಿಸುತ್ತಾ ನಾವು 'ಪ್ರಗತಿಪರ' ಎಂಬ ಹಣೆಪಟ್ಟಿ ಹಚ್ಚಿಕೊಂಡು ಅಲ್ಪಸಂಖ್ಯಾತ-ಮುಸ್ಲಿಂ ಕೋಮುವಾದವನ್ನು ಅಪ್ಪಿಕೊಳ್ಳಬಹುದೇ ಎಂಬುದು ಗಂಭೀರವಾಗಿ ಚರ್ಚೆಗೆ ಒಳಗಾಗಬೇಕಿದೆ.

ಸೌಹಾರ್ದ ಸಮ್ಮೇಳನದ ಯಶಸ್ವಿಗೆ ಮುಸ್ಲಿಂ ಸಮುದಾಯದ ಜನ ಕೆಲಸ ಮಾಡಬಾರದು, ಬೆಂಬಲವಾಗಿ ನಿಲ್ಲಬಾರದು ಎಂದೇನಿಲ್ಲ, ಆದರೆ ಈ ಕೆಎಫ್‌ಡಿ ಎಂಬ ಸಂಘಟನೆಯ ತತ್ವ, ಪ್ರಣಾಳಿಕೆ ಏನು? ಅದರ ಸಿದ್ಧಾಂತ ಏನು? ವಾಸ್ತವಿಕವಾಗಿ ಈ ಸಂಘಟನೆಯ ಕಾರ್ಯಚಟುವಟಿಕೆ ಏನು ಎಂದು ಸರಿಯಾಗಿ ಪರಿಶೀಲಿಸಿದವರಿಗೆ ಅದರ ಮುಸ್ಲಿಂ ಮೂಲಭೂತವಾದಿ ನೆಲೆಗಟ್ಟು ಅರ್ಥವಾಗದೇ ಇರಲು ಸಾಧ್ಯವೇ ಇಲ್ಲ.

ಇನ್ನು ನಕ್ಸಲೀಯರ ಪ್ರಭಾವ, ಹಿಡಿತದಲ್ಲಿರುವ ಕೋಮುಸೌಹಾರ್ದ ವೇದಿಕೆಯ ಬಗ್ಗೆ ಹೇಳುವುದೇ ಬೇಕಿಲ್ಲ. ಎಡಪಂಥದಲ್ಲೇ, ಸಮಾಜವಾದ-ಮಾರ್ಕ್ಸ್‌ವಾದದಲ್ಲೇ ಜಾಗತಿಕವಾಗಿ ಭಿನ್ನ ಭಿನ್ನ ಚಿಂತನಧಾರೆಗಳಿವೆ. ಭಿನ್ನ, ಭಿನ್ನ ಪ್ರಯೋಗಗಳಿವೆ. ಅವನ್ನು ಅನುಸರಿಸದಿದ್ದರೂ ಕನಿಷ್ಠ ಗೌರವಿಸಬೇಕು ಎಂಬ ಸಾಮಾನ್ಯ ಪ್ರಜ್ಞೆಯನ್ನು ತೋರದೆ ದೇಶದ ಕಮ್ಯುನಿಸ್ಟ್ ಚಳುವಳಿಯ ಪ್ರಧಾನ ಧಾರೆಯ ಪಕ್ಷಗಳ ಮೇಲೆ ಇವರು ಎರಚುತ್ತಿರುವ ಕೆಸರು, ಸಾಮೂಹಿಕ ಜನಬೆಂಬಲವಿಲ್ಲದ ಹಿಂಸೆ, ರಕ್ತಪಾತ, ಬಾಂಬು, ಬಂದೂಕುಗಳ ದಾರಿಯನ್ನು ನಿರ್ಲಜ್ಜವಾಗಿ ಸಮರ್ಥಿಸುವ ರೀತಿಯನ್ನು ಕಂಡವರು ಎಷ್ಟೋ ಜನ ಈ ವೇದಿಕೆಯಿಂದ ದೂರವಾಗಿದ್ದಾರೆ ಇರಲಿ.

ಈಗ ಈ ಸಂದರ್ಭದಲ್ಲಿ ಎದ್ದಿರುವ ಮುಖ್ಯ ಪ್ರಶ್ನೆ ಏನೆಂದರೆ ಒಂದು ತಪ್ಪನ್ನು ಮತ್ತೊಂದು ತಪ್ಪಿನಿಂದ ಸರಿಪಡಿಸಬಹುದೇ? ಬಹುಸಂಖ್ಯಾತರ ಕೋಮುವಾದಕ್ಕೆ ಅಲ್ಪಸಂಖ್ಯಾತರ ಕೋಮುವಾದ ಉತ್ತರವೇ? ಇಲ್ಲ ಬೇರೆ ಇನ್ನೊಂದು ದಾರಿ ಇದೆಯೇ? ಈ ಪ್ರಜ್ಞಾವಂತರು ಯೋಚಿಸಬೇಕಿದೆ.

– ಆರ್.ರಾಮಕೃಷ್ಣ

ಅಂಧಕಾರದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳು

ಶತಮಾನಗಳಿಂದ ಮಾನವ ಬದುಕಿನ ಅವಶ್ಯಗಳಿಂದ ವಂಚನೆ ಗೊಳಗಾಗಿದ್ದ ದಲಿತ-ಹಿಂದುಳಿದ ವಿದ್ಯಾರ್ಥಿ ಸಮುದಾಯವನ್ನು ಇಂದೂ ಕೂಡ ಅಂಧಕಾರದಲ್ಲೇ ಉಳಿಸಲಾಗಿದೆ ಎಂಬುದಕ್ಕೆ ರಾಜ್ಯಾದ್ಯಂತ ಇರುವ ದಲಿತ-ಹಿಂದುಳಿದ ಹಾಸ್ಟೆಲ್ ವಿದ್ಯಾರ್ಥಿಗಳ ಪರಿಸ್ಥಿತಿ ನೋಡಿದರೆ ಸಾಕು. ಎಸ್‌ಎಫ್‌ಐ ಸಂಘಟನೆ ದಲಿತ-ಹಿಂದುಳಿದ ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕಾಗಿ ಹಾಸ್ಟೆಲ್ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸರ್ವೆ ಮಾಡಲು ರಾಜ್ಯಾದ್ಯಂತ ಹೊರಟಾಗ ಹಾಸ್ಟೆಲ್ ವಿದ್ಯಾರ್ಥಿಗಳ 'ದಯನೀಯ' ಸ್ಥಿತಿ ಪರಿಚಯವಾಗತೊಡಗಿತು. ಮಾಜಿ ಮುಖ್ಯಮಂತ್ರಿ ಬಂಗಾರಪ್ಪರವರ ಸರ್ಕಾರದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಅತ್ಯಲ್ಪ ಗಮನಹರಿಸಿದ್ದು ಬಿಟ್ಟರೆ ಉಳಿದಂತೆ ಸಮಾಜ ಕಲ್ಯಾಣ ಇಲಾಖೆಯನ್ನು ತಿಪ್ಪೇಗುಂಡಿಯಂತೆಯೇ ಕಂಡು ಪಟ್ಟಭದ್ರರ ಬೆಳವಣಿಗೆಗೆ ಗೊಬ್ಬರವೆಂಬಂತೆ ಬಳಸಿಕೊಳ್ಳಲಾಗುತ್ತಿದೆ.

ನಮ್ಮ ಮಕ್ಕಳು ಸ್ವಾಭಿಮಾನದಿಂದ ಬದುಕಲೆಂದು ಧ್ವನಿ ಇಲ್ಲದ ದುಡಿಯುವ ಜನತೆ ಮಕ್ಕಳಿಗೆ ಅಕ್ಷರ ಕಲಿಸಲು ಶಕ್ತರಾಗದೆ ಹಾಸ್ಟೆಲ್‌ಗಳಿಗೆ ಅವಲಂಬಿತರಾದರೆ ಇತ್ತ ಕೂಲಿ ನಾಲಿ ಮಾಡಿ ದುಡಿಯಲು ಆಗದೆ ಅತ್ತ ವಿದ್ಯಾಭ್ಯಾಸವನ್ನು ಮುಟ್ಟಲಾಗದೆ ನೀರಿನಿಂದ ಮೀನು ಹೊರತೆಗೆದಾಗ ಜೀವದ ಉಳಿವಿಗಾಗಿ ತೊಯ್ದಾಡುವಂತಹ ಪರಿಸ್ಥಿತಿ ಇಂದು ದಲಿತ-ಹಿಂದುಳಿದ ಹಾಸ್ಟೆಲ್ ವಿದ್ಯಾರ್ಥಿಗಳ ದುರವಸ್ಥೆಯಾಗಿದೆ.

ಬಾಡಿಗೆ ಕಟ್ಟಡ, ಸ್ವಂತ ಕಟ್ಟಡಗಳಿದ್ದ ಹಾಸ್ಟೆಲ್‌ಗಳಲ್ಲೂ ನಗರಗಳ ಹೊರ ವಲಯದ ಕಳಪೆ ಕಟ್ಟಡಗಳಲ್ಲೂ ಬೆಳಕು-ನೀರು-ಸ್ವಚ್ಛತೆ ಕಾಣದ, ಕಳಪೆ ಗುಣಮಟ್ಟದ ಊಟವೂ ಸಿಗದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಹಾಹಾಕಾರದಿಂದ ಹಾತೊರೆಯುತ್ತಿದ್ದಾರೆ. ಇನ್ನೂ ಲೈಬ್ರರಿ, ಶೌಚಾಲಯ, ಕ್ರೀಡಾ ವ್ಯವಸ್ಥೆ ಬಗ್ಗೆ ಕೇಳುವ ಹಾಗೆಯೇ ಇಲ್ಲ. ದಮನಿತ ಜನಕ್ಕೆ ಸಾಮಾಜಿಕ ಭದ್ರತೆ ಒದಗಿಸುತ್ತದೆ ಎಂದು ಹೇಳುವ ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ತಾಲ್ಲೂಕು, ಸಮಾಜ ಅಧಿಕಾರಿಗಳು, ವಾರ್ಡನ್‌ಗಳು, ಅಡುಗೆ ಮಾಡುವವರು, ಸಹಾಯಕರು, ಸೇರಿದಂತೆ ಹಲವಾರು ಹುದ್ದೆಗಳು ಖಾಲಿ ಖಾಲಿ. 3-4 ಹಾಸ್ಟೆಲ್‌ಗಳಿಗೆ ಒಬ್ಬರೇ ವಾರ್ಡನ್, ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಲ್ಲಿ ಭದ್ರತೆಗಾರರಿಲ್ಲ. ಬಹಳಷ್ಟು ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಿಗೆ ಪುರುಷ ಮಹಾಶಯರೇ ವಾರ್ಡನ್‌ಗಳು, ಸಾಮಾನ್ಯ ಕನಿಷ್ಠ ಜ್ಞಾನವೂ ಇರದಂತಹ ಅವಿವೇಕಿ ವಾರ್ಡನ್‌ಗಳು ವಿದ್ಯಾರ್ಥಿನಿಯರ ರೂಂಗಳಿಗೆ ನುಗ್ಗುವ, ಹಲವು ರೀತಿಯ ತೊಂದರೆ ಕೊಡುವ ಕೀಚಕರೂ ಇದ್ದಾರೆ. "ಹೆಸರಿಗೆ ಮಾತ್ರ ವಾರಕ್ಕೊಮ್ಮೆ ಮಾಂಸ, ಮೊಟ್ಟೆ - ಬಾಳೆಹಣ್ಣುಅಂತ ಬೋರ್ಡ್ ಹಾಕುತ್ತಾರೆ. ಆದರೆ ಶುಚಿ-ರುಚಿಯಾದ ಅನ್ನ ಸಾಂಬರ್ ಸರಿಯಾಗಿ ಸಿಗಲ್ಲಸಾರ್. ಸಾಂಬಾರ್‌ನಲ್ಲಿ ಹುಳಗಳು ಇರ್ತಾವೆ. ಕೇಳಿದರೆ "ಇದು ಸಿಕ್ತಿರೋದೇ ನಿಮ್ಮ ಪುಣ್ಯ, ಗತಿ ಇಲ್ಲದೆ ಇಲ್ಲಿಗೆ ಬಂದಿದ್ದೀರಿ, ಹಾಕಿದ್ದನ್ನು ತಿಂದು ಹೋಗಿ" ಎಂದು ಬೆದರಿಸುತ್ತಾರೆ. ಮೇಲಾಧಿಕಾರಿಗಳಿಗೆ ತಿಳಿಸಲು ಅವಕಾಶ ಇಲ್ಲ, ಹೇಳಿದವರನ್ನೇ ಗುರಿ ಮಾಡುತ್ತಾರೆ, ಹೊಡೆಯುತ್ತಾರೆ, ಅವಾಚ್ಯ ಶಬ್ದಗಳಿಂದ ಬೈದು ನಿಂದಿಸುತ್ತಾರೆ. ಕೆಟ್ಟ ಪದಗಳನ್ನು ಬಳಸಿ ಇಲ್ಲದ ಆರೋಪಗಳನ್ನು ಹೊರಿಸುತ್ತಾರೆ ಎಂದು ದುಃಖತಪ್ತ ಮನಸ್ಸಿನ ಅಂತರಾಳದ ನೋವಿನ ಆಳನಿಂದ ತಮ್ಮ ದುಃಖ ದುಮ್ಮಾನಗಳನ್ನು ಸರ್ವೆ ಸಂದರ್ಭದಲ್ಲಿ ಹೇಳುತ್ತಾರೆ.

ಗಾಯದ ಮೇಲೆ ಬರೆ

ದಲಿತ-ಹಿಂದುಳಿತ ಜನತೆಯ ಹಿತ ಶತ್ರು ಬಿಜೆಪಿ-ಜೆಡಿ(ಎಸ್) ಅಧಿಕಾರಕ್ಕೇರಿದ ಮೇಲಂತೂ ಗಾಯದ ಮೇಲೆ ಬರೆಯೆಂಬಂತೆ ರಿಯಾಯಿತಿ ದರದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನಾಗರೀಕ ಆಹಾರ ಸರಬರಾಜು ಇಲಾಖೆಯಿಂದ ದೊರೆಯುತ್ತಿದ್ದ ಆಹಾರ ಪದಾರ್ಥಗಳನ್ನು ಮೊಟಕುಗೊಳಿಸಲಾಗಿತ್ತು. ಜೆ.ಹೆಚ್.ಪಟೇಲ್ ಸರ್ಕಾರದ ಕಾಲದಿಂದ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ.450 ಕಾಲೇಜು ವಿದ್ಯಾರ್ಥಿಗಳಿಗೆ ರೂ.500 ಮಾತ್ರ ಊಟದ ವೆಚ್ಚ ನೀಡಿದ್ದು ಗಗನಕ್ಕೇರುತ್ತಿರುವ ಬೆಲೆಯೇರಿಕೆಯಲ್ಲಿ, ಅಧಿಕಾರಿಗಳ ಭ್ರಷ್ಟತೆಯಿಂದ ವಿದ್ಯಾರ್ಥಿಗಳಿಗೆ ಸಿಗುತ್ತಿದ್ದ ಪಾಲು ಅರೆ ಹೊಟ್ಟೆ ಮಾತ್ರ. ಇಂಥ ಸಂದರ್ಭದಲ್ಲಿ ದಲಿತರನ್ನು ಬಲಿ ತೆಗೆದುಕೊಳ್ಳಲೆಂದೇ ಹೊಂಚು ಹಾಕುತ್ತಿದ್ದ ಬಿಜೆಪಿಯ ಬಿ.ಎಸ್.ಯಡಿಯ್ಯೂರಪ್ಪ 30 ಕೋಟಿ ದಲಿತ-ಹಿಂದುಳಿದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಕೂಡ ತಡೆ ಹಿಡಿದಿದ್ದರು. ದಲಿತ ವಿರೋಧಿಯಾದ ಇವರು ಜನತೆಗೆ ಅತ್ಯುತ್ತಮ ಬಜೆಟ್ ಕೊಟ್ಟಿದ್ದೇವೆ ಎಂದು ಮಾನ-ಮರ್ಯಾದೆ ಇಲ್ಲದೆ ಕೂಗಾಡುತ್ತಿದ್ದಾರೆ. ಇನ್ನೊಂದು ಸಾಧನೆ ಎಂದರೆ ದಲಿತ ಮಕ್ಕಳನ್ನು ಆರ್.ಎಸ್.ಎಸ್.ನ ಶಾಲೆಗಳಿಗೆ ಸಾಮಾನ್ಯ ಶಿಕ್ಷಣ ಇಲಾಖೆಯ ಹಣದಿಂದಲೇ ವಿದ್ಯಾಭ್ಯಾಸ ಕಲಿಸಿ ಮೂಲಭೂತ ವ್ಯವಸ್ಥೆಯ ವಿರುದ್ಧ ಧ್ವನಿ ಮೊಳಗದ ರೀತಿಯ ವಿದ್ಯೆಯನ್ನು ಆರ್.ಎಸ್.ಎಸ್ ಸಂಸ್ಥೆಗಳಲ್ಲಿ ಕಲಿಸಲು ಯೋಜನೆ ರೂಪಿಸಿರುವುದು. ಸಮಯಕ್ಕೆ ಸರಿಯಾಗಿ ಊಟ-ನೀರು-ಬೆಳಕು ವಿದ್ಯೆ ಇಲ್ಲದೆ ನರಳುತ್ತಿರುವ ನಾಡಿನ ಹಾಸ್ಟೆಲ್ ವಿದ್ಯಾರ್ಥಿಗಳ ಬವಣೆ ಬಗ್ಗೆ ಎಸ್‌ಎಫ್‌ಐ ಬಿಟ್ಟರೆ ಬೇರ್ಯಾರು ಧ್ವನಿ ಎತ್ತುವ ಕಾಳಜಿಗೆ ಹೋಗಲಿಲ್ಲ. ಬದಲಾಗಿ ಎಂಜಲು ಕಾಸಿಗಾಗಿ ಅಧಿಕಾರಿಗಳ ಜೊತೆಗೆ ಶಾಮೀಲಾಗಿರುವ ಕೆಲವು ಪಟ್ಟಭದ್ರರನ್ನು ಕಾಣುತ್ತಿದ್ದೇವೆ. ಇಂಥ ಪರಿಸ್ಥಿತಿಯೇ ತಾನೆ ಪುರೋಹಿತ ಶಾಹಿಗಳಿಗೆ ಪಾಳೇಗಾರಿ ವ್ಯವಸ್ಥೆಗೆ ಬೇಕಿರುವುದು. ಹೀಗಾಗಿ ಇಂತಹ ಅವ್ಯವಸ್ಥೆಯ ಆಗರಕ್ಕೆ ಕಾರಣವಾಗಿರುವ ಸಾಮಾಜಿಕ-ಆರ್ಥಿಕ ಸಂರಚನೆ ಬದಲಾಗುವವರೆಗೂ ದಲಿತ-ಹಿಂದುಳಿದ ವಿದ್ಯಾರ್ಥಿಗಳ ಮೂಲ ಸಮಸ್ಯೆ ಬಗೆಹರಿಯುವುದಿಲ್ಲ ವೆಂಬ ವೈಜ್ಞಾನಿಕ ಸತ್ಯವನ್ನು ಅರಿತಿರುವ ಎಸ್‌ಎಫ್‌ಐ ಸಂಘಟನೆ ಮುಂದಿನ ದಿನಗಳಲ್ಲಿ ಯೋಜಿತ ಬಲಿಷ್ಠ ಹೋರಾಟ ರೂಪಿಸಲಿದೆ.


ಯಡಿಯೂರಪ್ಪನವರು ತಾವು ಭಾರಿ ಒಳ್ಳೆಯ ಬಜೆಟ್ ಕೊಟ್ಟೆವು. ಶಿಕ್ಷಣ ಕ್ಷೇತ್ರವನ್ನು ಉದ್ಧರಿಸಿದೆವು. ಎಂದೂ ಇಲ್ಲದಷ್ಟು ಶಾಲಾ ಕಾಲೇಜುಗಳು ತೆರೆದೆವು ಎಂದು ಸಾಧನೆಯ ಮಾತು ಅಳಿದೆಳೆದು ಸುರಿಯುತ್ತಾರೆ. ಇವರ ಆಡಳಿತದ ಫಲವಾಗಿ ಒಂದೆಡೆ ಹಾಸ್ಟೆಲ್ ವಿದ್ಯಾರ್ಥಿಗಳು ಮತ್ತೊಂದೆಡೆ ಐಟಿಐ ವಿದ್ಯಾರ್ಥಿಗಳು ಎಂತಹ ಯಾತನೆ ಪಡುತ್ತಿದ್ದಾರೆ ಎಂದು ಇಲ್ಲಿ ವಿವರಿಸಿದ್ದಾರೆ. ಎಸ್ಸೆಫೈನ ರಾಜ್ಯ ಅಧ್ಯಕ್ಷರಾದ ಬಿ.ರಾಜಶೇಖರಮೂರ್ತಿ.

ಬಡ ಐಟಿಐ ವಿದ್ಯಾರ್ಥಿಗಳ ಭವಿಷ್ಯ ಬಲಿ

ಅಧಿಕಾರ ದಾಹದಿಂದ ಅಧಿಕಾರಕ್ಕೇರಿದ್ದ ಬಿಜೆಪಿ-ಜೆಡಿ(ಎಸ್) ಸಮ್ಮಿಶ್ರ ಸರ್ಕಾರದ ಮಹಾ ವಂಚನೆಗಳಿಗೆ ಮುಖ್ಯವಾಗಿ ಬಲಿಪಶುವಾಗಿರುವುದು ಬಡ ವಿದ್ಯಾರ್ಥಿಗಳು, ಎಳ್ಳಷ್ಟೂ ವಿದ್ಯಾರ್ಥಿ ಪರ ಕೆಲಸ ಮಾಡದೆ ಕೇವಲ ಪ್ರಚಾರಕ್ಕೆಂದೇ ಹಿಂದೆಂದೂ ಸಾಧಿಸದ ರೀತಿಯಲ್ಲಿ ಹೊಸ ಶಾಲಾ-ಕಾಲೇಜುಗಳನ್ನು ಆರಂಭಿಸಿದ್ದೇವೆಂದು ಅಂಕಿ-ಅಂಶಗಳ ಸಾಧನೆಗೈದ ಸರ್ಕಾರ ಶೈಕ್ಷಣಿಕವಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಗತ್ಯ ಹಣಕಾಸು ಇನ್ನಿತರ ಸೌಲಭ್ಯಗಳನ್ನು ಒದಗಿಸದೆ, ಸಾವಿರಾರು ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಬಲಿತೆಗೆದುಕೊಂಡಿದೆ.

ಖಾಸಗಿ ಶಾಲಾ-ಕಾಲೇಜುಗಳ ದುಬಾರಿ ಶುಲ್ಕ ಭರಿಸಲಾಗದೆ ಸರ್ಕಾರಿ ಶಾಲಾ-ಕಾಲೇಜುಗಳಿಗೆ ಅವಲಂಬನೆ ಯಾಗಿರುವ ಇಡೀ ವಿದ್ಯಾರ್ಥಿ ಸಮುದಾಯವೇ ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿರುವಾಗಲೇ ಹೊಸ ಶಾಲಾ-ಕಾಲೇಜುಗಳಿಗೆ ಸೇರಿರುವ ವಿದ್ಯಾರ್ಥಿಗಳ ಭವಿಷ್ಯವನ್ನು ಹೆಚ್.ಡಿ.ಕುಮಾರಸ್ವಾಮಿ ಮತ್ತು ಮಹಾ ವಚನ ಭ್ರಷ್ಟರಾದ ಬಿ.ಎಸ್.ಯಡಿಯೂರಪ್ಪನವರು ನಾಶ ಮಾಡಿದ್ದಾರೆ. ಉದ್ಯೋಗ ಮತ್ತು ತರಬೇತಿ ಇಲಾಖೆ ಅಡಿಯಲ್ಲಿ ಈಗಿರುವ ಸರ್ಕಾರಿ ಕಾಲೇಜುಗಳೇ ಯಾವ ರೀತಿಯ ಸವಲತ್ತುಗಳಿಲ್ಲದೆ ತುಕ್ಕು ಹಿಡಿಯುತ್ತಿರುವ ಸಂದರ್ಭದಲ್ಲಿ ಹೊಸದಾಗಿ 38 ಐಟಿಐ ಸರ್ಕಾರಿ ಕಾಲೇಜುಗಳಿಗೆ ಆದೇಶ ನೀಡಿ ಜಾರಿಗೆ ತರಲಾಯಿತು. ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಸ್ವಮಗ್ರವಾಗಿ ಕಟ್ಟಡ, ಪ್ರಯೋಗಾಲಯ, ಸಿಬ್ಬಂದಿ ವರ್ಗ ಮುಂತಾದ ಪೂರ್ಣ ಸೌಕರ್ಯಗಳನ್ನು ನೀಡದೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಪಾಠ-ಪ್ರವಚನ-ತರಬೇತಿಗಳಿಲ್ಲದೆ ಪರೀಕ್ಷೆ ಎದುರಿಸುವ ಪರಿಸ್ಥಿತಿ ಉಂಟಾಗಿದೆ.

ಜಾಗತಿಕ ಬೆಳವಣಿಗೆಗೆ ಪೂರಕವಾಗಿ ಹೊಸ ಕೋರ್ಸುಗಳಿಗೆ ಆದ್ಯತೆ ನೀಡಿ ಕೇಂದ್ರ ಸರ್ಕಾರ ಹೊಸ ಪಠ್ಯಗಳಿಗೆ(ಸಿಲಬಸ್) ಅವಕಾಶ ನೀಡಿದ್ದು ಇದನ್ನು ಜಾರಿಗೆ ತರಲು ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ಸಾಧ್ಯವಾಗಿಲ್ಲ. ದೂರದ ರಾಜ್ಯಗಳಿಗೆ ಹೋಗಿ ತರಬೇತಿ ಪಡೆಯಲು ಉಪನ್ಯಾಸಕರು ಹೋಗುತ್ತಿಲ್ಲ. ಹಲವಾರು ಐಟಿಐಗಳನ್ನು ಉನ್ನತೀಕರಿಸಲು ಲಕ್ಷಾಂತರ ಹಣ ವಿನಿಯೋಗಿಸಿದರೂ ಯಾವುದೇ ರೀತಿಯ ಪರಿಣಾಮ ಸರ್ಕಾರಿ ಕಾಲೇಜುಗಳಲ್ಲಿ ಉಂಟಾಗಿಲ್ಲ, ಸಿಬ್ಬಂದಿ ಕೊರತೆ, ಶಿಥಿಲಗೊಂಡ ಯಂತ್ರಗಳು, ಕಳಪೆ ಮಟ್ಟದ ತರಬೇತಿ ಇಂತಹ ಪರಿಸ್ಥಿತಿಯ ವಿರುದ್ಧ ಧ್ವನಿ ಎತ್ತುವ ವಿದ್ಯಾರ್ಥಿಗಳಿಗೆ ಅಧಿಕಾರಿ-ತರಬೇತುದಾರರಿಂದಲೇ ಕಿರುಕುಳ. ಐಟಿಐ ತರಬೇತಿ ಪಡೆಯುವ ಬಡ ಪರಿಶಿಷ್ಟ-ಜಾತಿ-ಪಂಗಡದ ವಿದ್ಯಾರ್ಥಿಗಳಿಗೆ ತಿಂಗಳ ಭತ್ಯೆ ರೂಪದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಬರುವ ವಿದ್ಯಾರ್ಥಿ ವೇತನ ನೀಡದಿರುವುದು. ಪರೀಕ್ಷೆ ಹೆಸರಿನಲ್ಲಿ ಉಪನ್ಯಾಸಕರಿಂದ ಹಿಡಿದು ಅಧಿಕಾರಿಗಳವರಿಗೆ ವಿದ್ಯಾರ್ಥಿಗಳಿಂದ ಹಣ ವಸೂಲಿ ನಡೆಸುತ್ತಿರುವುದು. 40ರಷ್ಟು ಅನುದಾನಿತ ಐಟಿಐ ಕಾಲೇಜುಗಳು ಸರ್ಕಾರದಿಂದ ಅನುದಾನ ಶೇ. 80 ಪಡೆದರೂ ವಿದ್ಯಾರ್ಥಿಗಳಿಂದ ಹಣ ವಸೂಲಿ, ಖಾಸಗಿ ಐಟಿಐಗಳ ಅಟ್ಟಹಾಸ ಎಲ್ಲೆ ಮೀರಿದೆ. ಇಂತಹ ದುಸ್ಥಿತಿಗೆ ಕಾರಣವಾಗಿರುವ ಅಧಿಕಾರಿಗಳೂ ನಮ್ಮ ಜವಾಬ್ದಾರಿಯೇ ಇಲ್ಲವೆಂಬಂತೆ ವರ್ತಿಸುತ್ತಾ ಖಾಸಗಿ ಐಟಿಐ ಕಾಲೇಜುಗಳ ಜೊತೆ ಶಾಮೀಲಾಗಿದ್ದಾರೆ. ಬಡತನದ ಬೇಗೆಯಲ್ಲಿ ನೊಂದಿರುವ ಬಡ ವಿದ್ಯಾರ್ಥಿಗಳು ಡೊನೇಷನ್ ಕೊಟ್ಟು ವೃತ್ತಿ ಶಿಕ್ಷಣಕ್ಕೆ ಹೋಗಲಾರದೆ ತುರ್ತು ಉದ್ಯೋಗ ಆಸರೆಗಾಗಿ ಐಟಿಐನಂತಹ ಕೋರ್ಸುಗಳಿಗೆ ಅವಲಂಬಿತರಾಗುತ್ತಾರೆ. ಇಂತಹ ಬಡ ವಿದ್ಯಾರ್ಥಿಗಳಿಗೆ ಸರ್ಕಾರಗಳ ನಿರ್ಲಕ್ಷತನದಿಂದ ಇಂತಹ ಸ್ಥಿತಿ ಉಂಟಾಗಿದೆ.



ಈ ರಾಜ್ಯ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲೇ ಅದರ ಅಧಿಕಾರಿಗಳು ವಿದ್ಯಾರ್ಥಿಗಳನ್ನು ಪಾಸ್ ಮಾಡುವ ಸಲುವಾಗಿ ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದರು.

ಎಸ್.ಎಫ್.ಐ. ನಿಯೋಗ ಈ ಸಮಸ್ಯೆಗಳನ್ನು ಇಲಾಖೆಯ ನಿರ್ದೇಶಕರ ಗಮನಕ್ಕೆ ತಂದಿದೆ. ಈ ಹಿಂದೆ ಇದ್ದ ಸಮ್ಮಿಶ್ರ ಸರ್ಕಾರದಲ್ಲಿ ಅಗ್ಗದ ಜನಪ್ರಿಯತೆಗೋಸ್ಕರ ಕಾಲೇಜುಗಳನ್ನು ತೆರೆಸಿದರೇ ವಿನಃ ಅವುಗಳಿಗೆ ಪೂರಕ ಬಜೆಟ್ ಒದಗಿಸಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಅತಂತ್ರ ಸ್ಥಿತಿಯಲ್ಲಿದ್ದಾರೆ. ಮದವೇರಿದ ಅಧಿಕಾರಿಶಾಹಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಪಾಲಿಸದ ಪರಿಣಾಮವೂ ಕೂಡ ಲಕ್ಷಾಂತರ ರೂಪಾಯಿಗಳ ಭ್ರಷ್ಟತೆಗೆ ಕಾರಣವಾಗಿ ಶೈಕ್ಷಣಿಕ ಮೌಲ್ಯವೇ ಕುಸಿದು, ಖಾಸಗಿ ಐಟಿಐ ಕಾಲೇಜುಗಳು ಬಡ ವಿದ್ಯಾರ್ಥಿಗಳಿಂದ ಹಣ ಲೂಟಿ ಮಾಡಿಸಲು ಅವಕಾಶ ನೀಡಲಾಗಿದೆ.

ಹೋದ ಕಡೆಯಲೆಲ್ಲಾ ಉತ್ತಮ ಬಜೆಟ್ ನೀಡಿದ್ದೇವೆಂದು ಕೊಚ್ಚಿಕೊಳ್ಳುತ್ತಾ ಸಾಮಾನ್ಯ ಜನರನ್ನು ವಂಚಿಸುವ ಬಿ.ಎಸ್.ಯಡಿಯೂರಪ್ಪನವರ ಈ ಮಹಾವಂಚನೆಯನ್ನು ಜನಸಾಮಾನ್ಯರು ಅರಿಬೇಕಿದೆ. ಬಡ ವಿದ್ಯಾರ್ಥಿಗಳ ಭವಿಷ್ಯ ಬಲಿತೆಗೆದು ಕೊಳ್ಳುತ್ತಿರುವ ಅವರು ಮತ್ತೊಮ್ಮೆ ಅಧಿಕಾರಕ್ಕೆ ಹಾತೊರೆಯುತ್ತಿದ್ದಾರೆ. ಇಂತಹ ಘನ ಘೋರ ಸಾಧನೆಗಳನ್ನಿಟ್ಟುಕೊಂಡು ಬಿಜೆಪಿ 'ಜನಜಾಗೃತಿ ಯಾತ್ರೆ' ಮಾಡುತ್ತಿದೆ.

ಗುತ್ತಿಗೆ - ಹೊರಗುತ್ತಿಗೆ ಪದ್ಧತಿ ವಿರುದ್ಧ ಐಕ್ಯ ಚಳುವಳಿ

ದೆಹಲಿ ಸಮಾವೇಶದ ಕರೆ

ಗುತ್ತಿಗೆ, ಹೊರಗುತ್ತಿಗೆ ಎಂಬುದು ಕಾರ್ಮಿಕ ವರ್ಗದ ಶ್ರಮಶಕ್ತಿಯನ್ನು ಬಂಡವಾಳಗಾರರು ಅತ್ಯಂತ ಅಗ್ಗವಾಗಿ ಹಿಂಡಿಕೊಳ್ಳುವ ಒಂದು ತಂತ್ರವಾಗಿದೆ. ಇದರ ವಿರುದ್ಧ ಎಲ್ಲಾ ಕಾರ್ಮಿಕ ಸಂಘಟನೆಗಳೂ ಸೇರಿ ಸಂಘಟಿಸಿದ್ದ ಸಮಾವೇಶದ ವರದಿ ಇದು

ಖಾಯಂ ಹಾಗೂ ಸರ್ವಕಾಲಿಕವಾದ ಕೆಲಸಗಳನ್ನು ಗುತ್ತಿಗೆ ಪದ್ಧತಿಗೆ ವಹಿಸಬಾರದು. ಇಂತಹ ಸರ್ವಕಾಲಿಕವಾದ ಕೆಲಸಗಳನ್ನು ನಿರ್ವಹಿಸುತ್ತಿರುವ ಕಾರ್ಮಿಕರ ಕೆಲಸಗಳನ್ನು ಖಾಯಂಗೊಳಿಸಬೇಕು. ಖಾಯಂ ಕೆಲಸಗಾರರಿಗೆ ನೀಡುವ ಸಂಬಳವನ್ನೇ ಗುತ್ತಿಗೆ ಕಾರ್ಮಿಕರಿಗೆ ನೀಡಬೇಕು. ಗುತ್ತಿಗೆ ಕಾರ್ಮಿಕರಿಗೆ ಎಲ್ಲಾ ರೀತಿಯ ಸಾಮಾಜಿಕ ಸುರಕ್ಷಾಕ್ರಮಗಳನ್ನು ಒದಗಿಸಬೇಕು ಮತ್ತು ಗುತ್ತಿಗೆ ಕಾರ್ಮಿಕರಿಗೆ ನೀಡುವ ವೇತನ, ಸಾಮಾಜಿಕ ಸುರಕ್ಷೆ ಹಾಗೂ ಅವರ ಕೆಲಸದ ಭದ್ರತೆಗಾಗಿ ಪ್ರಧಾನವಾಗಿ ಮಾಲಿಕರನ್ನೇ ಜವಾಬ್ದಾರರನ್ನಾಗಿಸಬೇಕು.

ಮೇಲ್ಕಂಡ ಈ ಪ್ರಮುಖ ಬೇಡಿಕೆಗಳ ಈಡೇರಿಕೆಗಾಗಿ ದೇಶದ ಸಾರ್ವಜನಿಕ ಖಾಸಗಿ ಮತ್ತು ವಿವಿಧ ತೆರನಾದ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಎಲ್ಲಾ ಗುತ್ತಿಗೆ ಕಾರ್ಮಿಕರು 2008 ಜನವರಿ 8ರಂದು "ಅಖಿಲ ಭಾರತ ಬೇಡಿಕೆ ದಿನಾಚರಣೆ" ಯನ್ನು ಆಚರಿಸಲು ನಿರ್ಧರಿಸಿದರು.

2007ರ ನವೆಂಬರ್ 19ರಂದು ನವದೆಹಲಿಯಲ್ಲಿ ಸಮಾವೇಶಗೊಂಡಿದ್ದ "ಗುತ್ತಿಗೆ ಪದ್ಧತಿ ವಿರುದ್ಧದ ಅಖಿಲ ಭಾರತ ಸಮಾವೇಶ"ವು ಈ ಮಹತ್ವದ ನಿರ್ಧಾರ ಕೈಗೊಂಡಿದೆ.

ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರಾಯೋಜಕ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ನಡೆದ ಒಂದು ದಿನದ ಅಖಿಲ ಭಾರತ ಸಮಾವೇಶದಲ್ಲಿ ದೇಶದ ಮೂಲೆ ಮೂಲೆಗಳಿಂದಲೂ, ವಿವಿಧ ಕ್ಷೇತ್ರಗಳಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಕಾರ್ಮಿಕ ಪ್ರತಿನಿಧಿಗಳು ಪಾಲ್ಗೊಂಡು ಚರ್ಚೆ ನಡೆಸಿದರು.

ಕೇಂದ್ರ ಕಾರ್ಮಿಕ, ಸಂಘಟನೆಗಳಾದ ಎಐಟಿಯುಸಿ, ಸಿಐಟಿಯು, ಯುಟಿಯುಸಿ(ಎಲ್‌ಎಸ್), ಹೆಚ್‌ಎಂಎಸ್, ಟಿಯುಸಿಸಿ, ಎಐಸಿಸಿಯುಟಿ, ಬ್ಯಾಂಕ್, ವಿಮಾ, ದೂರಸಂಪರ್ಕ, ರಕ್ಷಣೆ, ರೈಲ್ವೆ, ಪೆಟ್ರೋಲಿಯಂ, ಆರೋಗ್ಯ, ವಿದ್ಯುತ್, ಸೇರಿದಂತೆ ಹಲವು ಕೇಂದ್ರಿಯ ಕಾರ್ಮಿಕ ಸಂಘಟನೆಗಳ ಮುಖಂಡರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಸಮಾವೇಶದಲ್ಲಿ ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಡಾ|ಎಂ.ಕೆ.ಪಂಧೆ ಚರ್ಚೆಗಾಗಿ ಕರಡು ಘೋಷಣೆಯನ್ನು ಮಂಡಿಸಿದರು. ನಂತರ ನಡೆದ ಚರ್ಚೆಯಲ್ಲಿ ಎಐಟಿಯುಸಿ ಪರವಾಗಿ, ಸಂಸದ ಗುರುದಾಸ್‌ಗುಪ್ತ, ಸಿಪಿಐ(ಎಂ)ನ ಸಂಸದರಾದ ಬಸುದೇವ ಆಚಾರ್ಯ, ಹೆಚ್‌ಎಂಎಸ್‌ನಿಂದ ನಾಗಪಾಲ್, ಎಐಸಿಸಿಟಿಯುಟಿಯಿಂದ ಸಂತೋಷ್‌ರಾಯ್, ಟಿಯುಸಿಸಿಯಿಂದ ಎಸ್.ಪಿ.ತಿವಾರಿ, ಯುಟಿಯುಸಿ (ಎಲ್‌ಎಸ್)ನಿಂದ ಸಂತ್ವಂತ್‌ಸಿಂಗ್ ಸೇರಿದಂತೆ ಹಲವಾರು ಮುಖಂಡರು ಮಾತನಾಡಿ ಕೇಂದ್ರ ಕಾರ್ಮಿಕ ಸಂಘಗಳು ಹಮ್ಮಿಕೊಳ್ಳುವ ಮುಂದಿನ ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಇದಲ್ಲದೆ, ಬ್ಯಾಂಕ್ ನೌಕರರ ಪರವಾಗಿ ರಾಮಚಂದ್ರ, ಕಟ್ಟಡ ಕಾರ್ಮಿಕರ ಪರವಾಗಿ ದೀಪಂಕರ್ ಚಕ್ರವರ್ತಿ, ಸರ್ಕಾರಿ ನೌಕರರ ಪರವಾಗಿ, ಪ್ರೇಮಚಂದ್, ಬಿಎಸ್‌ಎನ್‌ಎಲ್ ನೌಕರರ ಪರವಾಗಿ ನಂಬೂದರಿ, ವಿಮಾ ನೌಕರರ ಪರವಾಗಿ ತಿಲಕ್‌ಚಾ ಅಲ್ಲದೆ, ಬೀಡಿ, ಪೆಟ್ರೋಲಿಯಂ, ರಕ್ಷಣೆ, ವಿದ್ಯುತ್ ಸೇರಿದಂತೆ ಹಲವು ಕ್ಷೇತ್ರಗಳ ಗಣ್ಯರು ಪಾಲ್ಗೊಂಡು ಸಮಾವೇಶದಲ್ಲಿ ಮಂಡಿಸಿದ ಕರಡು ನಿರ್ಣಯವನ್ನು ಬೆಂಬಲಿಸಿ ಮಾತನಾಡಿದರು.

ಹೋರಾಟದ ಕಾರ್ಯಕ್ರಮ

ನವೆಂಬರ್ 19ರಂದು ನವದೆಹಲಿಯಲ್ಲಿ ನಡೆದ "ಗುತ್ತಿಗೆ ಪದ್ಧತಿ ವಿರುದ್ಧದ ಸಮಾವೇಶ"ವು ಅಂತಿಮವಾಗಿ ಕೆಳಕಂಡ 13 ಬೇಡಿಕೆಗಳನ್ನು ಅಂಗೀಕರಿಸಿತು ಮತ್ತು ಅವುಗಳನ್ನು ದೇಶದ ಎಲ್ಲಾ ಕಡೆಗಳಲ್ಲಿ ರಾಜ್ಯಮಟ್ಟದ, ಜಿಲ್ಲಾಮಟ್ಟದ ಕಾರ್ಖಾನೆ/ಉದ್ದಿಮೆ ಮಟ್ಟದ ಸಮಾವೇಶಗಳನ್ನು ನಡೆಸಿ ವ್ಯಾಪಕ ಪ್ರಚಾರ ನಡೆಸಲು ನಿರ್ಧರಿಸಿತು.

ಅಲ್ಲದೆ, 2008ರ ಜನವರಿ 8ರಂದು "ಅಖಿಲ ಭಾರತ ಬೇಡಿಕೆ" ದಿನಾಚರಣೆ ಆಚರಿಸಲು ಕರೆ ನೀಡಿ, ಅಂದು ದೇಶಾದ್ಯಂತ ಎಲ್ಲಾ ಗುತ್ತಿಗೆ


ದೆಹಲಿ ಸಮಾವೇಶದ ಚಿತ್ರ

ಕಾರ್ಮಿಕರು, ಧರಣಿ, ರ್‍ಯಾಲಿ, ಪ್ರತಿಭಟನಾಪ್ರದರ್ಶನ ನಡೆಸಲು ಕರೆ ನೀಡಿತು.

ದೆಹಲಿಯಲ್ಲಿ ನಡೆದ ಈ ಸಮಾವೇಶದಲ್ಲಿ ಕರ್ನಾಟಕದಿಂದ ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್ ಹಾಗೂ ಸಿಐಟಿಯು. ಮುಖಂಡರಾದ ಕೆ.ಮಹಾಂತೇಶ್, ಭದ್ರಾವತಿಯ ಎಲ್.ರಂಗೇಗೌಡ ಹಾಗೂ ಬೆಂಗಳೂರಿನ ಸುಬ್ರಮಣ್ಯಂ ನೇತೃತ್ವದಲ್ಲಿ ಮೈಕೊ, ಬಿಎಸ್‌ಎನ್‌ಎಲ್, ಬಿಇಎಲ್, ಫೆದರ್‌ಲೈಟ್, ಭದ್ರಾವತಿಯ ವಿಐಎಸ್‌ಎಲ್‌ನ ಸುಮಾರು 30ಕ್ಕಿಂತ ಅಧಿಕ ಕಾರ್ಮಿಕರು ಪಾಲ್ಗೊಂಡಿದ್ದರು. ಅಲ್ಲದೆ ಬೆಂಗಳೂರು ಜೆಎಎಫ್ ಪರವಾಗಿ ಅನಂತ ಪದ್ಮನಾಭ್ ಕೂಡ ಭಾಗವಹಿಸಿ ಮಾತನಾಡಿದರು.

ಬೇಡಿಕೆಗಳು:

1. ಗುತ್ತಿಗೆದಾರರ ಅಡಿಯಲ್ಲಿ, ಹೊರಗುತ್ತಿಗೆಯಲ್ಲಿ ಅಥವಾ ಇನ್ನಾವುದೇ ಏಜೆನ್ಸಿ ಅಡಿಯಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಕಾರ್ಮಿಕರನ್ನು ಕಡ್ಡಾಯವಾಗಿ ಪ್ರಧಾನ ಮಾಲಿಕರ (Principal Employer)) ಅಡಿಯಲ್ಲಿ ಕೆಲಸ ಮಾಡುವ ಕಾರ್ಮಿಕರೆಂದೇ ಪರಿಗಣಿಸಬೇಕು.

2. ಖಾಯಂ ಆದ ಮತ್ತು ಸರ್ವಕಾಲಿಕ ಕೆಲಸಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಹೆಸರನ್ನು ಕಂಪನಿ/ಉದ್ದಿಮೆಯ ನೊಂದಣಿ ಪುಸ್ತಕದಲ್ಲಿ ಕಡ್ಡಾಯವಾಗಿ ಇರುವಂತೆ ಕ್ರಮವಹಿಸಬೇಕು ಮತ್ತು ಇದನ್ನು ಉಲ್ಲಂಘಿಸುವವರ ವಿರುದ್ಧ ನೇರ ಕಾನೂನು ಕ್ರಮ ಕೈಗೊಳ್ಳಬೇಕು.

3. ಹೊರಗುತ್ತಿಗೆಯನ್ನು 'ಗುತ್ತಿಗೆ' ಎಂದೇ [redacted] ಗುತ್ತಿಗೆ ಕಾರ್ಮಿಕ ಕಾನೂನನ್ನು ಅನ್ವಹಿಸಬೇಕು.

4. ಖಾಯಂ ನೌಕರರು ಪಡೆಯುವ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಗುತ್ತಿಗೆ ಕಾರ್ಮಿಕರಿಗೂ ಖಾತ್ರಿಗೊಳಿಸಬೇಕು ಮತ್ತು ಜಾರಿಗೊಳಿಸಲಾಗುತ್ತಿರುವ ಕೇಂದ್ರಿಯ ಶಾಸನದಲ್ಲಿ ಇದನ್ನು ಪ್ರಮುಖ ಅಂಶವೆಂದೇ ಗುರುತಿಸಬೇಕು. (ಈಗ ರೂಪಿಸಿರುವ ಶಾಸನದಲ್ಲಿ ಈ ಕುರಿತು ನಿಯಾಮವಳಿ ಮಾಡಲಾಗಿದೆ)

5. ಭಾರತೀಯ ಉಕ್ಕು ಪ್ರಾಧಿಕಾರ ನಿಯಮಿತ (SAIL)ದ ಪ್ರಕರಣದಲ್ಲಿ ಗುತ್ತಿಗೆ ಕಾರ್ಮಿಕರಿಗೆ ಆಗಿರುವ ಅನ್ಯಾಯ ಸರಿಪಡಿಸಲು 1970ರ ಗುತ್ತಿಗೆ ಕಾರ್ಮಿಕ (ನಿಷೇಧ-ನಿಯಂತ್ರಣ) ಕಾಯ್ದೆಯ ಸೆಕ್ಷನ್ 10(1)ಕ್ಕೆ ಸೂಕ್ತ ತಿದ್ದುಪಡಿ ತರಬೇಕು.

6. ಪ್ರಚಲಿತವಾಗಿ ಕಂಪನಿ/ಸಂಸ್ಥೆಯ ಖಾಯಂ ನೌಕರರಿಗೆ ಇರುವ ವೇತನವನ್ನೇ ಆ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರಿಗೂ ಖಾತರಿಗೊಳಿಸಬೇಕು.

7. ಎಲ್ಲಾ ಗುತ್ತಿಗೆದಾರರು ಅಧಿಕೃತ ಆಡಳಿತದಿಂದ 'ಲೈಸೆನ್ಸ್' ಪಡೆದೇ ಗುತ್ತಿಗೆ ಕೆಲಸವನ್ನು ನಿರ್ವಹಿಸಬೇಕು.

8. ಒಂದು ವೇಳೆ ಗುತ್ತಿಗೆದಾರ ಬದಲಾದರೂ ಆ ಹಿಂದಿನ ಗುತ್ತಿಗೆದಾರನಿಂದ ನೇಮಿಸಲ್ಪಟ್ಟ ಎಲ್ಲಾ ಗುತ್ತಿಗೆ ಕಾರ್ಮಿಕರನ್ನು ಯಾವುದೇ ಬದಲಾವಣೆ ಇಲ್ಲದೆ ಅದೇ ಕೆಲಸದಲ್ಲಿ ಮುಂದುವರೆಸಬೇಕು. ಹೊಸ ಟೆಂಡರ್ ಕರೆಯುವಾಗ ಹಾಕುವ ನಿಬಂಧನೆಗಳಲ್ಲಿ ಈ ಅಂಶವನ್ನು ಆಡಳಿತ ಮಂಡಳಿ ಕಡ್ಡಾಯವಾಗಿ ಸೇರಿಸಬೇಕು.

9. ಉದ್ಯೋಗಕ್ಕೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಗೆ ಮಾಲಿಕರು ಸಲ್ಲಿಸುವ ವಾರ್ಷಿಕ ವರದಿಯಲ್ಲಿ ಗುತ್ತಿಗೆ ಕಾರ್ಮಿಕರ ವಿವರ ಸೇರಿದಂತೆ ಗುತ್ತಿಗೆದಾರನ ಲೈಸೆನ್ಸ್ ಇತ್ಯಾದಿ ಅಂಶಗಳನ್ನು ನೀಡಲೇಬೇಕೆಂಬುದು ಕಡ್ಡಾಯವಾಗಬೇಕು.

10. ಕೆಲಸ ಮಾಡುವ ಸಂದರ್ಭದಲ್ಲಿ ಯಾವುದೇ ಅವಗಡ ಸಂಬಂಧಿಸಿ ಗುತ್ತಿಗೆ ಕಾರ್ಮಿಕ ಮೃತಪಟ್ಟ ಸಂದರ್ಭದಲ್ಲಿ, ಕಂಪನಿ/ಉದ್ಯಮದ ಖಾಯಂ ನೌಕರರಿಗೆ ಸಿಗುವ ಪರಿಹಾರವನ್ನು ಗುತ್ತಿಗೆ ಕಾರ್ಮಿಕರಿಗೆ ನೀಡಬೇಕು. ಅಲ್ಲದೆ ಮೃತಪಟ್ಟ ಗುತ್ತಿಗೆ ಕಾರ್ಮಿಕನ ಅವಲಂಬಿತರಿಗೆ ಬದಲಿ ಉದ್ಯೋಗ ನೀಡುವ ಜವಾಬ್ದಾರಿಯನ್ನು ಅದರ ಪ್ರಧಾನ ಮಾಲಿಕರೆ (dÚÁsÓÂï×r EÂïrt¼uÚ) ಹೊರಬೇಕು.

11. ಗುತ್ತಿಗೆ ಕಾರ್ಮಿಕರಿಗೆ ಸಿಗಬಹುದಾದ ಎಲ್ಲಾ ಕಾನೂನಾತ್ಮಕ ಪರಿಹಾರಗಳನ್ನು ಮತ್ತು ಇಎಸ್‌ಐ, ಪಿಎಫ್, ವಸತಿ, ಶಿಶುಪಾಲನಾ ಕೇಂದ್ರ ಹಾಗೂ ಅವರ ಮಕ್ಕಳ ಶಿಕ್ಷಣ ಇತ್ಯಾದಿಗಳನ್ನು ಜಾರಿಗೊಳಿಸುವ ಹೊಣೆಯನ್ನು ಕಂಪನಿ/ಉದ್ಯಮದ ಮಾಲಿಕರೇ ವಹಿಸಿಕೊಳ್ಳ ಬೇಕು ಮತ್ತು ಕಾರ್ಮಿಕ ನಷ್ಟ ಪರಿಹಾರ ಮತ್ತು ಕಾರ್ಮಿಕ ಕಾನೂನು ಉಲ್ಲಂಘನೆ ಪ್ರಕರಣಗಳಲ್ಲಿ ನೇರವಾಗಿ ಪ್ರಧಾನ ಮಾಲಿಕನಿಗೆ ಶಿಕ್ಷೆಯಾಗುವಂತೆ ಕಾನೂನು ರೂಪಿಸಬೇಕು.

12. ಎಲ್ಲಾ ರಾಜ್ಯ ಸರ್ಕಾರಗಳು ಗುತ್ತಿಗೆ-ಕಾರ್ಮಿಕರ ಸಮಸ್ಯೆಗಳ ಪರಿಶೀಲನೆಗಾಗಿ ಪ್ರತ್ಯೇಕ ಸೂಕ್ತ ಅಧಿಕೃತ ವ್ಯಕ್ತಿಗಳನ್ನು ನೇಮಿಸಬೇಕು.

13. ಎಲ್ಲಾ ರಾಜ್ಯಗಳಲ್ಲೂ ಮತ್ತು ಕೇಂದ್ರ ಮಟ್ಟದಲ್ಲೂ ಕಾರ್ಮಿಕ, ಮಾಲಿಕ ಮತ್ತು ಸರ್ಕಾರದ ಪ್ರತಿನಿಧಿಗಳನ್ನೊಳಗೊಂಡು 'ಗುತ್ತಿಗೆ ಕೆಲಸ ಉಸ್ತುವಾರಿ ಮಂಡಳಿ'ಯನ್ನು ಕಡ್ಡಾಯವಾಗಿ ಸ್ಥಾಪಿಸಬೇಕು. ಈ ಮಂಡಳಿ ಕಾರ್ಮಿಕ ಕಾನೂನು ಉಲ್ಲಂಘನೆ ಪ್ರಕರಣ ಹಾಗೂ ಅಂತರ ರಾಜ್ಯ ವಲಸೆ ಕಾರ್ಮಿಕ ಕಾಯ್ದೆ ಜಾರಿ ಕುರಿತ ವಿಚಾರಗಳನ್ನು ಪರಿಶೀಲಿಸಬೇಕು.

ಈ ಎಲ್ಲಾ ಬೇಡಿಕೆಗಳ ಈಡೇರಿಕೆಗಾಗಿ ಕೇಂದ್ರ/ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರಲು 2007 ಡಿಸೆಂಬರ್ 4 ಮತ್ತು 5 ರಂದು ಕೇಂದ್ರ ಕಾರ್ಮಿಕ ಸಂಘಟನೆಗಳು (ಜೆಸಿಟಿಯು) ಕರೆ ನೀಡಿರುವ ಸತ್ಯಾಗ್ರಹ ಚಳುವಳಿಯನ್ನು ಭಾರೀ ಪ್ರಮಾಣದಲ್ಲಿ ಯಶಸ್ವಿಗೊಳಿಸಲು ಈ ಸಮಾವೇಶ ಕರೆ ನೀಡಿದೆ.

ವರದಿ: ಕೆ.ಮಹಾಂತೇಶ್

ಕಾಲು ಕೈಹಿಡಿಯೋರು... ಸೈಜುಗಲ್ಲು ಹೊತ್ತೋರು...

ಬಂಗಲೆಗಳನ್ನು ಕಟ್ಟುವ ಕಾರ್ಮಿಕರು ಗುಡಿಸಲುಗಳಲ್ಲಿ ವಾಸಿಸುತ್ತಾರೆ, ಗಗನಚುಂಬಿ ಕಟ್ಟಡಗಳನ್ನು ಕಟ್ಟುವವರು ಅಲ್ಲೇ ಎಲ್ಲೋ ಮುರುಕಲು ಶೆಡ್ಡುಗಳಲ್ಲಿ ವಾಸಿಸುತ್ತಾರೆ ಎಂಬುದು ನಮಗೆಲ್ಲಾ ತಿಳಿದ ವಿಷಯವೇ.

ಖ್ಯಾತ ಸಾಹಿತಿ ಪಿ.ಲಂಕೇಶರು ಈ ಕಟ್ಟಡ ಕಾರ್ಮಿಕರ ಬಗೆಗೆ ಏನು ಗಮನಿಸಿದ್ದಾರೆಂದರೆ, ಈ ಕಾರ್ಮಿಕರು ಕಟ್ಟುವ ಕಟ್ಟಡ ಒಂದೆಡೆ ನಿಶ್ಚಲವಾಗಿ ಭದ್ರವಾಗಿ ನಿಲ್ಲುತ್ತದೆ. ಆದರೆ ಇದನ್ನು ಕಟ್ಟುವ ಕಾರ್ಮಿಕರು ಮಾತ್ರ ಅತಂತ್ರರಾಗಿ ಕೆಲಸಕ್ಕಾಗಿ ಕೂಳಿಗಾಗಿ ಊರೂರು ತಿರುಗುತ್ತಾ ಅಲೆಯುತ್ತಾರೆ.

ಈ ಕಾರ್ಮಿಕರಿಗೆ ಹೆಚ್ಚಿನ ಸಾರಿ ಯಾವುದೇ ಕಾರ್ಮಿಕ ಕಾನೂನುಗಳು ಅನ್ವಯವಾಗುವುದಿಲ್ಲ. ಅವರಿಗೆ ಜೀವನ ಭದ್ರತೆ ಇರುವುದಿಲ್ಲ. ಸಂಘಟಿತ ಹೋರಾಟದ ಫಲವಾಗಿ ಈಗ ಕಾರ್ಮಿಕ ಕಲ್ಯಾಣ ಮಂಡಳಿ ಇತ್ಯಾದಿಯಾಗಿ ರಚನೆಯಾಗಿ ಕಟ್ಟಡ ಕೆಲಸಗಾರರ ಮಕ್ಕಳ ವಿದ್ಯಾಭ್ಯಾಸ ಮುಂತಾದವುಗಳಿಗೆ ಸ್ವಲ್ಪ ಸೌಲಭ್ಯಗಳು ಸಿಗುತ್ತಿವೆ.

ಆದರೆ ಹೆಚ್ಚಿನ ಕಾರ್ಮಿಕರಿಗೆ ಇವು ದೊರೆಯುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ 'ಇವರು ಕಟ್ಟಡ ಕಾರ್ಮಿಕರು' ಎಂಬ ಗುರುತಿನ ಚೀಟಿ ಪಡೆದುಕೊಂಡರೆ ಸೌಲಭ್ಯಗಳನ್ನು ಪಡೆಯುವ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದಿಟ್ಟಂತೆ.

ಕಟ್ಟಡ ಕಾರ್ಮಿಕರಿಗೆ ಇಂತಹ ಗುರುತಿನ ಚೀಟಿಯನ್ನು ವಿತರಿಸುವ ಸಮಾರಂಭ ಹಾಗೂ ಕಟ್ಟಡ ಕಾರ್ಮಿಕರ ಸಮಾವೇಶವು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ನಡೆದಿದೆ. ಇದನ್ನು ಸಂಘಟಿಸಿದ್ದು ಸಿಐಟಿಯುಗೆ ಸೇರಿದ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್.

ಸಮಾರಂಭದಲ್ಲಿ ಸಿಪಿಐ(ಎಂ) ಮುಖಂಡರಾದ ಕೆ.ಬಸವರಾಜ್, ಕಾರ್ಮಿಕರ ಫೆಡರೇಷನ್‌ನ ಜಿಲ್ಲಾ ಸಂಚಾಲಕರಾದ ವಿ.ಬಸವರಾಜು ಮುಂತಾದವರು ಮಾತನಾಡಿದ್ದಾರೆ. ಸಹಾಯಕ ಕಾರ್ಮಿಕ ಆಯುಕ್ತರಾದ ಎಸ್.ಡಿ.ರವಿಕುಮಾರ್ ಜಿಲ್ಲಾ ಕಾರ್ಮಿಕ ಅಧಿಕಾರಿ ವಿಜಯೇಂದ್ರ ನಾಯಕ್, ಪುರಸಭಾ ಸದಸ್ಯರಾದ ಚಂದ್ರನಾಯಕ್ ಕಲ್ಲುಣಕೆ ರಾಜಾ, ಎಲ್.ಜಗದೀಶ್ ಪಾಲ್ಗೊಂಡಿದ್ದಾರೆ.

ಕಾರ್ಮಿಕ ಕಲ್ಯಾಣ ಮಂಡಳಿ ನೀಡುವ ಮಾಸಿಕ ರೂ.300 ರೂಪಾಯಿಗಳನ್ನು 3000 ರೂಪಾಯಿಗೆ ಏರಿಸಲು, ಅದೇ ರೀತಿ, ಕಟ್ಟಡ ಕಾರ್ಮಿಕರಿಗೆ ಮನೆ ಕಟ್ಟಿಕೊಳ್ಳಲು 50 ಸಾವಿರ ರೂ. ನೀಡುವ ಬದಲಿಗೆ ಮನೆಯನ್ನೇ ಕಟ್ಟಿಕೊಡಬೇಕು ಮುಂತಾದ ಬೇಡಿಕೆಗಳಿಗಾಗಿ ಸಮಾವೇಶ ಒತ್ತಾಯಿಸಿದೆ.

- ಎಲ್.ಜಗದೀಶ್

ಹಿನ್ನಡೆಯುವ ಯೋಜನೆಯೇ?



ಕಳೆದೆರಡು ವರ್ಷಗಳಿಂದ ಕೃಷಿ ಕ್ಷೇತ್ರಕ್ಕೆ ನೀಡಬೇಕಾದ ಸಾಲದ ಗುರಿಯನ್ನು ಬ್ಯಾಂಕುಗಳು ಒಟ್ಟಾರೆಯಾಗಿ ಮೀರಿವೆ ಎಂಬುದು ಸರ್ಕಾರಿ ವರದಿ. ಕಳೆದ ಸಾಲಿನಲ್ಲಿ ಅಂದರೆ 2006-07 ರಲ್ಲಿ ಕೃಷಿ ವಲಯಕ್ಕೆ ಸಾಂಸ್ಥಿಕ ಪತ್ತಿನ ಗುರಿ (ಅಂದರೆ ಬ್ಯಾಂಕುಗಳು ಸಹಕಾರ ಸಂಘಗಳು ಇತ್ಯಾದಿ ಸಂಸ್ಥೆಗಳು ನೀಡುವ ಸಾಲ) 1,75,000 ಕೋಟಿ ರೂಪಾಯಿಗಳು. ನಿಜದಲ್ಲಿ ಸಂಸ್ಥೆಗಳು ಒಟ್ಟು 2,03,269 ಕೋಟಿ ರೂಪಾಯಿಗಳು ಸಾಲ ನೀಡಿದ್ದವು. ಅಂದರೆ ಗುರಿಗಿಂತ ಶೇ.35-40 ರಷ್ಟು ಹೆಚ್ಚಿಗೆ 2004 ರಲ್ಲಿ ಮುಂಬರುವ 3 ವರ್ಷಗಳಲ್ಲಿ ಕೃಷಿ ಕ್ಷೇತ್ರಕ್ಕೆ ಬ್ಯಾಂಕಿಂಗ್ ವಲಯದಿಂದ ನೀಡುವ ಸಾಲ ದ್ವಿಗುಣವಾಗಬೇಕೆಂಬ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಈ ಗುರಿಯನ್ನು ಬ್ಯಾಂಕಿಂಗ್ ವಲಯ ಮುಟ್ಟಿದೆ. ಈ ಸಾಲಿನಲ್ಲಿ ಅಂದರೆ 2007-08ರಲ್ಲಿ ಬ್ಯಾಂಕಿಂಗ್ ವಲಯದಿಂದ ಕೃಷಿಗೆ 2,25,000 ಕೋಟಿ ರೂಪಾಯಿಗಳ ಸಾಲ ನೀಡಬೇಕೆಂಬ ಗುರಿಯಿದೆ. ಈ ಗುರಿಯನ್ನು ಅವು ಸಾಧಿಸಬಹುದು.

ನೀಡುವ ಸಾಲದ ಪ್ರಮಾಣದಿಂದಲೇ ಅಭಿವೃದ್ಧಿ ಬೆಳವಣಿಗೆ ಆಗುವುದಿದ್ದರೆ ಈ ಗುರಿಗಳನ್ನು ತಲುಪಿದ್ದರಿಂದ ಕೃಷಿಯಲ್ಲಿ ಅಪಾರ ಪ್ರಮಾಣದ ಬೆಳವಣಿಗೆ ಆಗಿಬಿಡಬೇಕಾಗಿತ್ತು. ಬದಲಿಗೆ ದೇಶದಾದ್ಯಂತ ರೈತರ ಆತ್ಮಹತ್ಯೆಗಳು ಮುಂದುವರಿದೇ ಇದೆ. ಕೃಷಿಯ ಬೆಳವಣಿಗೆಯ ಪ್ರಮಾಣ ಚಿಂತಾಜನಕವಾಗಿಯೇ ಇದೆ. ದಿನ ಬೆಳಗಾದರೆ ದೇಶದ ಷೇರು ಮಾರುಕಟ್ಟೆ ಅಬ್ಬರಿಸುತ್ತಾ ಕೆಲವೇ ಕೆಲವು ಬಂಡವಾಳಿಗರು ಜಗತ್ತಿನ ಅತಿ ಶ್ರೀಮಂತರ ಪಾಲಿಗೆ ಸೇರಿರುವ ಸುದ್ದಿಗಳನ್ನು ಬಿತ್ತರಿಸುತ್ತಿವೆ. ರೈತರ ಬೆಳೆಗಳಿಗೆ ಸರಿಯಾದ ಬೆಲೆ ದೊರೆಯದೇ ಇರುವುದ ಕೃಷಿ ಉತ್ಪನ್ನಗಳನ್ನು ಕೊಳ್ಳುವ ಗ್ರಾಹಕರು ಅತಿಯಾದ ಬೆಲೆ ತೆರುವುದು ಇವೆಲ್ಲ ಸಾಮಾನ್ಯವಾಗಿ ಬಿಟ್ಟಿದೆ. ಈ ನಡುವೆ ಗೋಧಿಯಂತಹ ಅಹಾರ ಧಾನ್ಯವನ್ನು ಕೇಂದ್ರ ಸರ್ಕಾರ ಆಮದು ಮಾಡಿಕೊಳ್ಳುವವರೆಗೂ ಹೋಗಿದೆ.

ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರ್ಕಾರದ ಬೌದ್ಧಿಕ ದಿವಾಳಿತನವನ್ನು (ಅಥವಾ ಉದ್ದೇಶಪೂರ್ವಕ ಕ್ರಮಗಳು) ಕೃಷಿ ಕ್ಷೇತ್ರಕ್ಕೆ ಸಾಲ ನೀಡಿದರೆ ಕೃಷಿ ಅಭಿವೃದ್ಧಿಯಾಗುತ್ತದೆ ಎಂಬ ಗ್ರಹಿಕೆ ತೋರಿಸುತ್ತದೆ. ದೇಶದಲ್ಲಿ ಇಂದಿಗೂ ಶೇ.80ಕ್ಕೂ ಹೆಚ್ಚು ರೈತರು ಸಣ್ಣ ಮತ್ತು ಅತಿ ಸಣ್ಣ ರೈತರು ಈ ರೈತರಿಗೆ ಸಾಲದ ಜೊತೆಗೆ ಇತರೆ ಎಲ್ಲ ಬಾಗುವಾಡುಗಳು ಸಮಯಕ್ಕೆ ಸುಲಭದಲ್ಲಿ ದೊರೆತು ಬೆಳೆದ ಬೆಳೆಗೆ ಒಳ್ಳೆಯ ಬೆಲೆ ದೊರೆತರೆ ಮಾತ್ರ ನಿಜವಾದ ಆಸರೆ ದೊರೆತಂತಾಗುತ್ತದೆ. ರೈತರಿಗೆ ಸಾಲ ನೀಡುವ ಬ್ಯಾಂಕುಗಳು ತಮ್ಮ ಗುರಿಗಳನ್ನು ದೊಡ್ಡ ರೈತರಿಗೆ ಮತ್ತು ಜಮೀನುದಾರರಿಗೆ ನೀಡಿ ಸಾಧಿಸುವ ಸುಲಭದ ದಾರಿಯನ್ನು ಆಯ್ದುಕೊಳ್ಳುತ್ತವೆ.

ಇಂದಿನ ಬ್ಯಾಂಕಿಂಗ್ ವಲಯದ ಉದಾರೀಕರಣವೂ ಈ ದಿಕ್ಕಿನಲ್ಲೇ ಇದೆ ಎಂಬುದನ್ನು ನಾವು ಗಮನಿಸಬೇಕು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹೆಚ್ಚಿನ ಸಿಬ್ಬಂದಿ ಸೇರಿಸಿಕೊಳ್ಳದೆ ಹಲವು ವರ್ಷಗಳೇ ಆದವು. ಹಿಂದಿನಂತೆ ಕೃಷಿ ಪದವೀಧರರನ್ನು ಆಯ್ಕೆ ಮಾಡಿಕೊಂಡು ಆ ವಲಯಕ್ಕೆ ಸಾಲದ ಜೊತೆಗೆ ತಾಂತ್ರಿಕ ನೆರವನ್ನು ನೀಡುವ ಪ್ರಯತ್ನಗಳನ್ನೆಲ್ಲ ಪೂರ್ತಿಯಾಗಿ ಕೈಬಿಡಲಾಗಿದೆ. ಬ್ಯಾಂಕುಗಳು ಬರಿ ಲಾಭಮುಖಿಯಾಗಿರುವುದರಿಂದ ಅವುಗಳಿಗೆ ಸಾಮಾಜಿಕ ಜವಾಬ್ದಾರಿಯ ಸೋಂಕೆ ಇಲ್ಲದಂತಾಗಿದೆ.

ಹಾಗೆಯೇ ಬ್ಯಾಂಕುಗಳು ಹೆಚ್ಚೆಚ್ಚಾಗಿ ವಾಣಿಜ್ಯ ಬೆಳೆಗಳಿಗೆ ಸಾಲ ನೀಡುತ್ತವೆ ಯಾಕೆಂದರೆ ಇಲ್ಲಿ ಗುರಿ ತಲುಪುವುದು ಸುಲಭ. ಜೊತೆಗೆ ವಸೂಲಾತಿಯೂ ಸುಲಭ. ಬ್ಯಾಂಕುಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಯಾಂತ್ರೀಕರಣ ಆಗಿರುವುದರಿಂದ ಬ್ಯಾಂಕು ಸಿಬ್ಬಂದಿಯೂ ಹೆಚ್ಚು ಯಾಂತ್ರಿಕವಾಗಿದ್ದಾರೆ. ದೇಶದ ಜನತೆಯ ಬಗ್ಗೆ ಚಿಂತಿಸುವ ಅವಶ್ಯಕತೆ ಅವರಿಗಿಲ್ಲ. ಅದಕ್ಕೆ ಅಗತ್ಯವಾದ ವ್ಯವಧಾನವೂ ಅವರಿಗಿಲ್ಲ.

ಸಹಜವಾಗಿಯೇ ಕೃಷಿ ವಲಯದ ಸಮಸ್ಯೆಗಳು ನೂರ್ಮಡಿಸಿವೆ. ಸರ್ಕಾರ ಬರೀ ಸಾಲದ ಗುರಿ ಸಾಧನೆಯ ಹೆಗ್ಗಳಿಕೆಯನ್ನಷ್ಟೇ ಹೇಳಿಕೊಂಡು ಬೆನ್ನು ಚಪ್ಪರಿಸಿಕೊಳ್ಳುತ್ತಿದೆ.

ಬಹುಮುಖ್ಯವಾಗಿ ಕೃಷಿಯಂತಹ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜನೆ ಬೇಕೇ ಬೇಕು. ಯೋಜನಾ ಪದ್ಧತಿಯನ್ನು ಖಾಸಗೀಕರಿಸಿ ಬಿಟ್ಟಿರುವುದರಿಂದ ಅಭಿವೃದ್ಧಿಗೆ ಯೋಜನೆಯೇ ಇಲ್ಲ.

ರೈತರ ಆತ್ಮಹತ್ಯೆಗಳ ಜೊತೆಗೆ ಆಹಾರ ಸ್ವಾವಲಂಬನೆಯಂತಹ ಬಹುಮುಖ್ಯ ಸ್ವಾವಲಂಬನೆಯನ್ನೂ ನಾವು ಕಳೆದುಕೊಳ್ಳುವ ದಾರಿಯಲ್ಲಿದ್ದೇವೆ.



ಕಬ್ಬು ಬೆಳೆ ಮತ್ತು ಸಕ್ಕರೆ ತಂತ್ರಜ್ಞಾನ - 1

ಸಕ್ಕರೆಯ ಮೂಲಗಳು

ಸಾಮಾನ್ಯವಾಗಿ ಸಕ್ಕರೆಯನ್ನು ಕಬ್ಬು, ಮತ್ತು ಷುಗರ್ ಬೀಟ್‌ಗಳಿಂದ ತಯಾರಿಸಲಾಗುತ್ತದೆ. ಭಾರತವೂ ಸೇರಿದಂತೆ ಸುಮಾರು 200 ರಾಷ್ಟ್ರಗಳಲ್ಲಿ ಕಬ್ಬಿನಿಂದ ಸಕ್ಕರೆಯನ್ನು ತಯಾರಿಸಲಾಗುತ್ತದೆ. ಅತ್ಯಧಿಕ ಪ್ರಮಾಣದ ಸಕ್ಕರೆಯನ್ನು ಕಬ್ಬಿನಿಂದಲೇ ತಯಾರಿಸುವುದು. ವಿಶ್ವದ ಕಬ್ಬು ಬೆಳೆಯಲ್ಲಿ ಬ್ರೆಜಿಲ್ ಅಗ್ರಸ್ಥಾನದಲ್ಲಿದೆ. ಷುಗರ್ ಬೀಟ್ ಎಂಬ ಗೆಡ್ಡೆರೂಪದ ಸಸ್ಯದಿಂದ ಯೂರೋಪ್ ರಾಷ್ಟ್ರಗಳಲ್ಲಿ ಅಮೇರಿಕಾ ಮತ್ತು ರಷ್ಯಾಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ವಿಶ್ವದ ಒಟ್ಟಾರೆ ಸಕ್ಕರೆಯ ಉತ್ಪಾದನೆಯಲ್ಲಿ ಶೇ. 30ರಷ್ಟು ಸಕ್ಕರೆಯನ್ನು ಷುಗರ್ ಬೀಟ್‌ನಿಂದ ತಯಾರಿಸಲಾಗುತ್ತದೆ. ಬೀಟ್ ರೂಟ್ ಕೂಡ ಷುಗರ್ ಬೀಟ್ ನ ತಳಿಗೇ ಸೇರಿದ ಸಸ್ಯ.

ಕಬ್ಬಿನ ಉಪಯುಕ್ತತೆಗಳು

ಕಬ್ಬಿನ ರಸದಿಂದ ನೀರಿನಂಶವನ್ನು ಆವಿಯಾಗಿಸಿ ಸಕ್ಕರೆಯನ್ನು ತಯಾರಿಸುವ ವಿಧಾನವನ್ನು 5,000 ವರ್ಷಗಳ ಹಿಂದೆಯೇ ಭಾರತದಲ್ಲಿ ಬಳಸಿರುವ ಕುರುಹುಗಳಿವೆ. ಕಬ್ಬಿನಿಂದ ಕಾಕಂಬಿ, ಸಕ್ಕರೆ, ಸೋಡಾ, ರಮ್, ಫಲೆರ್ನಮ್(ಪಾನೀಯ), ಕಚಾಕ(ಬ್ರೆಜಿಲ್ ದೇಶದ ರಾಷ್ಟ್ರೀಯ ಪಾನೀಯ), ಮತ್ತು ಎಥೆನಾಲ್‌ಗಳನ್ನು ತಯಾರಿಸಬಹುದು. ಎಥೆನಾಲ್‌ನ್ನು ಪೆಟ್ರೋಲ್‌ನೊಂದಿಗೆ 'ಬ್ಲೆಂಡ್' ಮಾಡಿ ಇಂಧನವಾಗಿಯೂ ಬಳಸಲಾಗುತ್ತಿದೆ. ಕಬ್ಬನ್ನು ಹಿಂಡಿ ರಸ ತೆಗೆದ ನಂತರ ಉಳಿಯುವ ಕಬ್ಬಿನ ಸಿಪ್ಪೆಯನ್ನು ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಉರುವಲಾಗಿ ಬಳಸಿ ವಿದ್ಯುತ್ ತಯಾರಿಸಲಾಗುತ್ತದೆ. ಅಲ್ಲದೆ, ಕಾಗದ ಮತ್ತು ಕಾರ್ಡ್ ಬೋರ್ಡ್‌ಗಳನ್ನು ತಯಾರಿಸ ಬಹುದಾದ್ದರಿಂದ ಕಬ್ಬಿನ ಸಿಪ್ಪೆಯು ಪರಿಸರ-ಸ್ನೇಹಿ ಉಪ ಉತ್ಪನ್ನವೆನಿಸಿದೆ.



ಕಬ್ಬಿನ ಬೆಳೆ

ಕಬ್ಬಿನ ಬೆಳೆಯು ಉಷ್ಣವಲಯ ಅಥವಾ ಉಪ ಉಷ್ಣವಲಯ ಪ್ರದೇಶದ ಬೆಳೆಯಾಗಿದ್ದು ವಾರ್ಷಿಕವಾಗಿ 24 ಇಂಚಿನಷ್ಟು (600 ಮಿ.ಮೀ) ತೇವಾಂಶದ ಅಗತ್ಯತೆಯಿದೆ. ಕಬ್ಬನ್ನು ಕೈಯಿಂದ ಅಥವಾ ಯಂತ್ರದಿಂದ ಕಟಾವು ಮಾಡಲಾಗುತ್ತದಾದರೂ, ವಿಶ್ವದಾದ್ಯಂತ ಅರ್ಧಕ್ಕಿಂತಲೂ ಹೆಚ್ಚು ಭಾಗದಲ್ಲಿ ಕೈಯಿಂದಲೇ ಕಟಾವು ಮಾಡಲಾಗುತ್ತದೆ. ಒಬ್ಬ ನುರಿತ ಕೆಲಸಗಾರ ಘಂಟೆಯೊಂದಕ್ಕೆ 500ಕೆಜಿ ಕಬ್ಬನ್ನು ಕಟಾವು ಮಾಡಿದರೆ, ಯಂತ್ರವೊಂದು ಘಂಟೆಗೆ 100 ಟನ್ ಕಬ್ಬನ್ನು ಕಟಾವು ಮಾಡಬಲ್ಲದು. ಹೀಗೆ ಕಟಾವು ಮಾಡಿದ ಕಬ್ಬನ್ನು ತಕ್ಷಣವೇ ಕಬ್ಬನ್ನು ಅರೆಯುವ ಕಾರ್ಖಾನೆಗೆ ಸಾಗಿಸದಿದ್ದಲ್ಲಿ, ಕಬ್ಬಿನಲ್ಲಿರುವ ಸಕ್ಕರೆ ಅಂಶವು ಕಡಿಮೆಯಾಗುತ್ತದೆ, ಅಲ್ಲದೆ ಕಟಾವಿನ ಸಂದರ್ಭದಲ್ಲಿ ಕಬ್ಬಿಗೆ ಬಿದ್ದ ಏಟಿನಿಂದ ಇದು ತೀವ್ರವಾಗಿ ಕಡಿಮೆಯಾಗುತ್ತಾ ಹೋಗುತ್ತದೆ.



ಸಕ್ಕರೆ ಸಂಸ್ಕರಣೆ

ಕಬ್ಬಿನಿಂದ ಸಕ್ಕರೆಯನ್ನು ತೆಗೆಯಲು ಎರಡು ಹಂತಗಳಲ್ಲಿ ಸಂಸ್ಕರಣೆ ಮಾಡಲಾಗುತ್ತದೆ. ಮೊದಲಿಗೆ ಕಬ್ಬಿನಿಂದ ರಸವನ್ನು ಹಿಂಡಿ, ಅದರಿಂದ ಕಚ್ಚಾ ಸಕ್ಕರೆಯನ್ನು ಉತ್ಪಾದಿಸುತ್ತಾರೆ. ನಂತರ ಅದನ್ನು ಮತ್ತಷ್ಟು ಶುದ್ಧೀಕರಿಸಿ ಹರಳಿನ ರೂಪದ ಸಕ್ಕರೆಯನ್ನು ಪಡೆಯಲಾಗುತ್ತದೆ.

ಕಬ್ಬಿನ ರಸದಲ್ಲಿರುವ ಸಕ್ಕರೆ ಅಂಶಕ್ಕೆ ಸುಕ್ರೋಸ್ ಎಂಬ ರಾಸಾಯನಿಕವೇ ಕಾರಣ. ಕಬ್ಬಿನಿಂದ ರಸ ತೆಗೆದು, ಅದಕ್ಕೆ ಸುಣ್ಣವನ್ನು ಮಿಶ್ರಣ ಮಾಡಲಾಗುತ್ತದೆ. ಕಬ್ಬಿನ ರಸದಲ್ಲಿರುವ ಸುಕ್ರೋಸ್ ಎಂಬ ಸಕ್ಕರೆ ಅಂಶವು ಗ್ಲೂಕೋಸ್ ಮತ್ತು ಫ್ರಕ್ಟೋಸ್ ಎಂಬ ವಸ್ತುಗಳಾಗಿ ಪರಿವರ್ತನೆಯಾಗದಂತೆ ಸುಣ್ಣವು ತಡೆಯುತ್ತದೆ. ಈ ಮಿಶ್ರಣವನ್ನು ಒಂದೆಡೆ ಸಂಗ್ರಹಿಸಿಟ್ಟಾಗ ಕಬ್ಬಿನ ರಸದಲ್ಲಿರುವ ಕಲ್ಮಶಗಳು ಮತ್ತು ಸುಣ್ಣವು ತಳಮಟ್ಟದಲ್ಲಿ ತಂಗುತ್ತವೆ. ಮೇಲು-ನಿಂತ ರಸವನ್ನು 'ಮಲ್ಟಿಪಲ್-ಎಫೆಕ್ಟ್ ಎವಾಪರೇಟರ್' (ನೀರಿನಂಶವನ್ನು ಆವಿಯಾಗಿಸುವ ಉಪಕರಣ) ಗೆ ಕಳುಹಿಸಲಾಗುತ್ತದೆ. ಇದು ಸುಕ್ರೋಸ್-ಭರಿತ ಗಟ್ಟಿ ರಸ (ಸಿರಪ್) ವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ನಂತರ ಸಕ್ಕರೆ ಹರಳನ್ನು ಇದಕ್ಕೆ ಸೇರಿಸಲಾಗುತ್ತದೆ. ಈ ಸಿರಪ್‌ನ್ನು ತಂಪುಗೊಳಿಸಿದಾಗ ಅದು ಹರಳಿನ ರೂಪ ತಾಳುತ್ತದೆ. ಹರಳಿನ ರೂಪ ತಾಳದೆ ಹಾಗೆಯೇ ಉಳಿಯುವ (ಕಾಕಂಬಿ) ಸಿರಪ್‌ನಿಂದ ಇನ್ನಷ್ಟು ಸಕ್ಕರೆ ತೆಗೆಯಲು 'ಸೆಂಟ್ರಿಫ್ಯೂಜ್' ಎಂಬ ಉಪಕರಣವನ್ನು ಬಳಸುತ್ತಾರೆ. ಸೆಂಟ್ರಿಫ್ಯೂಜ್ ಉಪಕರಣವು ದ್ರವದಿಂದ ಅಥವಾ ಅನಿಲದಿಂದ ಘನವನ್ನು ಬೇರ್ಪಡಿಸುವ ಸಾಧನ. ಅಂತಿಮವಾಗಿ ಹಾಗೆಯೇ ಉಳಿಯುವ ಕಾಕಂಬಿಯನ್ನು ಮತ್ತೊಂದು ಉತ್ಪನ್ನವಾದ ಎಥೆನಾಲ್‌ನ್ನು ತಯಾರಿಸಲು ಬಳಸಲಾಗುತ್ತದೆ.

ಕಚ್ಚಾ ಸಕ್ಕರೆಯು ಹಳದಿ ಅಥವಾ ಕಂದು ಬಣ್ಣವನ್ನು ಹೊಂದಿರುತ್ತದೆ. ಬಿಳಿ ಬಣ್ಣದ ಸಕ್ಕರೆಯನ್ನು ತಯಾರಿಸಬೇಕಾದರೆ, ಕಬ್ಬಿನ ರಸವನ್ನು 'ಮಲ್ಟಿಪಲ್-ಎಫೆಕ್ಟ್ ಎವಾಪರೇಟರ್' ಗೆ ಕಳುಹಿಸುವ ಹಂತಕ್ಕೆ ಮೊದಲೇ 'ಸಲ್ಫರ್ ಡೈ ಆಕ್ಸೈಡ್' ಎಂಬ ವಸ್ತುವನ್ನು ಸೇರಿಸುತ್ತಾರೆ. ಈ ವಸ್ತುವು ಬಣ್ಣ ಕೊಡುವ ಕಲ್ಮಶಗಳನ್ನು ಬಣ್ಣರಹಿತವಾಗಿ ಪರಿವರ್ತಿಸುತ್ತದೆ. ಹೀಗೆ ಸಲ್ಫರ್ ಮಿಶ್ರಿತ ಸಕ್ಕರೆಯನ್ನು 'ಹಾಲಿನ ಬಣ್ಣ'ದ ಅಥವಾ 'ಹರಳಿನ ಸಕ್ಕರೆ' ಎಂದು ಕರೆಯುತ್ತಾರೆ.



ಜಗದಗಲ

ಶರತ್‌ಚಂದ್ರ

ವೆನೆಜುವೆಲಾದಲ್ಲೇನಿದು ತಳಮಳ

ಸಂವೈಧಾನಿಕ ತಿದ್ದುಪಡಿಗೆ ಜನಮತ ಸಂಗ್ರಹ - ಹಿನ್ನಡೆ, ಸೋಲಲ್ಲ

ವೆನೆಜುವೆಲಾದಲ್ಲಿ ತರಲು ಉದ್ದೇಶಿಸಿದ್ದ ಜನಪರವಾದ ಸಂವಿಧಾನದ ಬದಲಾವಣೆಗಳ ಬಗೆಗೆ ಇಡೀ ಜಗತ್ತಿನಲ್ಲಿ ಅಪಪ್ರಚಾರ ನಡೆಸಲಾಯಿತು. ದೇಶದ ಕೆಲವು ಜನವಿಭಾಗಗಳ ನಡುವೆ ಗೊಂದಲ ಮೂಡಿಸಲಾಯಿತು. ಕೂದಲೆಳೆಯ ಅಂತರದಲ್ಲಿ ಸಂವಿಧಾನ ತಿದ್ದುಪಡಿ ಯತ್ನಕ್ಕೆ ಸೋಲಾಗಿದೆ. ಆದರೆ ಇದೇ ಏನು ಕೊನೆಯಲ್ಲ.

ವೆನೆಜುವೆಲಾ ಕಳೆದ ಕೆಲವು ವಾರಗಳಿಂದ ಇನ್ನೊಂದು ಭಾರೀ ಬದಲಾವಣೆಗಳ ಹೊಸ್ತಿಲಲ್ಲಿ ನಿಂತಿತ್ತು. ಸಂವಿಧಾನಕ್ಕೆ ಹಲವಾರು ಜನಪರ ತಿದ್ದುಪಡಿ ತರುವ ಪ್ರಸ್ತಾವಗಳ ಮೇಲೆ ಜನಮತ ಸಂಗ್ರಹ ನಡೆಯಿತು. ಇದು ಜಗತ್ತಿನಾದ್ಯಂತ ಕುತೂಹಲ ಕೆರಳಿಸಿತ್ತು. ಅಮೆರಿಕ ಸರ್ಕಾರ, ಅದರ ಬಾಲಬಡುಕ ಮಾಧ್ಯಮಗಳು ತಿದ್ದುಪಡಿಗಳ ವಿರುದ್ಧ ಭಾರೀ (ಅಪ)ಪ್ರಚಾರ ಮಾಡಿದ್ದವು. ಒಂದು ದೇಶದ ಸಂವೈಧಾನಿಕ ತಿದ್ದುಪಡಿಗಳ ಬಗ್ಗೆ ಅಂತರ್‍ರಾಷ್ಟ್ರೀಯವಾಗಿ ಆಸಕ್ತಿ, ಕುತೂಹಲ, ಚರ್ಚೆ ಈ ಪ್ರಮಾಣದಲ್ಲಿ ಕಂಡು ಬಂದಿದ್ದು ಬಹುಶಃ ಇದೇ ಮೊದಲು. ವೆನೆಜುವೆಲಾದ ಬಲಪಂಥೀಯ ಶಕ್ತಿಗಳು ಸಹ ತಿದ್ದುಪಡಿಗಳ ವಿರುದ್ಧ ಭಾರೀ ಗದ್ದಲ ನಡೆಸಿದ್ದವು. ಬಹಳ ಕಡಿಮೆ ಅಂತರದಲ್ಲಿ ಜನಪರ ತಿದ್ದುಪಡಿಗಳಿಗೆ ಸೋಲಾಯಿತು. ತಿದ್ದುಪಡಿಗಳ ಪರ ಶೇ.49.7 ಮತ ಬಂದಿದ್ದು, ವಿರುದ್ಧ ಶೇ 50.3 ಮತ ಬಂದಿತ್ತು. ಈ ಫಲಿತಾಂಶಕ್ಕೆ ಪ್ರತಿಕ್ರಿಯೆ ಸಹ ಅಷ್ಟೇ ವಿಭಜಿತವಾಗಿತ್ತು. ಬಡಜನರು, ಕಾರ್ಮಿಕರು ಫಲಿತಾಂಶ ಕೇಳಿ ಗಳ ಗಳ ಅತ್ತರು. ಮಧ್ಯಮ ವರ್ಗದ ಜನ, ಶ್ರೀಮಂತರು ಸಂಭ್ರಮ ಪಟ್ಟರು. ಬಹುಶಃ ಇಂತಹ ಭಾರೀ ಅಪಪ್ರಚಾರ ಇಲ್ಲದಿದ್ದರೆ ತಿದ್ದುಪಡಿಗಳ ಪರ ಬಹುಮತ ಬರುತ್ತಿತ್ತು.

'ಜೀವಾವಧಿ ಅಧ್ಯಕ್ಷ'(?!) ಎಂಬ ಸುಳ್ಳು

ತಿದ್ದುಪಡಿ ಪ್ರಸ್ತಾವಗಳು ಏನು ಎಂಬುದಕ್ಕಿಂತ, ಆ ಬಗ್ಗೆ ಸಾಮ್ರಾಜ್ಯಶಾಹಿ ಮಾಧ್ಯಮಗಳು ಮತ್ತು ಅದರ ಬಾಲಬಡುಕರು ಮಾಡಿದ ಅಪಪ್ರಚಾರಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ಚವೇಝ್ 'ಜೀವಾವಧಿ ಅಧ್ಯಕ್ಷ'ರಾಗಬೇಕೆ ಇಲ್ಲವೆ ಎಂಬ ಬಗ್ಗೆ ಜನಮತ ಸಂಗ್ರಹ ಎಂಬುದು ಇವರು ಹರಡಿದ ಒಂದು ಪ್ರಮುಖ ಹಸಿ ಸುಳ್ಳು. ಈಗ ಒಬ್ಬ ಅಭ್ಯರ್ಥಿ ಎರಡು ಬಾರಿಗಿಂತ ಹೆಚ್ಚು ಅಧ್ಯಕ್ಷನಾಗಿ ಚುನಾಯಿತವಾಗುವಂತಿಲ್ಲ. ಅಂದರೆ ಎರಡು ಬಾರಿ ಅಧ್ಯಕ್ಷನಾಗಿದ್ದವನು, ಮೂರನೇ ಬಾರಿ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಈ ನಿರ್ಬಂಧ ತೆಗೆಯುವುದಕ್ಕೆ ಮಾತ್ರ ಸೀಮಿತವಾಗಿತ್ತು ತಿದ್ದುಪಡಿ ಪ್ರಸ್ತಾವ. ಅಧ್ಯಕ್ಷ ಚುನಾವಣೆ ರದ್ದು ಮಾಡುವುದಾಗಲೀ, ಈಗಿನ ಅಧ್ಯಕ್ಷರ ಅಧಿಕಾರವನ್ನು ಜೀವಾವಧಿಗೆ ವಿಸ್ತರಿಸುವುದಾಗಲೀ ಪ್ರಸ್ತಾವವಾಗಿರಲಿಲ್ಲ. ಆದರೆ ಹಾಗೆ ಎಂದು ಪ್ರಚಾರ ಮಾಡಲಾಯಿತು. ಈ ಸುಳ್ಳಿನ ಆಧಾರದ ಮೇಲೆ, ಈ ಜನಮತ ಸಂಗ್ರಹದಲ್ಲಿ ಚವೇಝ್ ಜೀವಾವಧಿ ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವದ ಮಧ್ಯೆ ಆಯ್ಕೆ ಪ್ರಮುಖ ವಿಷಯ ಎಂದು ಹೇಳಲಾಯಿತು. ಹೆಚ್ಚಿನ ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲಿ ಅತ್ಯಂತ ಉನ್ನತ ಹುದ್ದೆ (ಪ್ರಧಾನಿ, ಅಧ್ಯಕ್ಷ) ಅಥವಾ ಯಾವುದೇ ಸ್ಥಾನದ ಚುನಾವಣೆಯಲ್ಲಿ ಈ ರೀತಿಯ ನಿರ್ಬಂಧವಿಲ್ಲ (ಉದಾ: ಬ್ರಿಟನ್, ಫ್ರಾನ್ಸ್, ಇಂಡಿಯಾ). ಅಮೆರಿಕದಲ್ಲೂ ಕೆಲವು ದಶಕಗಳ ಹಿಂದೆಯಷ್ಟೇ ಒಂದು ತಿದ್ದುಪಡಿ ಮೂಲಕ ಇಂತಹ ನಿರ್ಬಂಧ ಹಾಕಲಾಗಿತ್ತು. ರೂಸ್‌ವೆಲ್ಟ್ ನಾಲ್ಕು ಬಾರಿ ಅಮೆರಿಕದ ಅಧ್ಯಕ್ಷರಾಗಿದ್ದರು. ಅಂದರೆ ಅಮೆರಿಕ ಆಗ ಸರ್ವಾಧಿಕಾರಿ ವ್ಯವಸ್ಥೆ ಹೊಂದಿತ್ತು ಎಂತಲೇ ಅಥವಾ ರೂಸ್‌ವೆಲ್ಟ್ ಸರ್ವಾಧಿಕಾರಿ



ಆಗಿದ್ದರೆಂತಲೇ ? ಈ ಅಪಪ್ರಚಾರದಿಂದ ಹಲವು ಎಡಪಂಥೀಯ ವಿಭಾಗಗಳ ಬೆಂಬಲವನ್ನು ಚವೇಝ್ ಕಳೆದುಕೊಂಡರು.

ಈ ತಿದ್ದುಪಡಿ ಮಾತ್ರವಲ್ಲ, ಈ ಇಡೀ ಪ್ರಯತ್ನ ಪ್ರಜಾಪ್ರಭುತ್ವ ವ್ಯವಸ್ಥೆ ಒಡೆದು ಸರ್ವಾಧಿಕಾರ ಸ್ಥಾಪಿಸುವ ಹುನ್ನಾರ ಎನ್ನಲಾಯಿತು. ಇತರ ಹಲವು ತಿದ್ದುಪಡಿಗಳು, ಪ್ರಜಾಪ್ರಭುತ್ವವನ್ನು ವಿಸ್ತರಿಸುವ, ಬಲಪಡಿಸುವ ಉದ್ದೇಶ ಹೊಂದಿದ್ದವು. ಈ ಎಲ್ಲಾ ತಿದ್ದುಪಡಿಗಳನ್ನು ಈಗಿನ ಸಂವಿಧಾನದ ಪ್ರಕಾರ ಚುನಾಯಿತ ಪಾರ್ಲಿಮೆಂಟು ಆರು ತಿಂಗಳ ಕಾಲ ಚರ್ಚೆ ನಡೆಸಿ ಬಹುಮತದಿಂದ ಮಂಜೂರು ಮಾಡಿತ್ತು. ಎಂಬುದನ್ನು ಪೂರ್ತಿಯಾಗಿ ಮರೆಮಾಚಲಾಯಿತು.

ಮಿಲಿಟರಿ ಮಧ್ಯಪ್ರವೇಶಕ್ಕೆ ಕರೆ

ಬದಲಾಗಿ ಈ ತಿದ್ದುಪಡಿಗಳ ವಿರುದ್ಧ ಮಾತ್ರವಲ್ಲ, ಜನಮತಸಂಗ್ರಹದ ವಿರುದ್ಧವೇ ಉಚ್ಚ ಮಧ್ಯಮ ವರ್ಗದ ವಿದ್ಯಾರ್ಥಿಗಳು ನಡೆಸಿದ ಹಿಂಸಾತ್ಮಕ ಚಳುವಳಿಯನ್ನು ಪ್ರಜಾಪ್ರಭುತ್ವದ 'ರಕ್ಷಣೆ'ಗೆ ಚಳುವಳಿ ಎಂದೆಲ್ಲಾ ಬಿಂಬಿಸಲಾಯಿತು. ಜನಮತ ಸಂಗ್ರಹ ಸಂವಿಧಾನ ಬುಡಮೇಲು ಮಾಡುವ ಪ್ರಯತ್ನ. ಇದಕ್ಕೆ ಪ್ರತಿರೋಧ ಒಡ್ಡಲು ಸೈನ್ಯದ ಅಧಿಕಾರಿಗಳು ಮತ್ತು ಸಿಬ್ಬಂದಿ ತಯಾರಾಗಬೇಕು. ಎಂದು ಮಾಜಿ ರಕ್ಷಣಾ ಮಂತ್ರಿ ಮತ್ತು ಜನರಲ್ ಒಬ್ಬ ಕರೆ ಕೊಟ್ಟಿದ್ದಕ್ಕೆ ಭಾರೀ ಪ್ರಚಾರ ಕೊಡಲಾಯಿತು. ಆತನ ಕರೆ ಚುನಾಯಿತ ಅಧ್ಯಕ್ಷ ಮತ್ತು ಸರ್ಕಾರದ ವಿರುದ್ಧ ಹೆಚ್ಚು ಕಡಿಮೆ 'ಮಿಲಿಟರಿ ಕ್ಷಿಪ್ರ ಕ್ರಾಂತಿ'ಗೆ ಆಹ್ವಾನ. ಅದು ಸಂವಿಧಾನ ಮತ್ತು ಕಾನೂನು ಬಾಹಿರ. ಈಗಿನ ಸಂವಿಧಾನ ಬುಡಮೇಲು ಮಾಡುವ ಪ್ರಯತ್ನ. ಬೇರೆ ಯಾವುದೇ ದೇಶದಲ್ಲಿ ಆತನನ್ನು ಬಂಧಿಸಲಾಗುತ್ತಿತ್ತು. ಎಂದು ಮರೆತು ಬಿಟ್ಟು ಆತನನ್ನು ಪ್ರಜಾಪ್ರಭುತ್ವದ 'ಹೀರೋ' ಎಂದು ಪ್ರಚಾರ ಮಾಡಲಾಯಿತು. ಈ ಪ್ರಚಾರಕ್ಕೆ ತದ್ವಿರುದ್ಧವಾಗಿ, ಸಂವೈಧಾನಿಕ ತಿದ್ದುಪಡಿ ಬಗ್ಗೆ ಜನಮತ ಸಂಗ್ರಹ ಮತ್ತು ಆ ಬಗ್ಗೆ ಬಿರುಸಿನ ಚರ್ಚೆ ವೆನೆಜುವೆಲಾದ ಪ್ರಜಾಪ್ರಭುತ್ವದ ಜೀವಂತಿಕೆ ಮತ್ತು ಪ್ರಾಬಲ್ಯದ ಪ್ರತೀಕ.

ಏನು ಬದಲಾವಣೆ?

ಬೆಳವಣಿಗೆ ಸಂಪನ್ಮೂಲಗಳನ್ನು ಅಧಿಕಾರಶಾಹಿ ಕಪಿಮುಷ್ಟಿಯಲ್ಲಿರುವ ಮುನಿಸಿಪಲ್ ಸಂಸ್ಥೆಗಳಿಂದ ಬದಲಾಯಿಸಿ ಚುನಾಯಿತ ಸಮುದಾಯ ಮಂಡಳಿಗೆ ಕೊಡುವುದು, ದಿನದ ಕೆಲಸದ ಅವಧಿಯನ್ನು 8 ರಿಂದ 6 ಗಂಟೆಗೆ ಇಳಿಸುವುದು, ಮತದಾನದ ಅರ್ಹತೆಯ ಪ್ರಾಯ 18 ರಿಂದ 16ಕ್ಕೆ ಇಳಿಸುವುದು - ಪ್ರಜಾಪ್ರಭುತ್ವವನ್ನು ವಿಸ್ತರಿಸುವ ಪ್ರಸ್ತಾವಗಳು. ಸಂವಿಧಾನದ ಬುಡಮೇಲು ಮಾಡುವ ಹಿಂಸಾತ್ಮಕ ಪ್ರಯತ್ನದ ಸನ್ನಿವೇಶದಲ್ಲಿ ಅಧ್ಯಕ್ಷರಿಗೆ 'ತುರ್ತು ಪರಿಸ್ಥಿತಿ' ಘೋಷಿಸುವ ಅಧಿಕಾರ ಸಹ ಹೆಚ್ಚಿನ ಪ್ರಜಾಪ್ರಭುತ್ವದ ಸಂವಿಧಾನಗಳಲ್ಲಿ ಸರ್ವೆ ಸಾಮಾನ್ಯ ಭಾಗ. ವೆನೆಜುವೆಲಾದಲ್ಲಿ ಹಲವು 'ಮಿಲಿಟರಿ ಕ್ಷಿಪ್ರ ಕ್ರಾಂತಿ'ಯ ಹಿನ್ನಲೆಯಲ್ಲಿ ಅಸಹಜ ಕ್ರಮವೇನಲ್ಲ.

ಸಂವಿಧಾನದ ತಿದ್ದುಪಡಿಗಳು ವೆನೆಜುವೆಲಾದ ಆಳುವ ವರ್ಗಗಳು ಮತ್ತು ಅವರ ಸಾಮ್ರಾಜ್ಯಶಾಹಿ ಬೆಂಬಲಿಗರಿಗೆ ಇಷ್ಟು ಹೆದರಿಕೆ ಹುಟ್ಟಿಸಿದ್ದು ಯಾಕೆ ? ಸಾಲು ಸಾಲಾಗಿ ಎಲ್ಲಾ ಚುನಾವಣೆಗಳು, ಜನಮತ ಸಂಗ್ರಹಗಳನ್ನು ಗೆದ್ದು ಜನಪ್ರಿಯ ಆಡಳಿತ ಕೊಡುತ್ತಿರುವ ಚವೇಝ್ ಸೋಲಿಸಲು ಯಾವುದೆ ಅವಕಾಶ ಬಿಡಲು ಅವರು ತಯಾರಿಲ್ಲ. ಬಡವರು, ಕಾರ್ಮಿಕರಿಗೆ ಇನ್ನಷ್ಟು ಇನ್ನಷ್ಟು ಅಧಿಕಾರ ನೀಡುವ ಪ್ರಜಾಪ್ರಭುತ್ವ ವ್ಯವಸ್ಥೆ ಅವರಿಗೆ ಭಯ ಹುಟ್ಟಿಸುತ್ತದೆ. ತಮ್ಮ ವರ್ಗದತ್ತ ಸವಲತ್ತು, ಅಧಿಪತ್ಯ ತಪ್ಪಿ ಹೋದೀತು ಎಂಬ ಭಯ. ಭಾರೀ ಪ್ರಚಾರದಿಂದ ಮಧ್ಯಮ ವರ್ಗದವರಿಗೂ ಈ ಭಯ ಕಾಡುವಂತೆ ಮಾಡಲಾಯಿತು. ಜನಮತದ ಫಲಿತಾಂಶ ತೀವ್ರ ಪ್ರಜಾಪ್ರಭುತ್ವೀಕರಣದ ಕಡೆಗಿನ ವೆನೆಜುವೇಲಾದ ಜನತೆಯ ದಾಪುಗಾಲಿನ ಪಯಣದ ಕೊನೆಯಲ್ಲ. ಸೋಲಲ್ಲ. ತಾತ್ಕಾಲಿಕ ಹಿನ್ನಡೆ ಅಷ್ಟೆ.

ಮುಸ್ಲಿಮರ ಮುಂದಿರುವ ಹಾದಿ...

ಪುಟ 8 ರಿಂದ

ಅವರು ಸ್ಪರ್ಧಿಸುವ ಸಾಮರ್ಥ್ಯ ತುಂಬಬೇಕಿದೆ. ಅರೇಬಿಕ್ ಭಾಷೆಯ ಜೊತೆಗೆ ಕನ್ನಡ, ಇಂಗ್ಲೀಷ್ ಭಾಷೆಗಳನ್ನು ಹಾಗೂ ವಿಜ್ಞಾನ, ವಾಣಿಜ್ಯ, ಲಲಿತ ಕಲೆ ಇಚ್ಛಿಕಗಳನ್ನು ಕಲಿಸಬೇಕಿದೆ. ಕೇರಳ, ರಾಜ್ಯದ ಮದ್ರಸಾಗಳಲ್ಲಿ ಅರೇಬಿಕ್ ಮತ್ತು ಇತರೆ ಐಚ್ಛಿಕ ವಿಷಯಗಳ ಜೊತೆಯಲ್ಲಿ ಮಲೆಯಾಳ ಭಾಷೆ ಕಲಿಯುತ್ತಾರೆ. ದಿವಂಗತ ಡಾ:ಜಾಕೀರ್ ಹುಸೇನ್‌ರವರು ಸಂಸ್ಥಾಪಿಸಿದ ದೆಹಲಿಯ ಜಾಲಿಯಾ ಮಿಲಿಯಾ ಇಸ್ಲಾಮಿಯಾ ಆಧುನಿಕ ಶಿಕ್ಷಣವನ್ನು ಮುಸ್ಲಿಮರಲ್ಲಿ ಪ್ರಚುರಪಡಿಸುವಲ್ಲಿ ಮಹತ್ವದ ವಿಶ್ವವಿದ್ಯಾಲಯವಾಗಿದೆ. ಭಾರತದ ಮುಸ್ಲಿಮರಿಗೆ ಇವು ಆದರ್ಶಪ್ರಾಯ.



ಮೂಲಭೂತವಾದಿಗಳ ವಿದ್ಯಾ ಕೇಂದ್ರವೆಂದು ಹೆಸರು ಪಡೆದಿರುವ ದೇವಬಂದ್ ಅರೇಬಿಕ್ ವಿದ್ಯಾಲಯದ ಪ್ರಾರಂಭದಲ್ಲಿ ಅರೇಬಿಕ್, ಉರ್ದು ಜೊತೆ ಸಂಸ್ಕೃತವನ್ನು ಕಡ್ಡಾಯಗೊಳಿಸಿದ್ದರು. ಇಲ್ಲವಾದಲ್ಲಿ ಭಾರತದ ವಿಶಾಲ ಜನ ಸಮುದಾಯದೊಡನೆ ಸಂಬಂಧ, ಸಮಾಲೋಚನೆ, ಸಂವಹನೆ ಮುಸ್ಲಿಮರಿಗೆ ಅಸಾಧ್ಯವೆಂದು ಭಾವಿಸಿದ್ದರು. ಜಗತ್ತಿನ ಎಲ್ಲಾ ಭಾಷೆಗಳು ದೇವಭಾಷೆಗಳೇ ಎಂದು ಪರಿಗಣಿಸಿದ್ದರು.

ಆದ್ದರಿಂದ, ಬರೀ ಧಾರ್ಮಿಕವಾಗಿ ಅಲ್ಪಸಂಖ್ಯಾತ ಮುಸ್ಲಿಮರಾಗದೆ, ಭಾರತದ ಜನ ಜೀವನದಲ್ಲಿ ಉತ್ತಮ ನಾಗರೀಕರಾಗಿ ಎಲ್ಲಾ ರಂಗಗಳಲ್ಲೂ ಮುಸ್ಲಿಮರು ಮಹತ್ವದ ಪಾತ್ರ ವಹಿಸುವಂತಾಗಬೇಕು. ಅದಕ್ಕಾಗಿ ಆಧುನಿಕ ಶಿಕ್ಷಣ ಸಾಮಾನ್ಯ ಮನುಷ್ಯನಿಗೂ ಲಭ್ಯವಾಗಬೇಕು. ಈ ದಿಸೆಯಲ್ಲಿ ಬಹುಸಂಖ್ಯಾತರ ಸಹಾಯ, ಸಹಯೋಗ ಅತ್ಯಗತ್ಯ. ಈ ಬಗ್ಗೆ ಗಂಭೀರ ಚಿಂತನೆ ಚಳುವಳಿಯ ರೂಪ ಪಡೆಯಬೇಕಿದೆ. ರಾಜಕೀಯ ಪಕ್ಷಗಳು ಅದರಲ್ಲೂ ಎಡಪಕ್ಷಗಳಿಗೆ ಇದೊಂದು ವೇದಿಕೆ ಆಗಬಲ್ಲದು.

ವಾರದ ಸಂದರ್ಶನ

ಜಿ.ಟಿ.ನಾರಾಯಣರಾಯರು ನಾಡಿನ ಪ್ರಸಿದ್ಧ ವಿಜ್ಞಾನ ಲೇಖಕರು. ಆಳುವ ರಾಜಕಾರಣಿಗಳು ಜೋತಿಷ್ಯಕ್ಕೆ ಶರಣಾಗುತ್ತಾ ಸಾರ್ವಜನಿಕರ ನಡುವೆ ಮೂಢನಂಬಿಕೆಗಳನ್ನು ಹರಡುತ್ತಾ ಅವರನ್ನು ವಂಚಿಸುತ್ತಾ ನಡೆದಿರುವ ಸಂದರ್ಭ ಜಿ.ಟಿ.ಎನ್. ಅವರ ಒಂದು ಕಿರು ಸಂದರ್ಶನ ಇಲ್ಲಿದೆ.

ಸಂದರ್ಶಕರು : ಎಸ್.ವೈ.ಗುರುಶಾಂತ್

'ಜ್ಯೋತಿಷ್ಯ ಶಾಸ್ತ್ರ - ಒಂದು ಮಾದಕ ಮೋಹಕ ಮಿಥ್ಯಾಪೇಯ'

- ರಾಜ್ಯ ಪ್ರಶಸ್ತಿ ವಿಜೇತ ಲೇಖಕ, ಸಾಹಿತಿ ಜಿ.ಟಿ.ನಾರಾಯಣರಾಯರು

ಸಮಾಜದಲ್ಲಿನ ಮೌಢ್ಯಗಳ ವಿಜೃಂಭಣೆ ಅಸಹ್ಯ ಹುಟ್ಟಿಸುವಷ್ಟು ಅತಿರೇಕಕ್ಕೆ ಹೋಗುತ್ತಿರುವುದನ್ನು ನಾವೆಲ್ಲ ಗಮನಿಸಿದ್ದೇವೆ. ಸರ್ಕಾರಗಳ ಸ್ಥಾಪನೆಯಲ್ಲಿ, ಮುಖ್ಯಮಂತ್ರಿಗಳ ಪ್ರತಿಷ್ಠಾಪನೆಯಲ್ಲಿ ಜನತೆಯ ಆಸಕ್ತಿಗಳಿಗಿಂತ ಬುರುಡೆ ಭವಿಷ್ಯದ ಸಂಸ್ಥೀಕರಣಗೊಳ್ಳುತ್ತಿರುವುದು ಆತಂಕಕಾರಿಯಾಗಿದೆ. ಹಣೆಗೆ ಕುಂಕುಮ, ಬಲಗೈ ಮಣಿಕಟ್ಟಿಗೆ ಬಣ್ಣ ಬಣ್ಣದ ದಾರಗಳ ಸುತ್ತು ಇಂದಿನ ರಾಜಕಾರಣಿಗಳ ಲಾಂಛನಗಳಾಗಿವೆ. ನಾಮಪತ್ರ ಸಲ್ಲಿಕೆಯಿಂದ ಹಿಡಿದು ಅಧಿಕಾರ ಸ್ವೀಕಾರದ ಗಳಿಗೆಯವರೆಗೂ ಕಾಲ, ನಕ್ಷತ್ರ ನೋಡುವ ರಾಜಕಾರಣಿಗಳು ಸಚಿವರಾದರಂತೂ ತಮ್ಮ ವಾಸದ ಬಂಗಲೆಯ ವಾಸ್ತುವನ್ನು ಬದಲಾಯಿಸುತ್ತಾ, ತಮ್ಮ ಕಛೇರಿಯಲ್ಲಿ ಪೂಜೆ, ಹೋಮ ಹವನ ನಡೆಸುತ್ತಾರೆ. ಬಿಜೆಪಿ ನೇತೃತ್ವದ ಸರ್ಕಾರವಿದ್ದಾಗ ಮಾನವ ಸಂಪನ್ಮೂಲ ಮಂತ್ರಿಯಾಗಿದ್ದ ಕುಂಕುಮಧಾರಿ ಡಾ. ಮುರುಳಿ ಮನೋಹರ ಜೋಶಿ (ಈತ ಭೌತಶಾಸ್ತ್ರದ ಪ್ರೊಫೆಸರ್ ಆಗಿದ್ದಾತ) ವಿಶ್ವವಿದ್ಯಾಲಯಗಳಲ್ಲಿ ಜ್ಯೋತಿಷ್ಯಶಾಸ್ತ್ರದ ಬೋಧನೆಗೆ ಮುಂದಾಗಿದ್ದರು. ಹೆಸರಿನ ಅಕ್ಷರಗಳ ಬದಲಾವಣೆ ಮಾತ್ರದಿಂದ ಮುಖ್ಯಮಂತ್ರಿ ಪದವಿ ಪ್ರಾಪ್ತವಾಗುತ್ತೆಂದು ನಂಬಿದ್ದ ಯಡಿಯೂರಪ್ಪ (ಯಡ್ಯೂರಪ್ಪ), ದಿನ ಬೆಳಗಾದರೆ ದೇವರುಗಳನ್ನು ಹುಡುಕಿಕೊಂಡು ದೇಶ ಸುತ್ತುವ ದೇವೇಗೌಡರು, ಪವಾಡಗಳ ನಿರೀಕ್ಷೆಯಲ್ಲಿ ಅಧಿಕಾರದ ಕನಸು ಕಾಣುವ ಶಾಸಕರು ಇಂದು ಪ್ರಜಾಪ್ರಭುತ್ವದ ಒಟ್ಟು ಪ್ರಕ್ರಿಯೆಯನ್ನು ತಮಾಷೆಗೆ ಒಳಪಡಿಸಿದ್ದಾರೆ. ಫಲ ಜ್ಯೋತಿಷ್ಯಕ್ಕೂ ನಮ್ಮ ದೇಶದ ಬೂರ್ಜ್ವಾ ರಾಜಕೀಯ ಪಕ್ಷಗಳಿಗೂ ಒಂದು ಅವಿನಾಭಾವ ಸಂಬಂಧವಿದೆ.

ಒಂದು ವೈಜ್ಞಾನಿಕ ಮನೋಸ್ಥಿತಿಯನ್ನು, ಚಿಕಿತ್ಸಕ ದೃಷ್ಟಿಕೋನವನ್ನು ಪ್ರಭುತ್ವವು ಒಂದು ವಾಹಕವಾಗಿ ಜನರ ಮಧ್ಯೆ ಕೊಂಡೊಯ್ಯಬೇಕಿತ್ತು. ಆದರೆ ಅದಾಗುತ್ತಿಲ್ಲ. ಬದಲಿಗೆ ಮೌಢ್ಯತೆ, ಅವೈಜ್ಞಾನಿಕ ಫಲ ಜ್ಯೋತಿಷ್ಯಗಳೇ ರಾಜಕೀಯ ನಡೆಯನ್ನು ನಿರ್ಧರಿಸುತ್ತಿರುವುದೇ ವಿಪರ್ಯಾಸ.

ಈ ಪ್ರಶ್ನೆಗಳನ್ನು ಇಟ್ಟುಕೊಂಡೇ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದೇ ವೃತ್ತಿಯಾಗಿರಿಸಿಕೊಂಡು, ಮೌಢ್ಯಗಳ ವಿರುದ್ಧ ನಿರಂತರ ಸಂಘರ್ಷಕ್ಕಿಳಿದ ಹಿರಿಯ ವಿಜ್ಞಾನ ಲೇಖಕರು, ಸಾಹಿತಿಗಳೂ ಆದ ರಾಜ್ಯ ಪ್ರಶಸ್ತಿ ವಿಜೇತ ಮೈಸೂರಿನ ಜಿ.ಟಿ.ನಾರಾಯಣ ರಾಯರನ್ನು ಜನಶಕ್ತಿ ಭೇಟಿ ಮಾಡಿತು.

ಜನಶಕ್ತಿ: ಪ್ರಕೃತಿಯು ಬಹುತೇಕ ವಿಜ್ಞಾನಕ್ಕೆ ಸಿಲುಕಿದ್ದರೂ ಜನರು ಮೌಢ್ಯಕ್ಕೆ ಒಳಗಾಗುತ್ತಿರುವುದು ಏಕೆ?

ಜಿಟಿಎನ್: ಜನರು ತಾವು ಅನುಭವಿಸುತ್ತಿರುವ ಸಂಕಷ್ಟಗಳ ಪರಿಹಾರಕ್ಕೆ ವೈಯಕ್ತಿಕ ನೆಲೆಯಲ್ಲಿ ವಿಫಲರಾದಾಗ ಮೌಢ್ಯಕ್ಕೆ ಒಳಗಾಗುತ್ತಾರೆ. ತಮ್ಮ ಕಷ್ಟಗಳ ನಿವಾರಣೆಗೆ ಜ್ಯೋತಿಷ್ಯವನ್ನು ಅವಲಂಬಿಸುತ್ತಾರೆ. ಗ್ರಹಗತಿಗಳ ಕಾರಣವಾಗಿ ಹೀಗಾಯಿತು ಎಂದು ಹೇಳುವ ಜಾಣ ಜ್ಯೋತಿಷಿ ಪರಿಹಾರ ಕೇಳಿ ತನ್ನ ಬಳಿ ಬರುವವರನ್ನು ಶಬ್ದಾಡಂಬರದಲ್ಲಿ ಮೂರ್ಖರನ್ನಾಗಿಸಿ ಹಣ ಸುಲಿಯುತ್ತಾನೆ. ಫಲ ಜ್ಯೋತಿಷ್ಯ ಆಧುನಿಕ ಸಮಾಜದಲ್ಲಿ ವ್ಯಾಪಕ ಪ್ರಸಾರ ಪಡೆದಿದೆ. ಫಲ ಜ್ಯೋತಿಷಿಗಳು ಒದಗಿಸುವ ಯಾದಿ, ಭವಿಷ್ಯವಾಣಿ ಮತ್ತು ಜಾತಕಗಳನ್ನು ಸಮೂಹ ಮಾಧ್ಯಮಗಳು, ಪ್ರಶಂಸಾರ್ಹವಾದ ದೈನಿಕಗಳು, ಸಾಪ್ತಾಹಿಕಗಳು ಹಾಗೂ ಪುಸ್ತಕ ಪ್ರಕಾಶನಗಳು ಯಾವುದೇ ತೆರನಾದ ವಿಮರ್ಶೆಗೆ ಒಳಪಡಿಸದೆ ಸತತವಾಗಿ ಪ್ರಕಟಿಸುತ್ತಿರುವುದು ಚಿಂತೆಯ ವಿಷಯವಾಗಿದೆ. ಇದರ ದುಷ್ಟ ಉಪೋತ್ಪನ್ನವಾಗಿ ವಿಚಾರಹೀನತೆ ಮತ್ತು ಅಂಧಶ್ರದ್ಧೆ ಪ್ರಬಲಿಸುವುದು ಖಾತ್ರಿ. ಅತಿ ಸಂಗ್ರಹ ಬುದ್ಧಿಯ ಶೋಷಕ ವರ್ಗ ತನ್ನ ಅನೈತಿಕತೆ, ಪಾಪಪ್ರಜ್ಞೆಯಿಂದ ಪಲಾಯನವಾದದ ಮಾರ್ಗವಾಗಿ ಇದನ್ನು ಆಯ್ದುಕೊಳ್ಳುತ್ತಾರೆ.



ಗುರುಶಾಂತ್ ಅವರೊಂದಿಗೆ ಜಿಟಿಎನ್

ಜನಶಕ್ತಿ: ಫಲ ಜ್ಯೋತಿಷ್ಯ ಇಂದು ರಾಜಕೀಯವಾಗಿ ಸಾಂಸ್ಥೀಕರಣಗೊಳ್ಳುತ್ತಿರುವ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಜಿಟಿಎನ್: ಇದು ಅತ್ಯಂತ ಆತಂಕಕಾರಿಯಾದ ಸಂಗತಿ. ಇತ್ತೀಚೆಗೆ ಯಡಿಯೂರಪ್ಪ ಮುಖ್ಯಮಂತ್ರಿಯಾಗದೇ ಹೋದಾಗ ಕನ್ನಡದ ಪ್ರಖ್ಯಾತ ಟಿ.ವಿ.ಚಾನೆಲ್ ವರದಿಗಾರರೊಬ್ಬರು ನನ್ನ ಬಳಿ ಬಂದು ನೋಡಿ ಜ್ಯೋತಿಷ್ಯ ಸುಳ್ಳಾಯಿತು ಎಂದರು. ಹಾಗಿದ್ದರೆ ಒಂದು ವೇಳೆ ಮುಖ್ಯಮಂತ್ರಿಯಾಗಿ ಮುಂದುವರೆದಿದ್ದರೆ ಜ್ಯೋತಿಷ್ಯ ನಿಜವಾಯಿತು ಎನ್ನುತ್ತಿದ್ದಿರಾ? ಎಂದು ನಾನು ಪ್ರಶ್ನಿಸಿದೆ.

ಫಲ ಜ್ಯೋತಿಷ್ಯವೆಂದರೆ ಹಳೆಯ ಕಡತಗಳು, ಋಷಿವಾಣಿಗಳು, ಫಲ ಜ್ಯೋತಿಷಿಯ ದೈವಿಕ ಸ್ಫೂರ್ತಿ ಮುಂತಾದ ಜ್ಞಾತೃನಿಷ್ಠ (Subjective) ಸಂಗತಿಗಳನ್ನು ಯಥೋಚಿತವಾಗಿ ಓಬೀರಾಯನ ಕಾಲದ ವೈಜ್ಞಾನಿಕ ಅಂಶಗಳಿಗೆ ನಿಗೂಢವಾಗಿ ಬೆಸೆದು ತಯಾರಿಸಿದ ಮಾದಕ ಮೋಹಕ ಮಿಥ್ಯಾಪೇಯ! ಇವರ ತ್ರಾಣ ಇರುವುದು ವ್ಯಕ್ತಿಯ, ಗಿರಾಕಿಯ ಅಥವಾ ಕೊಳ್ಳೆಯ ಮಾನಸಿಕ ದೌರ್ಬಲ್ಯದಲ್ಲಿ ಮತ್ತು ಫಲ ಜ್ಯೋತಿಷಿಯ ಪವಾಡ ಸದೃಶ ಕಲ್ಪನಾ ವಿಹಾರದಲ್ಲಿ. ಸರಳವಾಗಿ ಹೇಳುವುದಾದರೆ 'ಧವಳ ಮುಗ್ಧತೆಯನ್ನು ವಂಚಿಸುವ ಕರಾಳ ಕಾಪಟ್ಯ' ವಿದು.

ಆಕಾಶಕಾಯಗಳ ಬಗ್ಗೆ ಅಜ್ಞಾನ, ಅತಿಶಯ ಭೋಗ ಲಾಲಸೆ, ವೈಚಾರಿಕ ಚಿಂತನೆಯ ಅಭಾವ, ಹಣ ಸುರಿದು ಏನನ್ನೂ ಪಡೆಯಬಹುದು ಅಥವಾ ಸರಿಪಡಿಸಬಹುದು ಎಂಬ ಭ್ರಮೆ ಫಲ ಜ್ಯೋತಿಷ್ಯದ ವಿಸ್ತಾರಕ್ಕೆ ಕಾರಣವಾಗಿವೆ. ಹೆಸರಿನ ಅಕ್ಷರ ಬದಲಾಯಿಸಿದರೆ ಪದವಿ ಪ್ರಾಪ್ತಿಯಾಗುತ್ತದೆ ಎಂದು ನಂಬುವ ಮುಖ್ಯಮಂತ್ರಿಗಳಿದ್ದ ರಾಜ್ಯವಿದು. ನನ್ನದೇ ಕವನದ ಈ ನಾಲ್ಕು ಸಾಲುಗಳು ಈಗ ನಡೆದಿರುವ ವಿದ್ಯಮಾನಕ್ಕೆ ಸಂದರ್ಭೋಚಿತವಾಗಿದೆ ಎಂದು ಭಾವಿಸುತ್ತೇನೆ.

ವಾಸ್ತವದ ನೈಜತೆಗೆ ಕುರುಡಾದ ಮೂರ್ಖರಿಗೆ
ಉತ್ತರ ಕುಮಾರ ಗೋತ್ರದ ನುಡಿ ಕನಸಿಗರಿಗೆ
ಸತ್ಯವನ್ನೆದುರಿಸುವ ಕೆಚ್ಚಿರದ ಹೇಡಿಗಳಿ
ಗುತ್ತಮ ಶ್ರೀರಕ್ಷೆ ಜಾತಕವೂ ಅತ್ರಿಸೂನು

ಜನಶಕ್ತಿ: ಫಲ ಜ್ಯೋತಿಷ್ಯ ಹಾಗೂ ವಿಜ್ಞಾನದ ಮಧ್ಯೆ ಜರುಗುತ್ತಿರುವ ಸಂಘರ್ಷದ ಕುರಿತು ಹೇಳಿ?

ಜಿಟಿಎನ್: ಸಾಧಾರಣವಾಗಿ ಧರ್ಮ ಮತ್ತು ಪ್ರಭುತ್ವ ಒಂದಾಗಿ ವಿಜ್ಞಾನವನ್ನು ತೊತ್ತಾಗಿ ದುಡಿಸಿಕೊಂಡು ಜನ ಜೀವನದ ಮೇಲೆ ನಿರಂಕುಶಾಧಿಕಾರ ಹೇರುತ್ತಾ ವಿಜೃಂಭಿಸಿರುವುದೇ ವಾಡಿಕೆ. ಭಾರತದ ಇಂದಿನ ಸ್ಥಿತಿಗತಿಗಳನ್ನು ವಿವೇಚಿಸಿದರೆ ಕಾಣುವುದೇನು? ಒಂದೋ ಧರ್ಮದ ಹೆಸರಿನಲ್ಲಿ ಪ್ರಭುತ್ವ, ಇಲ್ಲವೇ ಪ್ರಭುತ್ವದ ಹಿರಿತನದಲ್ಲಿ ಧರ್ಮ ಜನಜೀವನವನ್ನು ಶೋಷಿಸುತ್ತಿರುವ ದಾರುಣದೃಶ್ಯ. ಉಭಯ ಸಂದರ್ಭಗಳಲ್ಲೂ ವಿಜ್ಞಾನದ ಘೋರ ದುರುಪಯೋಗ ಪ್ರಭುತ್ವದ ನಿರಂಕುಶತೆಗೆ ಧರ್ಮದ ಅಮಲು ಅಥವಾ ಧರ್ಮದ ವ್ಯಾಪಕತೆಗೆ ಪ್ರಭುತ್ವದ ಡೌಲು ಬೆರೆತಾಗ ಬೇರೇನು ತಾನೇ ಸಾಧ್ಯ?

ಧರ್ಮವನ್ನು ಅಪಭ್ರಂಶಗೊಳಿಸಿದ ಉದಾರಹಣೆಗಳೇ ಜಾಸ್ತಿ. ಪ್ರಕೃತಿಯೊಡನೆ ಮನುಷ್ಯ ಸಹಜ ಸಂವಾದವೇ ಧರ್ಮ. ನೈತಿಕತೆಯನ್ನು ಬೋಧಿಸುವುದೇ ಧರ್ಮ. ಆದರೆ ಮತ ಧರ್ಮಗಳನ್ನು ಧರ್ಮವೆಂದು ಪ್ರತಿಪಾದನೆ ಮಾಡಲಾಗುತ್ತಿರುವುದು ಖಂಡನೀಯ.

ವೈಜ್ಞಾನಿಕವಾಗಿ ಸಮರ್ಥಿಸಲ್ಪಡುವ ಆಕಾಶಕಾಯಗಳು, ಅಂತರಿಕ್ಷ, ನಕ್ಷತ್ರ ಪುಂಜಗಳ ಇಡೀ ಸಮುಚ್ಚಯವು ಫಲ ಜ್ಯೋತಿಷ್ಯದಲ್ಲಿ ಮನುಷ್ಯನ ಮೇಲೆ ವಿಶೇಷ ಪ್ರಭಾವ ಬೀರುವ ನಾಯಕನ, ಖಳನಾಯಕನ ಪಾತ್ರಧಾರಿಗಳಾಗಿ ಬಳಕೆಯಾಗುತ್ತವೆ. ವಿಜ್ಞಾನವು ಇಂದು ಸೂರ್ಯ ಕೇಂದ್ರವಾದವನ್ನು ನಿಖರಗೊಳಿಸಿದ್ದರೆ, ಫಲ ಜ್ಯೋತಿಷ್ಯವು ಹುಟ್ಟಿ ಬೆಳೆದದ್ದೇ ಅವಾಸ್ತವವಾದ ಭೂಮಿ ಕೇಂದ್ರವಾದವನ್ನು ಪ್ರತಿಪಾದಿಸುವ ಫಲ ಜ್ಯೋತಿಷ್ಯ ಅದು ಹೇಗೆ ಸತ್ಯವಾಗಲು ಸಾಧ್ಯ?

ಧರ್ಮ ಮತ್ತು ವಿಜ್ಞಾನದ ಮಧ್ಯೆ ಜರುಗಿದ ಸಂಘರ್ಷಪೂರ್ಣ ಇತಿಹಾಸದಲ್ಲಿ ಗೆಲಿಲಿಯೋ, ಕೋಪರ್ನಿಕಸ್, ಕೇಪ್ಲರ್ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿದರು. ಇಗರ್ಜಿಗಳು ನಂಬಿದ್ದ ಭೂಮಿ ಕೇಂದ್ರವಾದವನ್ನು ನುಚ್ಚು ನೂರು ಮಾಡಿದ ಗೆಲಿಲಿಯೋ ಧರ್ಮ ದ್ರೋಹದ ಗುರುತರ ಆಪಾದನೆಗೆ ಒಳಗಾಗಿ ತಪ್ಪೊಪ್ಪಿಗೆ ಪತ್ರವನ್ನು ಬರೆದುಕೊಟ್ಟ. ಜನಜನಿತ ಹೇಳಿಕೆಯ ಪ್ರಕಾರ ತಪ್ಪೊಪ್ಪಿಗೆ ನಾಟಕ ಮುಗಿದೊಡನೆ ಎದ್ದು ನಿಂತ ಆತ ನೆಲವನ್ನು ತುಳಿದು 'ಆದರೂ ಇದು ಚಲಿಸುತ್ತದೆ' ಎಂದನಂತೆ. ಧರ್ಮಶಾಸ್ತ್ರ ಪ್ರಣೀತ ಜಗತ್ತು ಹಾಗೂ ವೀಕ್ಷಣಲಭ್ಯ ಜಗತ್ತು ಇವುಗಳು ತಾಳೆಯಾಗದಾದಾಗ ಎರಡನೇಯದೇ ಪ್ರಗತಿಯಾಗಿ ಆಯ್ಕೆಯಾಗಬೇಕು. ವೀಕ್ಷಣಲಭ್ಯ ಜಗತ್ತನ್ನು ಆಯ್ಕೆ ಮಾಡಿಕೊಂಡವ ತಾನು ಕಂಡ ಸತ್ಯದ ಸಿದ್ಧಿಗಾಗಿ ಜೀವವನ್ನೆ ಪಣಕ್ಕಿಡುತ್ತಾನೆ. ಸಾಕ್ರೆಟಿಸ್ ವಿಷ ಪ್ರಾಶನ, ಆರ್ಕಿಮಿಡಿಸ್ ಶಿರಚ್ಛೇದನ, ಬ್ರೂನೋ ಜೀವಂತ ದಹನ ಇದಕ್ಕೆ ದೃಷ್ಟಾಂತಗಳಾಗಿವೆ.

ಖಗೋಳ, ಭೌತ, ಗಣಿತ ವಿಜ್ಞಾನಗಳ ಮಧುರ ಸಂಲಗ್ನತೆ ಸಾಧಿಸಿ ಅಲ್ಲಿಯ ತನಕ ವಿವರಣಾತ್ಮಕ ಶಾಸ್ತ್ರವಾಗಿದ್ದ ಖಗೋಳ ವಿಜ್ಞಾನವನ್ನು ನಿಷ್ಕೃಷ್ಟ ವಿಜ್ಞಾನಿಗಳ ಭದ್ರ ಪಂಚಾಂಗದ ಮೇಲೆ ಸ್ಥಿರವಾಗಿ ಸಂಸ್ಥಾಪಿಸಿದ ಕೇಪ್ಲರ್ ಭವಿಷ್ಯದ ಮಹಾ ಸಾಧನೆಗಳಿಗೆ ನಾಂದಿ ಹಾಕಿದ. ಖಗೋಳ ಶಾಸ್ತ್ರದಿಂದ ಹೊಟ್ಟೆ ತುಂಬದು ಎಂದಾಗ ಕೇಪ್ಲರ್ ಅದರ ಅನವರಸ ಪುತ್ರಿ (illegitimate daughter) ಎಂದು ಕರೆದ ಜ್ಯೋತಿಷ್ಯ ಶಾಸ್ತ್ರವನ್ನು ಆಯ್ದುಕೊಳ್ಳುತ್ತಾನೆ.



ಲ.ಜಗನ್ನಾಥ್, ಎಸ್.ವೈ.ಗುರುಶಾಂತ್, ಜಿ.ಟಿ.ಎನ್., ವಿಜಯಕುಮಾರ್

ಪ್ರಶ್ನಿಸುವ ಪ್ರವೃತ್ತಿ ಬೆಳೆದರೇನೇ ಮೌಢ್ಯದ ತಿಳಿವು ವಿಜ್ಞಾನದ ಗೆಲುವು ಸಾಧ್ಯ. ರುಡ್‌ಯಾರ್ಡ್ ಕಿಪ್ಲಿಂಗ್ ಒಂದೆಡೆ ಹೇಳುತ್ತಾನೆ.

ಶ್ರದ್ಧೆಯಿಂ ದುಡಿವಾರು ಸಹ ಚರರನಿಟ್ಟಿಹೆನು
ನನಗೆ ತಿಳಿದಿಹುದೆಲ್ಲ ಕಲಿಸಿದವರೇ ಅವರು
ಅವರ ಪೆಸರೇನೆಂದು ಪೇಳಲೆ?
ಏನು? ಏಕೆ? ಎಂದು? ಹೇಗೆ? ಎಲ್ಲಿ? ಯಾರು?

ವಿಜ್ಞಾನವೇ ಜೀವನದರ್ಶನವಾಗಬೇಕು.



ಕಲೆಗಾಗಿ ಕಲೆಯೋ ? ಜನತೆಗಾಗಿ ಕಲೆಯೋ ?

"ಕಲೆಗಾಗಿ ಕಲೆ" ಎಂದು ನಂಬಿರುವ "ಆರ್ಟಿಸ್ಟ್ ಫೌಂಡೇಷನ್ ಫಾರ್ ಆರ್ಟ್ಸ್" ಎಂಬ ಸಾಂಸ್ಕೃತಿಕ ಸಮೂಹ ಕಳೆದ ಐದು ವರ್ಷಗಳಿಂದ 'ಬೆಂಗಳೂರು ಹಬ್ಬ'ವನ್ನು ನಡೆಸುತ್ತಿದೆ. ಮೇಲ್ವರ್ಗದ ಸಾಂಸ್ಕೃತಿಕ ಚಟುವಟಿಕೆಗಳೇ ಸಂಸ್ಕೃತಿಯ ಪ್ರತೀಕ. ಉಳಿದ ಜನರ ಸಾಂಸ್ಕೃತಿಕ ಚಟುವಟಿಕೆಗಳು ನೋಡಲು ಯೋಗ್ಯವಲ್ಲ ಎನ್ನುವ ಈ ಗುಂಪು ಮೊದಲ ವರ್ಷ ನಡೆಸಿದ ಕಾರ್ಯಕ್ರಮಗಳು, ನಗರದ ಕಲಾವಿದರು, ಬರಹಗಾರರು ಮತ್ತು ಸಾಂಸ್ಕೃತಿಕ ತಂಡಗಳಿಂದ ತೀವ್ರ ಟೀಕೆಗೆ ಒಳಗಾಗಿತ್ತು. ಪ್ರತಿಭಟನೆಗಳೂ ನಡೆದವು. ವೈದಿಕ ಸಂಸ್ಕೃತಿಯೇ ಭಾರತದ ಸಂಸ್ಕೃತಿ ಎಂದು ಮೇಲಿಂದ ಅದನ್ನು ಹೇರುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇವೆ. ಈ 'ಹಬ್ಬ' ಅಂತಹ ಒಂದು ಪ್ರಯತ್ನವಾಗಿ ಪ್ರಾರಂಭವಾಯಿತು ಎಂದರೆ ತಪ್ಪಾಗಲಾರದು.

"ಕಲೆಗಾಗಿ ಕಲೆ" ಯೋ ಅಥವಾ "ಜನರಿಗಾಗಿ ಕಲೆ"ಯೇ ಎಂಬ ಜಿಜ್ಞಾಸೆ ಬಹಳ ಹಿಂದಿನಿಂದಲೂ ನಡೆಯುತ್ತಿದೆ. ನನ್ನ ಖುಷಿಗಾಗಿ ಬರೆಯುತ್ತೇನೆ, ನನ್ನ ಖುಷಿಗಾಗಿ ಚಿತ್ರ ಬರೆಯುತ್ತೇನೆ, ಎನ್ನುವ ಕೆಲವರು ಅವರ ಕೃತಿಗಳನ್ನು ಮುದ್ರಿಸಲು ಯಾತಕ್ಕೆ ಹಾತೊರೆಯುತ್ತಾರೆ ಎಂದು ಅರ್ಥವಾಗುವುದಿಲ್ಲ. ಅವರ ಕಲಾಕೃತಿ ಅಥವಾ ಸಾಹಿತ್ಯ ಕೃತಿಗಳನ್ನು ಅವರ ಮನೆಯ ಕತ್ತಲೆ ಕೋಣೆಯಲ್ಲಿ ಹಾಗೆಯೇ ಸುರಕ್ಷಿತವಾಗಿ ಇಟ್ಟಿದ್ದರೆ ವೀಕ್ಷಿಸುವ ಅಥವಾ ಓದುವ ಶ್ರಮ ಇರುತ್ತಿರಲಿಲ್ಲ ನಮಗೆ.

ಬೆಂಗಳೂರು ನಗರದೊಂದಿಗೆ ಬೆಸೆತುಕೊಂಡಿರುವ ಸಾಂಸ್ಕೃತಿಕ ಹಬ್ಬಗಳಾದ 'ಕಡಲೆಕಾಯಿ ಪರಿಷೆ' ಯಾಗಲೀ ಅಥವಾ 'ಕರಗ'ವಾಗಲಿ ಈ ಬೆಂಗಳೂರು ಹಬ್ಬದಲ್ಲಿ ಸ್ಥಾನ ಪಡೆಯುವುದೇ ಇಲ್ಲ. ಬೆಂಗಳೂರು ನಗರದ ಸ್ಥಾಪಕ ಕೆಂಪೇಗೌಡರ ಬಗ್ಗೆಯಾಗಲಿ ಆ ನಂತರದ ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಐತಿಹ್ಯವಾಗಲಿ ಈ ಹಬ್ಬದ ವಸ್ತುವಾಗುವುದೇ ಇಲ್ಲ. ದಶಕಗಳಿಂದ ವಿಜ್ಞಾನ ಸಂಸ್ಥೆಗಳು ನಾಡಿಗೆ ಸಲ್ಲಿಸಿದ ಅಮೂಲ್ಯ ಕೊಡುಗೆಗಳ ಬಗ್ಗೆ ಚರಣವೇ ಇಲ್ಲ.

ಈ ಹಬ್ಬಕ್ಕೆ ರಾಜ್ಯ ಸರ್ಕಾರದ ಲಕ್ಷಾಂತರ ರೂಪಾಯಿಗಳನ್ನು ಧನಸಹಾಯ ರೂಪದಲ್ಲಿ ಸುರಿಯುತ್ತಿರುವುದು ಯಾವ ಸಂಸ್ಕೃತಿಯ ಉದ್ಧಾರಕ್ಕೆ ಎಂದು ಜನ ಕೇಳಬೇಕಲ್ಲವೇ?





ನಮ್ಮ ಧರ್ಮ

ಬುದ್ಧನ ಸಮತಾ ಸಮಾಜದಲ್ಲಿಯೂ
ಇರಲಿಲ್ಲ, ಅಲ್ಲಿಯೂ ಕೂಡಾ
ಹೀನಾಯಾನಿ ಮಹಾಯಾನಿಗಳು
ಜೈನರಲ್ಲಿ ದಿಗಂಬರ ಶ್ವೇತಾಂಬರರು

ಎಲ್ಲಧರ್ಮಗಳ ಒಳಮರ್ಮ ತಿಳಿದೆ
ಮನುಷ್ಯತ್ವದ ಕಡೆ ನಾ ನಡೆದೆ,
ಮನುಷ್ಯರನ್ನು ಮುನಷ್ಯರಾಗಿ ಕಾಣದ
ಧರ್ಮ, ಯಾವ ಧರ್ಮ?
ಅವುಗಳಲ್ಲಿರುವುದೆಲ್ಲಾ ಬರೀ ಕರ್ಮ

ಧರ್ಮಗಳ ಒಳಹೊಕ್ಕು
ನಾ ನೋಡಿದೆ. ಅಲ್ಲೆಲ್ಲೂ
ಕಾಣಲಿಲ್ಲ ಮುನುಕುಲದ ಕಾಳಜಿ

ಒಂದರಲ್ಲಿ ಕಂಡರು
ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರು
ಮತ್ತೊಂದರಲ್ಲಿ ಶಿಯಾ ಸುನ್ನಿಗಳು
ಮೊಗದೊಂದರಲ್ಲಿ ಕ್ಯಾಥೋಲಿಕ್ ಪ್ರಾಟೆಸ್ಟಂಟರು

ನನ್ನದೊಂದಿದೆ ದರ್ಮ
ಇರುವುದೆಲ್ಲವ ಹಂಚಿಕೊಂಡು
ತಿನ್ನುವುದೇ ಅದರ ಮರ್ಮ
ಕಾಯಕವೇ ಅದರ ಸೂತ್ರ
ಸಮಾನತೆಯಾ ಮೂಲ ಮಂತ್ರ

– ಮುತ್ತು(ಶಕು) ಹಿರೇಮನಿ

ಎರಡು ನಾಟಕಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಬೆಂಗಳೂರು ಹಬ್ಬ'ದ ಸಂದರ್ಭದಲ್ಲಿ ಡಿಸೆಂಬರ್ ಐದರ ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಎರಡು ನಾಟಕಗಳನ್ನು ಪ್ರಾಯೋಜಿಸಿತ್ತು. ಮೊದಲನೆಯದು ಮೈಸೂರಿನ 'ಪರಿವರ್ತನ' ತಂಡದ 'ಎಂದೆಂದಿಗೂ ಮುಗಿಯದ ಕಥೆ'. ಎರಡನೆಯದು ಧಾರವಾಡ 'ಸಮುದಾಯ'ದ 'ದಿಶಾಂತರ'.


ಯು.ಆರ್.ಅನಂತಮೂರ್ತಿಯವರ ಸಾಹಿತ್ಯ ಕೃತಿಗಳನ್ನಾಧರಿಸಿ ಹೆಣೆದ 'ಕೋಲಾಜ್' ಮೊದಲನೆ ನಾಟಕದ ಕಥಾವಸ್ತು. ಉತ್ತಮ ನಿರ್ದೇಶಕ ಎಂದು ಹೆಸರು ಮಾಡಿರುವ ಮೈಸೂರು 'ಸಮುದಾಯ' ದ ಸ್ಥಾಪಕ ಸದಸ್ಯ ಎಸ್.ಆರ್.ರಮೇಶ್ ಈ ನಾಟಕವನ್ನು ನಿರ್ದೇಶಿಸಿದ್ದಾರೆ. ಅವರ ಸಂಸ್ಕಾರ, ಭಾರತೀಪುರ, ಅವಸ್ಥೆ ಮುಂತಾದ ಕಾದಂಬರಿಗಳಲ್ಲಿ ಅನಂತಮೂರ್ತಿಯವರು ತಮ್ಮ ಒಳತೋಟಿಯನ್ನು ಹೊರ ಜಗತ್ತಿಗೆ ತೆರೆದಿಟ್ಟ ವಿಷಯವನ್ನು ದೃಶ್ಯರೂಪದಲ್ಲಿ ತೋರಿಸಿರುವುದೇ ಈ ನಾಟಕ ಜೀವಾಳ. ಮಾರ್ಕ್ಸ್‌ವಾದ, ಲೋಹಿಯಾವಾದದಿಂದ ಪ್ರಾರಂಭವಾಗಿ ಬ್ರಾಹ್ಮಣ ಸಮುದಾಯದಲ್ಲಿ ಬೇರೂರಿರುವ ಕೊಳಕು ಅಂಧಶ್ರದ್ಧೆಗಳು, ಅಮಾನವೀಯ ಸಂಪ್ರದಾಯಗಳು, ಇಂಗ್ಲೆಂಡಿನಲ್ಲಿದ್ದಾಗಿನ ಅನಂತಮೂರ್ತಿ ಯವರ ಯೌವ್ವನದ ಮಾನಸಿಕ ತಾಕಲಾಟಗಳು ಮತ್ತು ಕೊನೆಯಲ್ಲಿ ಮೈಸೂರಿನ ಸಮೀಪದ ಕಮಲಾಪುರದಲ್ಲಿ ಉಷ್ಣಸ್ಥಾವರದ ಸ್ಥಾಪನೆಯ ವಿಷಯಗಳು ನಾಟಕದಲ್ಲಿ ಬರುತ್ತವೆ. ಒಮ್ಮೆ ಅನಂತಮೂರ್ತಿಯಾಗಿ ಮಗದೊಮ್ಮೆ ಸಾಹಿತ್ಯ ಕೃತಿಯ ಪಾತ್ರಗಳಾಗಿ ತಮ್ಮ ಅಮೋಘ ಅಭಿನಯದಿಂದ 'ಸಮುದಾಯ'ದ ಜಯರಾಮ್ ತಾತಾಚಾರ್ ನೋಡುಗರ ಮನಸ್ಸನ್ನು ಗೆಲ್ಲುತ್ತಾರೆ. ಉಳಿದ ಮಾತ್ರಗಳು ನಾಟಕದ ಒಟ್ಟಾರೆ ವಸ್ತುವಿಗೆ ಪೂರಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿವೆ. ಸನ್ನಿವೇಶಕ್ಕೆ ತಕ್ಕ ಹಾಗೆ ಬರುತ್ತಿದ್ದ ಹಿನ್ನೆಲೆಯ ಮಧುರ ಸಂಗೀತ ಕೂಡ ನಾಟಕವನ್ನು ಮನೋಜ್ಞವಾಗಿ ತಲುಪಿಸಲು ಹೆಚ್ಚಿನ ಸಹಕಾರಿಯಾಯಿತು. ಒಂದೂವರೆ ಗಂಟೆ ಹೇಗೆ ಕಳೆಯಿತು ಎಂದು ಗೊತ್ತೇ ಆಗದ ರೀತಿಯಲ್ಲಿ ನೋಡುಗರನ್ನು ಅ… ಹಿಡಿದಿಟ್ಟಿತ್ತು. ಆದರೆ ಕೊನೆಯಲ್ಲಿ, ಎಲ್ಲಾ ಮುಗಿ… ಮೇಲೆ ನಾಟಕ ಒಟ್ಟಾರೆಯಾಗಿ ಏನು ಹೇಳ… ಎಂದು ತಲೆ ಕೆರೆದುಕೊಂಡರೆ, ಗೊಂದಲಮ…

ಹೊಗೆಸೊಪ್ಪಿನ ಗಿರಣಿಯಲ್ಲಿ ದುಡಿಯು… ಕಾರ್ಮಿಕರ ಹಾಗೂ ಹೊಗೆ ಸೊಪ್ಪು ಬೆಳೆಯು… ರೈತರ ಬವಣೆಯನ್ನು ನಿರೂಪಿಸುವ ನಾಟ… 'ದಿಗಾಂತರ'. ನಾಟಕಕಾರ ಡಿ.ಎನ್.ಚೌ… ವಿರಚಿತ ಈ ಕೃತಿಯು ಉದ್ದೇ… ಮಹೋನ್ನತವಾಗಿದ್ದರೂ, ಅದನ್ನು ನೋಡುಗ… ಪರಿಣಾಮಕಾರಿಯಾಗಿ ತಲುಪಿಸುವ… ಧಾರವಾಡದ 'ಸಮುದಾಯ' ಗೆಳೆಯರು ಯಾಕೆ… ಹಿಂದೆ ಉಳಿದರು.

ಕನ್ನಡ ರಂಗಭೂಮಿಯ ಉತ್ತಮ ರ… ನಿರ್ದೇಶಕ ಎಂದು ಜನಜನಿತರಾಗಿರುವ … ಪ್ರಮೋದ್ ಶಿಗ್ಗಾಂವ್ ನಿರ್ದೇಶನ ಮಾಡಿದ … ನಾಟಕ ಪ್ರದರ್ಶಕರಿಗೆ ಹೇಗೆ ಸೋತಿತು ಎಂಬು… ಪ್ರಶ್ನೆ. ತಂಡವು ತನ್ನ ಸಾಮೂಹಿಕ ಶ್ರ… ಹಾಕುವಲ್ಲಿ ಅಥವಾ ಸಮನ್ವಯತೆ ಸಾಧಿಸು… ಅಥವಾ ಕಲಾವಿದರು ವೈಯಕ್ತಿಕವಾಗಿ ನಾಟ… ವಸ್ತುವನ್ನು ಪರಿಣಾಮಕಾರಿಯಾಗಿ ಒಪ್ಪಿಸು… ವಿಫಲರಾದರೆ? ಅಥವಾ ನಾಟಕಕಾರರು ರಚಿ… ಕೃತಿಯ ಜಾಳುಜಾಳಾದ ಚೌಕಟ್ಟೆ ಈ ವಿಫಲ… ಕಾರಣವೇ? ಪ್ರತಿಯೊಂದು ದೃಶ್ಯವ… ಕಟ್ಟಿಕೊಡುವಲ್ಲಿ ನಿರ್ದೇಶಕರು ಮಾಡಿದ ಪ್ರಯ… ಎದ್ದು ಕಾಣುತ್ತಿತ್ತು. ಆದರೆ ಕಲಾವಿದರಿಂದ ಅ… ಸಂಪೂರ್ಣ ಪ್ರತಿಭೆಯನ್ನು ಹೊರ ತೆಗೆಯು… ನಿರ್ದೇಶಕರು ಹಾಕಿದ ಶ್ರಮ ಸಾಲಲಿಲ್ಲವೋ…

ಇಷ್ಟಾಗಿಯೂ ಧಾರವಾಡದಂಥಾ ಗ್ರಾಮೀ… ನಗರದಲ್ಲಿ ಇಂತಹ ದೊಡ್ಡ ನಾಟಕವೊಂದ… ಹೊರತಂದ ಸಮುದಾಯ ತಂಡದ ಧೈರ್ಯ ಮ… ದಿಟ್ಟತನವನ್ನು ಮೆಚ್ಚಲೇಬೇಕು… ರಂಗಭೂಮಿಯನ್ನು ಇನ್ನೂ ಗಂಭೀರವಾ… ಪರಿಗಣಿಸಿ, ಪ್ರತಿಯೊಂದು ಪ್ರದರ್ಶನವ… ಒಂದು ಕಲಾಕೃತಿಯಾಗಿ ಹೊರತರುವ… ಧಾರವಾಡದ ಗೆಳೆಯರು ಮುಂದಿನ ದಿನಗ… ಶ್ರಮ ಹಾಕುತ್ತಾರೆ ಎಂಬ ಭರವಸೆ ಇದೆ.

ವಿದೇಶದ 'ಸ್ಪಾರ್ಟಕಸ್' ನಾಟಕವೊಂದರ ದೃಶ್ಯ



ರಂಗಕೃತಿಯಾಗಿ ನಿರಂಜನರ ಮೃತ್ಯುಂಜಯ

ಕನ್ನಡ ಸಾಹಿತ್ಯ ಲೋಕದ ಪ್ರಗತಿಪರ ಕಾದಂಬರಿಕಾರರೆಂದೇ ಪರಿಚಿತರಾಗಿದ್ದ ನಿರಂಜನರ ಅನೇಕ ಕೃತಿಗಳಲ್ಲಿ 'ಮೃತ್ಯುಂಜಯ' ಒಂದು. ಆಫ್ರಿಕಾ ಖಂಡದಲ್ಲಿ ಸಾವಿರಾರು ವರ್ಷಗಳ ಗುಲಾಮರ ಬಂಡಾಯವೇ ಈ ಕೃತಿಯ ವಸ್ತು. ಭೂಮಾಲಿಕರ ಮತ್ತು ಪಾಳೆಯಗಾರರ ಸುಲಿಗೆಗೆ, ನಿರಂತರವಾಗಿ ಒಳಗಾಗಿದ್ದ ಸಣ್ಣಪುಟ್ಟ ರೈತರು ಬಂಡಾಯದ ಪತಾಕೆಯನ್ನು ಹಾರಿಸಿದ ರೋಮಾಂಚಕಾರಿ ಕತೆಯನ್ನು ನಿರಂಜನರು ಮನಸ್ಸಿಗೆ ತಟ್ಟುವಂತೆ ಹೇಳಿದ್ದಾರೆ. ಈ ಕತೆಯನ್ನು ಆಧರಿಸಿ ರಂಗಕೃತಿಯನ್ನು ಮತ್ತೊಬ್ಬ ಪ್ರಗತಿಶೀಲ ಸಾಹಿತಿ ಶ್ರೀ ಸಿ.ವೀರಣ್ಣನವರು ಹೊರತಂದಿದ್ದಾರೆ. ಈ 'ನಾಟಕ ವಾಚನ' ಕಾರ್ಯಕ್ರಮವನ್ನು ಡಿಸೆಂಬರ್ 4ರ ಸಂಜೆ ಬಸವನಗುಡಿ ನ್ಯಾಷನಲ್ ಕಾಲೇಜ್ ಆವರಣದಲ್ಲಿ ಸಮುದಾಯ ಬೆಂಗಳೂರು ಆಯೋಜಿಸಿ… ನಾಟಕಕಾರ ಸಿ.ವೀರಣ್ಣನವರೇ ನಾಟಕವಾ… ಮಾಡಿದ ಈ ಕಾರ್ಯಕ್ರಮಕ್ಕೆ ಆಸಕ್ತ ಕಲಾವಿ… ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು. ರಂಗ… ಉತ್ತಮವಾಗಿ ಹೊರಬಂದಿದೆ. ಬೆಂಗಳೂ… ಸಮುದಾಯವು ಈ ನಾಟಕಕೃತಿಯ… ಪ್ರದರ್ಶಿಸಲು ಸಿದ್ಧತೆ ನಡೆಸಿದೆ. ಕಳೆದ ವ… ರಾಷ್ಟ್ರೀಯ ನಾಟಕ ಶಾಲೆಯಿಂದ ಪದವಿ ಪ… ಹೊರಬಂದಿರುವ ಭರವಸೆ ಮೂಡಿಸುವ ಯು… ನಿರ್ದೇಶಕ ಶ್ರೀ ಓಂಕಾರ್ ಈ ನಾಟಕ… ನಿರ್ದೇಶಿಸಲಿದ್ದಾರೆ. ಪ್ರಾಯಶಃ ಜನವರಿ 14… 2008 ರಂದು ರಂಗಶಂಕರದಲ್ಲಿ 'ಮೃತ್ಯುಂಜ… ದೃಶ್ಯರೂಪದಲ್ಲಿ ಕನ್ನಡಿಗರನ್ನು ಮುಟ್ಟಲಿದೆ.

'ಸಮುದಾಯ ಪ್ರ…

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No. 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH